# ಅಪರಂಜಿ

**ತಿಳಿನಗೆಯ ಕಾರಂಜಿ** **ಆಗಸ್ಟ್ - 2020**




ಬಿಡಿ ಪ್ರತಿ: ರೂ.10.00

**ಸಂಪಾದಕ ಮಂಡಳಿ**

ಸಂಪಾದಕರು

ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು

ಶ್ರೀ ಬೇಲೂರು ರಾಮಮೂರ್ತಿ

ಸದಸ್ಯರು

ಶ್ರೀ ಎಚ್.ಎನ್. ಆನಂದ

ಶ್ರೀ ಎಚ್. ಗೋಪಾಲಕೃಷ್ಣ




# ಅಪರಂಜಿ

ತಿಳಿನಗೆಯ ಕಾರಂಜಿ


ಸಂಪುಟ 37

ಸಂಚಿಕೆ - 11

ಆಗಸ್ಟ್ - 2020


## ಈ ಸಂಚಿಕೆಯಲ್ಲಿ.....


| | | |
|---|---|---|
| ಅಪರಂಜಿ ಕಿಡಿ | ಪ್ರಕಾಶ್ | 2 |
| ಕಾರಂತರ ಕ್ರಿಕೆಟ್ ಕಾಮೆಂಟರಿ | ಶಿವು | 3 |
| ಕಾರ್ನ್‌ಫ್ಲೇಕ್ಸ್ ಮತ್ತು ನಾನು | ಪಾಲಹಳ್ಳಿ ವಿಶ್ವನಾಥ್ | 6 |
| ದ್ವಿಚಕ್ರ ವಾಹನ ಚಾಲನೆಯೆಂಬ.. | ಕೆ. ಎಸ್. ಸೋಮೇಶ್ವರ | 9 |
| ವಸಂತ ಹೊಸಬೆಟ್ಟು | ಸುಕೇಶವ | 12 |
| ಅಪ್ಪ ಅಂದ್ರೆ ವಿಲನ್ನಾ | ಬೇಲೂರು ರಾಮಮೂರ್ತಿ | 16 |
| ಅಜ್ಜಿ ಮತ್ತು ಆನ್ಲೈನ್ ಸ್ಕೂಲು | ಇ. ಆರ್. ರಾಮಚಂದ್ರನ್ | 22 |
| ಒಂದು ಸ್ಪರ್ಧೆ | | 25 |
| ಕೊರೊನಾ ಪೊಯಮ್ಸ್ | ತುರುವೇಕೆರೆ ಪ್ರಸಾದ್ | 26 |
| ತುಂತುರು | ದಂನಅ | 27 |
| ಬಾ, ಬಾ, ಬ್ಲಾಕ್ ಶೀಪ್ | ಸಿ. ಆರ್. ಸತ್ಯ | 28 |
| ಚೆಂಗನ ಆನ್ಲೈನ್ ಬೂಟಿ ಕೋರ್ಸ್ | ಜಿ.ವಿ. ಅರುಣ | 30 |
| ನಾಯಿ ಪಾಡು | ಹೆಚ್.ಆರ್.ಹನುಮಂತ ರಾವ್ | 33 |
| ಕೋತಿ ಕೆಲಸ.... | ರಘುನಂದನ | 37 |
| ಆದಿಯೂ ನೆಟ್ಟಿನ ಪಾಠವೂ | ಬೆಂಶ್ರೀ ರವೀಂದ್ರ | 40 |


ಮುಖಪುಟ ವ್ಯಂಗ್ಯಚಿತ್ರ ಕೃಪೆ : ವಾಟ್ಸಾಪ್
ವ್ಯಂಗ್ಯಚಿತ್ರಗಳು : ನಾಗನಾಥ್, ರಘುಪತಿ ಶೃಂಗೇರಿ, ಕೇಶವ್


ಆಡಳಿತ ಮಂಡಳಿ

ಮ್ಯಾನೇಜಿಂಗ್ ಟ್ರಸ್ಟಿ

ಶ್ರೀ ಉಲ್ಲಾಸ ರಾಯಸಂ

ಟ್ರಸ್ಟಿಗಳು

ಶ್ರೀ ಎಂ ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಎಚ್.ಎನ್. ಆನಂದ
ಶ್ರೀ ಸಿ.ಆರ್. ಸತ್ಯ
ಶ್ರೀ ಕೆ. ರವೀಂದ್ರ ರಾವ್
ಶ್ರೀ ವಿ. ಆರ್. ಭರತ್



**ಚಂದಾ ವಿವರ:**
**ಬಿಡಿ ಪ್ರತಿ: ರೂ. 10/-**
**ವಾರ್ಷಿಕ ಚಂದಾ: ರೂ. 100/-**
**ಹತ್ತು ವರ್ಷದ ಚಂದಾ: ರೂ. 750-**

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:
ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ.

*ಪ್ರಕಾಶಕರು :* ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು – 560 003. email: koravanji42@hotmail.com ದೂರವಾಣಿ: 080-23345259



*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು – 560 068. ದೂರವಾಣಿ: 080–26688488. email: belururamamurthy@gmail.com



*ಮುದ್ರಣ : ರವಿ ಗ್ರಾಫಿಕ್ಸ್ – ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್*



# ಅಪರಂಜಿ ಕಿಡಿ

**●ಪ್ರಕಾಶ್**

ಎಸ್.ಎಸ್.ಎಲ್.ಸಿ.ಪರೀಕ್ಷೆ :
ಮೇಲ್ಪಂಕ್ತಿ ಹಾಕಿದ ಮಕ್ಕಳು – ಸುದ್ದಿ

**ಮನುಜನಿಗೆ ಮಗು ತಂದೆ!!**

***

ಪದಾಧಿಕಾರಿಗಳ ಬದಲಾವಣೆ ಸಧ್ಯಕ್ಕಿಲ್ಲ – ಡಿ.ಕೆ.ಶಿ.

**ಹಸ್ತಾಂತರ ಇರದಿದ್ದರೆ ಸಾಕು!!**

***

ಆರ್ಥಿಕ ಬೆಳವಣಿಗೆಗೆ ಆದ್ಯತೆ
– ಆರ್.ಬಿ.ಐ.ನ ಶಕ್ತಿಕಾಂತ ದಾಸ್

**ಅನ್ವರ್ಥನಾಮ ಎಂದರೆ ಇದೇ!!**

***

ನಮ್ಮ ಪಕ್ಷದ ಬಗ್ಗೆ ಚಿಂತೆಯಾಗಿದೆ – ಕಪಿಲ್ ಸಿಬ್ಬಲ್

**ನಮಗೂ ಅಷ್ಟೇ!!**

***

'ಆನೆಬಲ' ಸಿನಿಮಾ ವಿಮರ್ಶೆ :
ಬಲವಿಲ್ಲದ 'ಆನೆಬಲ' – ಪತ್ರಿಕೆ

**ಕರಾಳ ಸತ್ಯ ಎಂದರೆ ಇದೇ!!**

***

ಅವಳಿ ಗರ್ಭದ ತೊಡಕುಗಳೇನು? – ಪತ್ರಿಕೆ

**ಕಂ. ಜಿ. ಸೀಟುಗಳಿಗಾಗಿ ಪರದಾಟ**

***

ಪ್ರೇಕ್ಷಕರೇ ಇಲ್ಲದ ಕ್ರಿಕೆಟ್ ಪಂದ್ಯಗಳು – ಕ್ರೀಡಾ ಸುದ್ದಿ.

**ಜನಸ್ತೋಮದ ಭಾರೀ ಕೂಗುಗಳ ರೆಕಾರ್ಡಿಂಗ್ ಹಾಕುತ್ತಾರೇನೋ ?!**

# ಕಾರಂತರ ಕ್ರಿಕೆಟ್ ಕಾಮೆಂಟರಿ

● ಶಿವು

**(ಪೂಜ್ಯ ಶ್ರೀ ಶಿವರಾಮ ಕಾರಂತರ ಬರಹದ ಶೈಲಿಯನ್ನು ಕ್ರಿಕೆಟ್ ಕಾಮೆಂಟರಿಗೆ ಕಸಿ ಮಾಡಿದರೆ ಹೇಗಿರುತ್ತದೆಂಬ ಕುತೂಹಲದಿಂದ ಬಹು ಹಿಂದೆ ಈ ಲೇಖನವನ್ನು ಬರೆದಿದ್ದೆ. ಇಂದಿನ ಬರಹಗಾರ ಬಳಗ, ಈ ಲೇಖನದಿಂದ ಪ್ರಭಾವಿತರಾಗಿ, ತಮ್ಮ ಮೆಚ್ಚುಗೆಯ ಹಿರಿಯ ಲೇಖಕರ ಶೈಲಿಯನ್ನು ಅನುಕರಿಸಿ, ಅಣಕು ಲೇಖನಗಳನ್ನು ಬರೆಯಲು, ಪ್ರಚೋದಿಸುವುದೇ ಅಲ್ಲದೆ, ಕಾರಂತರ ಶೈಲಿಯನ್ನು ಯುವ ಪೀಳಿಗೆಗೆ ಪರಿಚಯಿಸುವ ಉದ್ದೇಶದಿಂದಲೂ, ಈ ಲೇಖನವು ಈ ಸಂಚಿಕೆಯಲ್ಲಿ ಬೆಳಕು ಕಾಣುತ್ತಿದೆ)**

***

ಇಂದ್ರಲೋಕದಲ್ಲಿದ್ದ ಮಾತ್ರಕ್ಕೆ ಭೂಲೋಕದ ಚಾಳಿಗಳು ಮಾಯವಾಗುತ್ತವೆಯೇ? ಖಂಡಿತಾ ಇಲ್ಲ. ಭಾರತ ಪಾಕೀಸ್ಥಾನಗಳ ನಡುವಣ ಕ್ರಿಕೆಟ್ ಪಂದ್ಯಾವಳಿಯ ಬಿಸಿ ಇಂದ್ರಲೋಕಕ್ಕೂ ತಟ್ಟಿತಂತೆ. ಶ್ರೀರಂಗರು, ಪುಟ್ಟಸ್ವಾಮಯ್ಯನವರು, ರಾಶಿಯವರು ಹಾಗೂ ಮಾಸ್ತಿ ಇವರಿಗೆಲ್ಲಾ ಕ್ರಿಕೆಟ್ ಪಂದ್ಯ ನೋಡಬೇಕು ಇಲ್ಲ. ಕನಿಷ್ಟಪಕ್ಷ ಅದರ ವೀಕ್ಷಕ ವಿವರಣೆ ಕೇಳಬೇಕು ಎಂಬ ಒಂದು ಉತ್ಕಟೇಚ್ಛೆ ಉಂಟಾಯಿತಂತೆ. ಆದರೆ ಟೆನ್ ಸ್ಪೋರ್ಟ್ ಕರಾರಿನಿಂದ ದೂರದರ್ಶನಕ್ಕೇ ಕಷ್ಟವಾಗಿರುವಾಗ ಇಂದ್ರಲೋಕಕ್ಕೆ ಕ್ರಿಕೆಟ್ ಪ್ರಸಾರ, ಸಾಹಿತಿಗಳ ಮಾತಿನಲ್ಲಿ ಹೇಳುವುದಾದರೆ 'ಗಗನ ಕುಸುಮ'ವಾಗಿ ಪರಿಣಮಿಸಿತ್ತು. ನಮ್ಮ ಸಾಹಿತಿವರ್ಯರೆಲ್ಲಾ ಈ ಬಗೆಯ ತೊಳಲಾಟದಲ್ಲಿದ್ದಾಗ ಅವರ ಕಾರ್ಮೋಡದ ಅಂಚಿನಲ್ಲಿ ಬೆಳ್ಳಿಯ ರೇಖೆಯೊಂದು ಮೂಡಿತಂತೆ. ಶಿವರಾಮ ಕಾರಂತರು ತಮ್ಮ ಸೂಕ್ಷ್ಮ ಶರೀರದಲ್ಲಿ ಗಾಂಧಾರರು ಸ್ಥಾಪಿಸಿದ ಪುಷ್ಪಪುರಕ್ಕೆ ಯಾವುದೋ ಕಾರ್ಯನಿಮಿತ್ತ ಹೋಗುವವರಿದ್ದರಂತೆ. ಸರಿ, ಈ ನಮ್ಮ ಕ್ರಿಕೆಟ್ ಬೀಸಣಿಗೆಗಳೆಲ್ಲಾ ಅವರಿಗೆ ದುಂಬಾಲು ಬಿದ್ದು, ಆ ಊರಿನಲ್ಲಿ ನಡೆಯಲಿದ್ದ ಪಂದ್ಯವನ್ನು ನೋಡಿ ಒಂದು ವರದಿಯನ್ನು ಕಳಿಸುವಂತೆ ಅವರನ್ನು ಒಪ್ಪಿಸಿದರಂತೆ. ಕಾರಂತರು ಕಳುಹಿಸಿದ ವರದಿ, ಅದು ಹೇಗೋ ಸೋರಿಹೋಗಿ ಅದರ ಪ್ರತಿಯೊಂದು ನಮ್ಮ ಪತ್ರಿಕೆಗೆ ದೊರಕಿತು. ಓದುಗರ ಅವಗಾಹನೆಗಾಗಿ ಅದನ್ನು ಇಲ್ಲಿ ನೀಡಿದ್ದೇವೆ.

ಮಹಾಕರುಣ ಶಾಖ್ಯಮುನಿಯ ಅನುಯಾಯಿಗಳಾದ ಗಾಂಧಾರರು ಕಟ್ಟಿದ ನಗರ ಈ ಪುಷ್ಪಪುರ. ಶಾಂತಿದೂತನ ಈ ನೆಲೆಯಲ್ಲಿ ಸೌರವ ಮತ್ತು ಇನ್ಜಮಾಮರ ನಡುವಣ ಸೆಣಸಾಟ ನಡೆಯುತ್ತಿರುವುದೇ ಒಂದು ವಿಪರ್ಯಾಸ. ಬಹುಶಃ ಮೊಗಲರ ಚಕ್ರವರ್ತಿ ಅಕಬರ ಇಲ್ಲಿ ಕೋಟೆಯೊಂದನ್ನು ಕಟ್ಟಿ ಅದನ್ನು ಗಡಿನಾಡಿನ ನಗರ ಅಥವಾ ಪೆಷಾವರವೆಂದು ಕರೆದದ್ದೇ ಈ ಸೆಣಸಾಟದ ಮೂಲವಿರಬಹುದು. ಗಡಿನಾಡೆಂದ ಮೇಲೆ ಹೊರಗಿನವರ ಧಾಳಿ ಕಟ್ಟಿಟ್ಟ ಬುತ್ತಿಯಷ್ಟೇ. ಹಾಗೆ ನೋಡಿದರೆ ಇನ್ಜಮಾಮನಿಗೆ ಈ ಹೋರಾಟದಲ್ಲಿ ಅಂತಹದೇನೂ ಆಸಕ್ತಿ ಇದ್ದಂತಿಲ್ಲ. ಹೇಗೂ ಅವನ ಹಿರಿಯರು ಇದೊಂದು ಸ್ನೇಹಯುತ ಸರಣಿ ಎಂದು ಘೋಷಿಸಿ ಬಿಟ್ಟಿದ್ದಾರಂತಲ್ಲ. ಆದರೂ ಅವನ ಬಳಿ, ಚೆಂಡು ಎಸೆಯುವವರ ದಂಡೇ ಇದ್ದಂತಿದೆ.

ಈ ಚುರುಕು ಯುವಕರಲ್ಲಿ ಬಹು ಬೇಗನೆ ಎಲ್ಲರ ಗಮನವನ್ನು ಸೆಳೆಯುವವನೆಂದರೆ ಷೋಯೆಬ. ಷೋಯೆಬನಿಗೆ ಎಳೆತನದಿಂದಲೇ ಚೆಂಡನ್ನು ಎಸೆಯುವ ಉಮೇದು. ಝೀಲಮ್ ನದಿಯ ತೀರದ ಬದಿಯಲ್ಲಿ ನಿಂತು ತಡಿಯಲ್ಲಿ ಹರಡಿದ್ದ ಬೆಣಚುಕಲ್ಲುಗಳನ್ನು ಹೆಕ್ಕಿ ಕನ್ನಡಿಯಂತಿದ್ದ ನದಿಯ ನೀರಿನ ಮೇಲೆ ಪುಟಿಯುವಂತೆ ಎಸೆಯುವುದೆಂದರೆ ಅವನಿಗೆ ಮಹದಾನಂದ.

ಷೋಯೆಬ ಹಗಲಿನಲ್ಲೂ ಬೇಕಷ್ಟು ಕನಸುಗಳನ್ನು ಕಾಣಬಲ್ಲ. ಅವನದೇ ಕನಸುಗಳನ್ನು ಕಟ್ಟಬಲ್ಲ ಶಕ್ತಿ ಅವನಿಗಿತ್ತೋ ಇಲ್ಲವೋ, ಆದರೂ ಮುಂದೊಮ್ಮೆ ತಾನು ಚೆಂಡನ್ನು ವೇಗದಿಂದ ಎಸೆದು ಹೆಸರು ಗಳಿಸಬೇಕೆಂಬ ಕನಸನ್ನು ಆತ ತಾಸುಗಟ್ಟಲೆ ನೆನೆಯುತ್ತಿದ್ದ. ಆ ಕಾರಣದಿಂದಲೋ ಅಥವಾ ನನಗೆ ತಿಳಿಯದ ಇನ್ನೇನೋ ಕಾರಣದಿಂದಲೋ ಇಂದು ಈ ಆಟದ ಬಯಲಿನಲ್ಲಿ ಆತ ಚೆಂಡನ್ನು ಹಿಡಿದು ಓಡುತ್ತ ಬರುತ್ತಿರುವ ದೃಶ್ಯ ನೋಡಿ ಸಚಿನನ ಕಾಲುಗಳಲ್ಲಿ ನಡುಕ ಶುರುವಾಗಿದೆ.

ಇನ್ಜಮಾನನ ಚೆಂಡು ಎಸೆಯುವವರ ದಂಡು ವೇಗದ ಎಸೆತದಲ್ಲಿ ಗಟ್ಟಿಗರಾದರೂ ಗುರಿಯಿಟ್ಟು ಎಸೆಯುವುದರಲ್ಲಿ ನಮ್ಮ ಘಟ್ಟದ ಮೇಲಿನವರು ಹೇಳುವಂತೆ ಸ್ವಲ್ಪ 'ಎರ್ರಾಬಿರ್ರಿ'. ಈ ಕುರಿತು ನನಗೇನೂ ಹೆಚ್ಚು ತಿಳಿದಿದೆಯೆಂದು ಹೇಳಲಾರೆ. ನನ್ನ ಪಕ್ಕದಲ್ಲಿ ಕುಳಿತು ಈ ವಿಚಿತ್ರವನ್ನು ನನಗೆ ಬಿಡಿಸಿ ಹೇಳುತ್ತಿರುವ ತಮಿಳರ ಮಾಣಿ ಶ್ರೀಕಾಂತ ಹೇಳುವಂತೆ ಇವರ ಒಟ್ಟು ಎಸೆತಗಳಲ್ಲಿ ಇಪ್ಪತ್ತೆಂಟು ವಿಫಲವಾದ ಎಸೆತಗಳಿವೆಯಂತೆ. "ಇಂದ್ರಲೋಕದಲ್ಲಿರುವ ನಿಮ್ಮ ಗೆಳೆಯರಿಗೆ ಇದನ್ನು ಹೇಳಿ, ಅವರು ಸಂತಸಪಡುತ್ತಾರೆ' ಎನ್ನುತ್ತಾನೆ ಶ್ರೀಕಾಂತ. ಶತ್ರುಗಳ ವಿಫಲತೆಯಿಂದ ಖುಷಿ ಪಡುವಷ್ಟು ಅಸಂಸ್ಕೃತರಲ್ಲ ನನ್ನ ಮಿತ್ರರು ಎಂದು ಶ್ರೀಕಾಂತನಿಗೆ ಬಿಡಿಸಿ ಹೇಳಲು ನನಗೆ ಬಾಯಿ ಬರಲಿಲ್ಲ.


ಮಾತು ಎಲ್ಲಿಂದೆಲ್ಲಿಗೋ ಹೋಯಿತು. ಇಂದಿನ ಪಂದ್ಯದಲ್ಲಿ ಟಾಸನ್ನು ಮೊದಲು ಗೆದ್ದವನು ಇನ್ಜಮಾಮ. ಚೆಂಡನ್ನು ಬಲವಾಗಿ ಮೈದಾನದಲ್ಲೆಲ್ಲಾ ಹೊಡೆದು ನೂರ ಇಪ್ಪತ್ತಮೂರು ಓಟಗಳನ್ನು ಗಳಿಸಿದವನೂ ಇನ್ಜಮಾಮನೇ. ಮಿಕ್ಕಂತೆ ಹಮೀದ, ಯೋಹಾನ ಮತ್ತು ರಜಾಕರು ತಮ್ಮ ಶಕ್ತ್ಯಾನುಸಾರ ಚೆಂಡನ್ನು ಹೊಡೆದು ತಂಡದ ಒಟ್ಟು ಮೊತ್ತವನ್ನು ಇನ್ನೂರ ತೊಂಭತ್ತ ಮೂರಕ್ಕೆ ತಂದು ನಿಲ್ಲಿಸಿದರು. ವಾಸ್ತವದಲ್ಲಿ ನನಗೆ ಈ ಅಂಕಿ ಸಂಖ್ಯೆಗಳಲ್ಲಿ ನಂಬಿಕೆಯಿಲ್ಲ. ಆದರೆ ಆ ನಾಟಕಕಾರ ಶ್ರೀರಂಗ ಬಿಡಬೇಕಲ್ಲ. ಆತನಿಗೆ ಇನ್ಜಮಾಮ ಚೆನ್ನಾಗಿ ಆಡಿದ ಎಂದು ಹೇಳಿದರೆ ಸಾಲದು. "ಆತ ಎಷ್ಟು ರನ್ನುಗಳನ್ನು ಹೊಡೆದ ಹೇಳಿ ಕಾರಂತರೇ" ಎಂದು ಆಗ್ರಹಪೂರ್ವಕವಾಗಿ ಕೇಳುತ್ತಾನೆ. ಅವನಿಗೋಸ್ಕರ ನಾನು ಈ ಊರ ಕರಣಿಕರ ಕೆಲಸ ಮಾಡಬೇಕಾಗಿದೆ.

ಇನ್ಜಮಾಮನ ಚುರುಕು ಹುಡುಗರು ಸೌರವನ ಪಡೆಗೆ ಎಸೆದ ಸವಾಲನ್ನು ಎದೆಗಾರಿಕೆಯಿಂದ ಸ್ವೀಕರಿಸದವರಲ್ಲಿ ವೀರು ಮೊದಲಿಗ ಎನ್ನಲು ಅಡ್ಡಿಯಿಲ್ಲ. ವೀರುವಿನ ಆಟ ನೋಡಿದಾಗ ನನಗೆ ನಮ್ಮ ದಕ್ಷಿಣ ಕನ್ನಡದ ಕುಮಾರಧಾರೆಯ ನೆನಪಾಗುತ್ತದೆ. ಮಳೆಗಾಲದಲ್ಲಿ ಉಕ್ಕಿ ಹರಿವ ಅಬ್ಬಿಗಳಿಂದ ತುಂಬಿ ಹರಿಯುವ ಕುಮಾರಧಾರೆಯ ಆರ್ಭಟ ಮಳೆ ನಿಂತ ಸ್ವಲ್ಪ ಕಾಲದಲ್ಲೇ ಇಳಿದು ನಿಲ್ಲುವಂತೆ ವೀರುವಿನ ಆಟ. ಇಪ್ಪತ್ತಾರು ರನ್ನುಗಳನ್ನು (ಸಾಕು, ಸಾಕು ಈ ಕರಣಿಕರ ಕೆಲಸ) ಬಿರುಸಿನಿಂದ ಹೊಡೆದು ಹಿಂದೆ ಸರಿದ ವೀರುವಿನ ನಂತರವೇ ಸಚಿನ ಬಂದಿದ್ದು.

ಆತನ ಕಾಲು ನಡುಕವೂ ಸಹಾ ಈ ತರುಣದಲ್ಲಿಯೇ ನಡೆದ ಸಂಗತಿ. ಅಂತೂ ಏಳು ರನ್ನುಗಳನ್ನು ಗಳಿಸುವ ಹೊತ್ತಿಗೆ ಸಚಿನ ಶನೇಶ್ವರನ ನೆರಳನ್ನು ಸೇರಿದ್ದ ಎಂಬುದು ಸತ್ಯಕ್ಕೆ ಹತ್ತಿರವಾದ ಮಾತು. ಅನಂತರ ಕಣಕ್ಕೆ ಇಳಿದ ಲಕ್ಷ್ಮಣ, ಸಚಿನನಿಗಿಂತ ಮಿಗಿಲಾದ ಸಾಹಸವನ್ನೇನೂ ತೋರಲಿಲ್ಲ. ಇಪ್ಪತ್ತು ರನ್ನುಗಳ ನಂತರ (ಮಾಸ್ತಿಯವರೇ ಗಮನಿಸಿ, ಲೆಕ್ಕ ಇಟ್ಟಿರುವೆ) ಷೋಯೇಬ ಎಸೆದ ಚೆಂಡಿನ ವೇಗಕ್ಕೆ ಲಕ್ಷ್ಮಣನ ಹಿಂದೆ ಸೆಟೆದು ನಿಂತಿದ್ದ ವಿಲ್ಲೋ ಮರದ ನುಣುಪಾದ ಗೂಟಗಳು ಆಗಸಕ್ಕೆ ಜಿಗಿದ ದೃಶ್ಯ ಎಂದಿಗೂ ಮನದಲ್ಲಿ ನಿಲ್ಲುವಂತಹದು. ಲಕ್ಷ್ಮಣನ ನಂತರ ದಾಖಲಿಸಬಹುದೆನ್ನಬಹುದಾದ ಆಟವೆಂದರೆ ರಾಹುಲನದು. ಬುದ್ಧ ದೇವನ ಅನುಯಾಯಿಗಳು ನಿರ್ಮಿಸಿದ ಪುಷ್ಪಪುರದಲ್ಲಿ ರಾಹುಲನ ಪ್ರವೇಶ ಮತ್ತು ದಿಗ್ವಿಜಯ ಸಹಜವೇ, ಆದರೂ ಈ ನಮ್ಮ ರಾಹುಲ ಶಾಕ್ಯ ಕುಲದವನಲ್ಲ. ವಿಂಧ್ಯೆಯ ದಕ್ಷಿಣದ ನಾಡನ್ನು ನೆನಪಿಗೆ ತರುವ ದ್ರಾವಿಡ ಈತ. ಆರ್ಯರು ದ್ರಾವಿಡರನ್ನು ಸೋಲಿಸಿದರು ಎಂಬ ಮೂರನೆಯ ಇಯತ್ತೆಯ ಪಾಠವನ್ನು ಬುಡಮೇಲು ಮಾಡಿದ ಈ ದ್ರಾವಿಡನ ಆಟ ಕಣ್ಣಿಗೆ ಹಬ್ಬ. ಆಟದಲ್ಲಿ ಈತನ ಜೊತೆಗೂ ಹೆಗಲು ಜೋಡಿಸಿದವರೆಂದರೆ ಯುವರಾಜ ಮತ್ತು ಮಹಮ್ಮದ. ಖುರಆನನ್ನು ದಿನನಿತ್ಯ ಪಠಿಸುವ ಈ ತರುಣನ ಕೈಯ್ಯಲ್ಲಿ ಕ್ರಿಕೆಟ್ಟಿನ ದಾಂಡೇ ಶಕ್ತ್ಯಾಯುಧವಾಯಿತು ಎಂದರೆ ಅದೇನು ಉತ್ಪ್ರೇಕ್ಷೆಯ ಮಾತಲ್ಲ. ಒಟ್ಟಿನಲ್ಲಿ ಈ ಮೂವರೂ ಸೇರಿ ಇನ್ನೂ ಐದು ಓವರು ಉಳಿದಿರುವಂತೆಯೇ ಗೆಲುವನ್ನು ಸಾಧಿಸಿ ಆಟವನ್ನು ಮುಗಿಸಿದ್ದು ನಿಜಕ್ಕೂ ಒಂದು ಹೆಗ್ಗಳಿಕೆಯ ಮಾತು. ಗೆಲುವು ಸೌರವನ ಪಡೆಯವರದ್ದಾದರೂ ಇನ್ಜಮಾಮನಿಗೆ ಪಂದ್ಯ ಪುರುಷ ಪ್ರಶಸ್ತಿಯನ್ನು ಕೊಟ್ಟದ್ದು ಈ ಸರಣಿಯ ಸ್ನೇಹಭಾವಕ್ಕೆ ದ್ಯೋತಕವೇನು ಎಂದು ತರುಣ ಮಿತ್ರ , ಶ್ರೀಕಾಂತನನ್ನು ಕೇಳಿದೆ. ಆತ ಯಾಕೋ ನಸು ನಕ್ಕು, "ಇದೆಲ್ಲದರ ವಿವರಣೆ ನಿಮಗೆ ನಿಲುಕದ್ದು" ಎಂದು ದಿಟ್ಟತನದಿಂದ ನುಡಿದ. ದಿಟ್ಟ ಯುವಕರೆಂದರೆ ನನಗೆ ಎಂದಿಗೂ ಮೆಚ್ಚುಗೆಯೇ. ■

---

**ಬೆಂಗಳೂರಿಂದ ತಮ್ಮ ಊರುಗಳಿಗೆ**
**ಗುಳೆ ಹೊರಟ ಜನ** –ಸುದ್ದಿ



**ಆಗ ಊರಿಗೆ ಬರ್ರೋ ಅಂದ್ರೆ ಮಗ,**
**ಸೊಸೆ, ಮೊಮ್ಮಕ್ಳು ಬರ್ತಿರ್ಲಿಲ್ಲ...**
**ಈಗ ಬರಬ್ಯಾಡ್ರೋ ಅಂದ್ರೂ ಬರ್ತೀವಿ**
**ಅಂತಿದ್ದಾರಲ್ಲೇ!**

# ಕಾರ್ನ್ ಫ್ಲೇಕ್ಸ್ ಮತ್ತು ನಾನು

**ಪಾಲಹಳ್ಳಿ ವಿಶ್ವನಾಥ್**

ನಾನು ಮೊದಲು ಈ 'ತಿಂಡಿ' ಯನ್ನು ನೋಡಿದ್ದು ಗುಂತಕಲ್ ರೈಲ್ವೆ ಸ್ಟೇಷನ್ನಿನಲ್ಲಿ. 1950ರ ದಶಕದಲ್ಲಿ ಮುಂಬಯಿಗೆ ಹೋಗಲು ನೇರ ರೈಲುಗಳು ಇರುತ್ತಿರಲಿಲ್ಲ. ಗುಂತಕಲ್ ಅಥವಾ ಪೂನಾದಲ್ಲಿ ರೈಲು ಬದಲಾಯಿಸಬೇಕಿತ್ತು. ಆಗಿನ್ನೂ ನನಗೆ 14–15ರ ವಯಸ್ಸು. ಒಂದು ಬಾರಿ ಗುಂತಕಲ್ನಲ್ಲಿ ಬಹಳ ಹೊತ್ತು ಮದರಾಸಿನಿಂದ ಬರುವ ರೈಲಿಗೆ ಕಾಯಬೇಕಾಯಿತು. ಆಗ ನಮ್ಮ ದೂರದ ಸಂಬಂಧಿಯೊಬ್ಬರೂ ಮುಂಬಯಿಗೆ ಹೋಗುತ್ತಿದ್ದು ಪ್ಲಾಟ್ಫಾರಮ್ಮಿನಲ್ಲಿ ನನ್ನನ್ನು ನೋಡಿದರು. ಆಗ ತಾನೇ ಬೆಳಿಗ್ಗೆಯಾಗುತ್ತಿದ್ದರೂ ಅವರು ಟೈ ಕಟ್ಟಿಕೊಂಡಿದ್ದು ಅವರು ಎಲ್ಲೋ ದೊಡ್ಡ ಆಫೀಸರಾಗಿದ್ದರು ಎಂದು ನೆನಪಿಗೆ ಬಂದಿತು. 'ಬಾ ಬ್ರೇಕ್ಫಾಸ್ಟ್ ಮಾಡೋಣ' ಎಂದು ರೈಲ್ವೆ ಕೆಫೆಟೇರಿಯ ಒಳಗೆ ಕರೆದುಕೊಂಡು ಹೋದರು. ಆಗೆಲ್ಲಾ ಅದು ಮೊದಲನೆಯ ದರ್ಜೆಯವರಿಗೆ ಮಾತ್ರ ಮೀಸಲಾಗಿತ್ತು ಎಂದು ಕಾಣುತ್ತದೆ. 'ಏನಾದರೂ ತಿನ್ನು' ಎಂದರು. ನಾನು ಮನೆಯಿಂದ ತಂದಿದ್ದ ಚಪಾತಿ ತಿಂದಿದ್ದು ಏನೂ ಬೇಡ ಎಂದು ತಲೆ ಅಲ್ಲಾಡಿಸಿದೆ. 'ಸರಿ, ಕಾಫಿಯಾದರೂ ಕುಡಿ , ನಾನು ಬ್ರೇಕ್ಫಾಸ್ಟ್ ಮಾಡ್ತೀನಿ 'ಎಂದರು. ಅವರು ಬರೇ ಇಂಗ್ಲಿಷಿನಲ್ಲೆ ಮಾತಾಡುತಿದ್ದರು. ನಾನೋ ಆಗ ತಾನೆ ಮಾತಾಡಲು ಕಲಿಯುತ್ತಿದ್ದೆ, ಅದೂ ಜೊತೆಯ ವಿದ್ಯಾರ್ಥಿಗಳೊಂದಿಗೆ ಮಾತ್ರ. ಆಮೇಲೆ ವೈಟರನ್ನು ಕರೆದರು. ಆತ ಯೂನಿಫಾರಮ ಧರಿಸಿದ್ದ – ಎಲ್ಲಾ ಬಿಳಿಯ ಬಟ್ಟೆ, ತಲೆಯ ಮೇಲೆ ರುಮಾಲು ; ಹಿಂದೆ ಕಂಟೋನ್ಮೆಂಟಿನಲ್ಲಿ ಒಂದು ಹೋಟೆಲಿನಲ್ಲಿ ಇಂತಹ ವಸ್ತ್ರಧಾರಿಗಳನ್ನು ನೋಡಿದ್ದೆ. ಅವನಿಗೆ ಇಂಗ್ಲಿಷಿನಲ್ಲಿ ಏನೋ ಹೇಳಿದರು. ಅವನು ತಲೆ ಅಲ್ಲಾಡಿಸಿದನ್ನು 'ನೋಡಿ. ಪರವಾಯಿಲ್ಲ, ಇಂಗ್ಲಿಷ್ ಬರುತ್ತಲ್ಲಾ ' ಎಂದು ಆಶ್ಚರ್ಯವಾಯಿತು. ಸ್ವಲ್ಪ ಸಮಯದ ನಂತರ ಮತ್ತೊಬ್ಬ ಶ್ವೇತಧಾರಿ ವೈಟರ್ ಬಿಳೀ ಪಿಂಗಾಣಿಯ ದೊಡ್ಡ ತಟ್ಟೆಯನ್ನುತಂದಿಟ್ಟ. ತಟ್ಟೆ ಸಮನಾಗಿರದೆ ಮಧ್ಯದಲ್ಲಿ ಅಳವಾಗಿತ್ತು. ಕೇಳಿದಾಗ ಅವರು ಇದು 'ಬೌಲ್' ಎಂದರು.'ಬೌಲ್'ಎಂದು ಮನಸ್ಸಿನಲ್ಲೇ ಉಚ್ಚರಿಸಿಕೊಂಡೆ. ಇದಾದ ಮೇಲೆ ಮತ್ತೊಬ್ಬ ವೈಟರ್ ಒಂದು ಕಪ್ಪಿನಲ್ಲಿ ಹಾಲು ಮತ್ತು ಇನ್ನೊಂದು' ಬೌಲ್'ನಲ್ಲಿ ಹಳದಿ ಬಣ್ಣದ ಚಕ್ಕೆ ಚಕ್ಕೆಗಳನ್ನು ತಂದಿಟ್ಟ. ನಾನು ಅದನ್ನೆ ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತಿದ್ದನ್ನು ಗಮನಿಸಿದ ಆ ಹಿರಿಯರು ' ಇದರ ಹೆಸರು ಕಾರ್ನ್ ಫ್ಲೇಕ್ಸ್ ರುಚಿ ನೋಡ್ತೀಯಾ' ಎಂದಾಗ ಅದರಲ್ಲಿ ಏನಿದೆಯೋ ಏನೋ ಎಂದು ಹೆದರಿಕೊಂಡು 'ಇಲ್ಲ' ಎಂದು 'ಕಾರ್ನ್ ಫ್ಲೇಕ್ಸ' ಎಂಬ ಹೆಸರನ್ನು ಮನಸ್ಸಿನಲ್ಲೆ ಹೇಳಿಕೊಂಡೆ. ಕಾರ್ನ್ ಎಂದರೆ ಜೋಳ ಎನ್ನುವುದು ಮಾತ್ರ ಗೊತ್ತಿತ್ತು. ಆದರೆ ಅದಕ್ಕೆಏನು ಹಾಕಿರ್ತಾರೋ? ಆ ಹಿರಿಯರು ಆ ಚಕ್ಕೆಗಳ ಮೇಲೆ ಬಿಸಿ ಹಾಲು ಹಾಕಿಕೊಂಡು ಚಪ್ಪರಿಸಿಕೊಂಡು ತಿಂದರು. ಇದು ಇಂಗ್ಲಿಷಿನವರ ಬ್ರೆಕ್ ಫಾಸ್ಟ್ ಎಂದು ಏನೋ ವಿವರಣೆ ಕೊಟ್ಟರು . ಹೂ, ಹೂ ಎಂದೆನೇ ಹೊರತು ಅವರು ಹೇಳಿದ್ದು ಏನೂ ಗೊತ್ತಾಗಲಿಲ್ಲ. ರೈಲು ಬಂತು ಅವರು ಬೈ ಹೇಳುತ್ತಾ ಮೊದಲನೆಯ ದರ್ಜೆಯ ಡಬ್ಬ ಹತ್ತಿದರು.

ಹಲವಾರು ವರ್ಷಗಳ ನಂತರ ನಾನು 1960ರ ದಶಕದಲ್ಲಿ ಮುಂಬಯಿಯಲ್ಲಿ ಒಂದು ಸಂಶೋಧನಾಲಯದಲ್ಲಿ ಕೆಲಸ ಮಾಡಲು ಶುರುಮಾಡಿದೆ. ಆಗಾಗ್ಗೆ ಅಲ್ಲಿಯ ಕ್ಯಾಂಟೀನಿನಲ್ಲಿ ಬೆಳಿಗ್ಗೆ ತಿಂಡಿಗೆ ಹೋಗುತ್ತಿದ್ದೆ. ಅಲ್ಲಿ ಮತ್ತ ಕಾರ್ನ್‌ಫ್ಲೇಕ್ಸ್ ಕಾಣಿಸಿತು. ಈ ಬಾರಿ ಸ್ವಲ್ಪ ಇಂಗ್ಲಿಷು ಕಲಿತಿದ್ದರಿಂದ ಈ ಇಂಗ್ಲಿಷ್ ತಿಂಡಿಯನ್ನು ರುಚಿ ನೋಡಲು ಅರ್ಹತೆಯನ್ನೂ ಗಳಿಸಿದ್ದೆ ಎನಿಸಿತು. ಆದ್ದರಿಂದ ಯಾವ ಹಿಂಜರಿಕೆಯೂ ಇಲ್ಲದೆ ಕಾರ್ನ್‌ಫ್ಲೇಕ್ಸನ್ನು ತಿನ್ನಲು ಶುರುಮಾಡಿದೆ. ಆಗಾಗ್ಗೆ ಸಂಶೋಧನೆಗಳಿಗೆ ನಾನು ಮುಂಬಯಿನಿಂದ ಕೆ.ಜಿ.ಎಫ್‌ಗೆ ಹೋಗಬೇಕಾಗುತ್ತಿದ್ದು ತಿಂಗಳುಗಟ್ಟಲೆ ಅಲ್ಲೇ ಇರುತ್ತಿದ್ದೆ. ಆ ಊರಿನಲ್ಲಿ ನಮ್ಮ ಆಫೀಸು ಒಂದು ಮೆಸ್ ನಡೆಸುತ್ತಿದ್ದು ಅಲ್ಲಿ ನಮ್ಮ ಕ್ವಾರಿಗಳಲ್ಲಿ ಇಂಗ್ಲಿಷಿನವರು ಕೆಲಸ ಮಾಡಿದ್ದು ಊರನ್ನು 'ಲಿಟಲ್ ಇಂಗ್ಲೆಂಡ್' ಎಂದು ಕರೆಯುತ್ತಿದ್ದರು. ಆದ್ದರಿಂದ ಊರಿನಲ್ಲಿ ಅವರು ಈಗ ಅಲ್ಲಿಲ್ಲದಿದ್ದರೂ ಇಂಗ್ಲಿಷ್ ಪ್ರೀತಿನೀತಿಗಳು ಇನ್ನೂ ಬಳಕೆಯಲ್ಲಿದ್ದವು. ಸಿಂಗಾರುವೇಲುವೂ ಅವರ ಜೊತೆ ಕೆಲಸ ಮಾಡಿದ್ದರಿಂದ ಅವರ ಮುಖ್ಯ ಕೆಲಸ ಅಡಿಗೆಯವರದ್ದಾದರೂ ನಾವು ಅವರನ್ನು ಬಟ್ಲರ್ ಎಂದು ಕರೆಯಬೇಕು ಎಂದು ನಮಗೆಸೂಚನೆ ದೊರಕಿತ್ತು. ನಾವೆಲ್ಲಾ ದೇಶದ ಬೇರೆ ಬೇರೆ ಭಾಗಗಳಿಂದ ಬಂದಿದ್ದರಿಂದ ಇಂಗ್ಲಿಷಿನಲ್ಲಿ ಮಾತಾಡುತಿದ್ದೆವು. ಭಾರತೀಯರ ಮನೆಯಲ್ಲಿ ಕೆಲಸಮಾಡುವುದು ಸಿಂಗಾರುವೇಲು ಅವರಿಗೆ ಅಂತಸ್ತಿನಲ್ಲಿ ಕೆಳಗೆ ಹೋದಂತಿದ್ದರೂ ಇದರಿಂದ ಸ್ವಲ್ಪ ಸಮಾಧಾನವಿದ್ದು ನಮ್ಮ ಜೊತೆ ಇಂಗ್ಲಿಷಿನಲ್ಲೇ ಮಾತನಾಡುತ್ತಿದ್ದರು. ಅಂತೂ ಅವರ ಸಂಪರ್ಕದಿಂದ ನಮಗೆ ಬಟ್ಲರ್ ಇಂಗ್ಲಿಷ್ ಏನು ಎಂಬುದು ಅನುಭವಕ್ಕೆ ಬಂದಿತು. ಬೆಳಿಗ್ಗೆ ತಿಂಡಿಯ ವಿಷಯದಲ್ಲಿ ನಮಗೂ ಸಿಂಗಾರುವೇಲುವಿಗೂ ಆಗಾಗ್ಗೆ ಘರ್ಷಣೆ ಬರುತ್ತಿತು. ನಮ್ಮಲ್ಲಿ ಕೆಲವರಿಗೆ ಉಪ್ಪಿಟ್ಟು, ದೋಸೆ ಇತ್ಯಾದಿ ಇಷ್ಟವಿತ್ತು. ಅದರೆ ನಮ್ಮ ಬಟ್ಲರ್ "ಆ ತಿಂಡಿಗಳು ನಿಮ್ಮಂತಹವರಿಗಲ್ಲ. ನೀವು ವಿಜ್ಞಾನಿಗಳು, ಇಂಗ್ಲಿಷ್ ಮಾತಾಡುವವರು. ನೀವು ಇದನ್ನೆಲ್ಲಾ ತಿನ್ನಬಾರದು. ನೀವು ತಿನ್ನಬೇಕಾದ್ದು ಪಾರಿಜ್, ಆಮ್ಲೆಟ್, ಕಾರ್ನ್‌ಫ್ಲೇಕ್ಸ್, ಕಟ್ಲೆಟ್ ಇತ್ಯಾದಿ" ಎಂದು ಹಿರಿಯರ ತರಹ ಹೇಳುತ್ತಲೇ ಇದ್ದರು. ಇಡ್ಲಿ, ದೋಸೆ ಬೇಕಾದವರು ಹತ್ತಿರದ ಹೋಟೆಲಿಗೆ ಹೋಗಬೇಕಾಗಿತ್ತು. ಇದರಿಂದಾಗಿ ಬೇಕಾಗಲಿ ಬೇಡವಾಗಲಿ ನಾವೆಲ್ಲ ಆಗಾಗ್ಗೆ ಕಾರ್ನ್‌ಫ್ಲೇಕ್ಸ್ ತಿನ್ನಬೇಕಾಗಿ ಬಂದು ಅದು ರೂಢಿಯಾಗಿಬಿಟ್ಟಿತು !

ಇದಾದ ಕೆಲವು ವರ್ಷಗಳ ನಂತರ ನಾನು ಅಮೆರಿಕಕ್ಕೆ ಹೋದೆ. ಮೊದಲೆರಡು ದಿನ ಯಾರೋ ಪರಿಚಯಸ್ತರ ಮನೆಯಲ್ಲಿ ಉಳಿದುಕೊಂಡೆ. ಜನವರಿಯ ಮೊದಲ ವಾರ. ಛಳಿಗಾಲ, ಅದೂ ಅಮೆರಿಕದ ಮಿಡ್ ವೆಸ್ಟ್. ನಡುಗುತ್ತ ಬೆಳಿಗ್ಗೆ ಎದ್ದಿದ್ದು ತಿಂಡಿಗೆ ಕುಳಿತೆವು. ಮನೆಯೊಡತಿ "ಏನು ತಿಂತೀರಿ'ಎಂದು ಕೇಳಿದರು.ಅವರು ಭಾರತದಿಂದ ಬಹಳ ಹಿಂದೆಯೇ ಬಂದು ನೆಲೆಸಿದ್ದರು. ಆದ್ದರಿಂದ ಅವರ ಅಮೆರಿಕದ ಲೇಪನೆಯಿದ್ದ ಇಂಗ್ಲಿಷನ್ನುಅರ್ಥಮಾಡಿಕೊಳ್ಳುವುದು ಕಷ್ಟವಾಯಿತು. ಏನು ಎಂದು ಎರಡು ಸತಿ ಕೇಳಬೇಕಾಯಿತು. ಕಡೆಗೆ ಅರ್ಥವಾದಾಗ ಧೈರ್ಯದಿಂದ ಜೋರಾಗಿ 'ಕಾರ್ನ್ ಫ್ಲೇಕ್ಸ್' ಅಂದೆ. ಅವರಿಗೂ ತಕ್ಷಣ ಅರ್ಥವಾಗಲಿಲ್ಲ ಎನಿಸುತ್ತದೆ. ತಡವಾಗಿ ಅವರು' ಓಕೆ, ಓಕೆ ! ಕಾರ್ನ್ ಫ್ಲೇಕ್ಸಾ! ಬರೇ ಕಾರ್ನ್ಫ್ಲೇಕ್ಸ್ ಯಾಕೆ? ಇಲ್ಲಿ ತರಾವರಿ ಸಿರಿಯಲ್ ಸಿಗುತ್ತೆ . ಸ್ಪೆಷ್ಲ್ ಕೆ ಇದೆ, ರೈಸ್ ಕ್ರಿಸ್ಪಿ ಇದೆ, ವೀಟೀ ಇದೆ..' ಎಂದು ಹೇಳುತ್ತಾ ಹೋದರು. ಅವೆಲ್ಲಾ ಏನು ಎಂದು ಕೇಳುವ ಧೈರ್ಯಮಾಡದೆ ಮತ್ತೆ

‘ಕಾರ್ನ್ ಫ್ಲೇಕ್ಸ್’ ಎಂದೆ. ಅವರು ‘ಆಯಿತು ! ಹೊಸ ದೇಶಕ್ಕೆ ಬಂದಾಗ ಹೊಸದನ್ನು ಪ್ರಯತ್ನಿಸಬೇಕು. ನಾನು ಹೇಳ್ತೀನಿ ಅಂತ ಬೇಜಾರು ಮಾಡ್ಕೊಬೇಡಿ. ... ಸರಿ, ತೊಗೊಳಿ’ ಎಂದರು. ಅಲ್ಲೇನಿದೆ ಎಂದು ಹುಡುಕಿದೆ. ನನ್ನ ಪರದಾಟವನ್ನು ನೋಡಿದ ಅವರು ‘ಹಾಲು ಅಲ್ಲೆ ಇದೆಯಲ್ಲ’ ಎಂದರು. ಹೌದು, ಪಕ್ಕದಲ್ಲಿ ಹಾಲಿನ ಕಾರ್ಟನ್ ಇತ್ತು. ಮುಟ್ಟಿದೆ. ಕೊರೆಯುತ್ತಿತ್ತು. ‘ ಹಾಲು ತಣ್ಣಗಿದೆ ‘ಎಂದು ಅಂಜುತ್ತಾ ಹೇಳಿದೆ. ‘ಈ ದೇಶದಲ್ಲಿ ಯಾರೂ  ಸಿರಿಯಲ್ ಜೊತೆ ಬಿಸಿ ಹಾಲು ತೊಗೋಳೋಲ್ಲ’ ಎಂದು ನನ್ನ ಕಡೆ  ಕರುಣೆಮಿಶ್ರಿತ ತಿರಸ್ಕಾರದಿಂದ ನೋಡಿದರು! ಹಾಗೇ ನಿಧಾನವಾಗಿ ತಣ್ಣನೆಯ ಹಾಲಿನ ಜೊತೆಯೆ ಕಾರ್ನ್ಫ್ಲೇಕ್ಸ್ ಮತ್ತು ಅದರ ‘ಕಸಿನ್ಸ್’ ಗಳಾದ ಇತರ ಸಿರಿಯಲ್ಗಳೂ ಅಭ್ಯಾಸವಾದವು.  ನನ್ನ ಎಷ್ಟೋ ಅಮೆರಿಕ ವಿದ್ಯಾರ್ಥಿ ಮಿತ್ರರು ಹಸಿವಾದಾಗೆಲ್ಲ ಇದನ್ನು ತಿನ್ನುವುದನ್ನುನೋಡಿ ನಾನೂ ಅನುಸರಿಸಲು ಶುರು ಮಾಡಿದೆ. ಇದರಿಂದಾಗಿ ಸಸ್ಯಾಹಾರಿಯಾಗಿ ಬದುಕುವುದೂ ಸುಲಭವಾಯಿತು. ಭಾರತಕ್ಕೆ ವಾಪಸ್ಸು ಬಂದಾಗ ಇಲ್ಲಿ ಬಿಸಿ ಹಾಲಿನ ಜೊತೆ ಕಾರ್ನ್ ಫ್ಲೇಕ್ಸ್ ತಿನ್ನುತ್ತಿರುವುದನ್ನುನೋಡಿ ‘ಪಾಪ, ಇನ್ನೂ ಕಲಿಯುವುದಿದೆ’ ಎನ್ನಿಸಿತು!

ಅಂತೂ ಈ ಎಲ್ಲ ಅನುಭವಗಳಿಂದ ದಶಕಗಳಿಂದ ಕಾರ್ನ್ ಫ್ಲೇಕ್ಸ್ ನಮ್ಮ ಬೆಳಗಿನ ಸಂಗಾತಿಯಾಗಿ ಬಿಟ್ಟಿದೆ. ಆದರೆ ಹಲ್ಲುಗಳು ಸವೆಯುತ್ತ ಬಿಸಿ ಹಾಲೇ ವಾಸಿ ಅನ್ನಿಸುತ್ತಿದೆ ! ಅದರ ಸಹವಾಸ ಮಾಡಿಸಿದ ದಶಕಗಳ ಹಿಂದಿನ ಗುಂತಕಲ್ಲಿನ ರೈಲ್ವೆ ಕ್ಯಾಂಟೀನಿನ ಆ ಬಿಳಿಯ ಪಿಂಗಾಣಿ ‘ಬೌಲ್ ’ನೆನಪಿನಿಂದ ಇಂದೂ ಸರಿದಿಲ್ಲ! ■



# ದ್ವಿಚಕ್ರ ವಾಹನ ಚಾಲನೆಯೆಂಬ ಅತಿ ದೊಡ್ಡ ಸರ್ಕಸ್

**ಕೆ.ಎಸ್. ಸೋಮೇಶ್ವರ**

ಹಲವು ದಶಕಗಳ ಹಿಂದೆ ಕಮಲ ತ್ರಿ ರಿಂಗ್ ಸರ್ಕಸ್, ಜೆಮಿನಿ ಸರ್ಕಸ್ ನ್ಯಾಷನಲ್ ಸರ್ಕಸ್ ಹೀಗೆ ಹಲವು ಸರ್ಕಸ್ ಕಂಪನಿಗಳು ಅನೇಕ ದಶಕಗಳ ಕಾಲ ಅದರಲ್ಲೂ ಸಾಮಾನ್ಯವಾಗಿ ಬೇಸಿಗೆಯ ಕಾಲದಲ್ಲಿ ದೊಡ್ಡ ಮೈದಾನದಲ್ಲಿ ಡೇರೆ ಹಾಕಿ ಅನೇಕ ಸಾಹಸಮಯ, ಕೌತುಕಮಯ ಆಟಗಳನ್ನು ಜನರಿಗೆ ತೋರಿಸಿ ರಂಜಿಸುತ್ತಿದ್ದರು. ಅದರಲ್ಲಿ ಸಾಹಸಿಗರು ಒಂದೇ ಚಕ್ರದ ಮೇಲೆ ಕುಳಿತು ತಿರುಗುವುದು, ಮೋಟಾರ್ ಸೈಕಲ್ ಏರಿ ಮಾಡುತ್ತಿದ್ದ ಸಾಹಸಮಯ ದೃಶ್ಯಗಳು ಒಂದೊಂದೂ ಕಣ್ಣಿಗೆ ಕಟ್ಟಿದಂತಿದೆ. ಇಲ್ಲಿ ಆನೆ, ಕುದುರೆ ಸಿಂಹಗಳಂತಹ ಕಾಡು ಪ್ರಾಣಿಗಳೂ ಕೂಡ ಮನುಷ್ಯನ ತಾಳಕ್ಕೆ ತಕ್ಕಂತೆ ಆಟಗಳನ್ನು ಆಡುತ್ತಿದ್ದವು. ಕಾಲ ಕ್ರಮೇಣ ಅನೇಕ ಕಾರಣಗಳಿಂದಾಗಿ ಈ ಸರ್ಕಸ್ ಎನ್ನುವುದು ಇತಿಹಾಸದ ಪುಟಗಳನ್ನು ಸೇರಿದೆ. ಬೆಂಗಳೂರಿನಲ್ಲಿ ಈಗಿನ ಕೆಂಪೇಗೌಡ ಬಸ್ ನಿಲ್ದಾಣ (ಅಂದಿನ ಸುಭಾಷ್ ನಗರ ಬಸ್ ನಿಲ್ದಾಣ) ಆಗ ಧರ್ಮರಾಯನ ಕೆರೆ ಅಂಗಳವೇ ಇದಕ್ಕೆ ರಂಗಸ್ಥಳವಾಗಿತ್ತು. ಈಗಿನ ಮಕ್ಕಳಿಗೆ ಇದರ ಹಿಂದಿನ ಕಷ್ಟ ನಷ್ಟಗಳು ಯಾವ ರೀತಿಯಲ್ಲೂ ಅರಿವಿಗೆ ಬರುವುದಿಲ್ಲ. ರಾಜಕಪೂರ್ ರವರ 'ಮೇರಾ ನಾಮ್ ಜೋಕರ್' ಚಲನ ಚಿತ್ರ ಇದನ್ನು ಪರಿಚಯಿಸುವ ಪ್ರಯತ್ನ ಮಾಡಿದೆ.

ಈ ಸರ್ಕಸ್‌ಗಳಲ್ಲಿ ಪ್ರದರ್ಶನವಾಗುತ್ತಿದ್ದ ಕೆಲವು ಸಾಹಸ ದೃಶ್ಯಗಳನ್ನು ಈಗ ನಾವು ನಮ್ಮ ಬೆಂಗಳೂರಿನ ರಸ್ತೆಗಳಲ್ಲೇ ಕಾಣ ಬಹುದಾಗಿದೆ. ಇದಕ್ಕೆ ಪೂರಕವಾಗಿರುವುದು ಇಲ್ಲಿ ಅಪಾರ ಸಂಖ್ಯೆಯಲ್ಲಿ ಓಡಾಡುವ ದ್ವಿ ಚಕ್ರ ವಾಹನಗಳು. ಇತರೆ ಯಾವುದೇ ವಾಹನವಾಗಲಿ ನಿಶ್ಚಲವಾಗಿದ್ದಾಗ ತನ್ನ ಕಾಲ ಮೇಲೆ ತಾನೇ ನಿಲ್ಲುವ ಸಾಮರ್ಥ್ಯ ಹೊಂದಿವೆ. ಇದರಲ್ಲಿ ಮೂರು ಚಕ್ರದ ಆಟೋಗಳೂ ಸೇರುತ್ತವೆ. ಆದರೆ, ದ್ವಿಚಕ್ರ ವಾಹನಗಳಿಗೆ ನಿಲ್ಲಲು ಒಂದು ಊರು ಗೋಲು ಅತ್ಯವಶ್ಯಕ. ಹೀಗಿರುವಾಗ ಇದನ್ನು ಓಡಿಸುವ ಅನುಭವ ಯಾವುದೇ ಸರ್ಕಸ್ ಆಟಗಳಿಗೂ ಮಿಗಿಲಾಗಿರುತ್ತದೆ ಎಂದರೆ ತಪ್ಪಲ್ಲ. ದ್ವಿ ಚಕ್ರ ವಾಹನ ಸವಾರಿಯೆಂದರೆ ರಸ್ತೆಗಳಲ್ಲಿ ಸಮತೋಲನ ಕಾಪಾಡಿಕೊಂಡು ಅನೇಕ ಸಣ್ಣ ದೊಡ್ಡ ವಾಹನಗಳ ನಡುವೆ ನುಸುಳಿ ಸಮಸ್ಥಿತಿಯಲ್ಲಿ ಓಡಿಸುವುದು.

ಇಂತಹ ವಿಶಿಷ್ಟ ವಾಹನ ಸವಾರರ ಕೈಯಲ್ಲಿ ಸ್ಕೂಟರ್, ಮೋಟಾರ್ ಸೈಕಲ್ ಯಾವುದೇ ಇರಲಿ ಈ ರೀತಿಯ ದೊಂಬರಾಟ ಅನಿವಾರ್ಯವೆನ್ನುವಂತಿದೆ. ಅಷ್ಟಕ್ಕೂ ಇವರುಗಳು ಓಡಿಸುವ ಎಲ್ಲ ರಸ್ತೆಗಳೂ ನೈಸ್ ರಸ್ತೆಗಳೇ ! ನಿನ್ನೆ ರಾತ್ರಿ ಕಾಣದ ಹಳ್ಳ, ದಿಣ್ಣೆಗಳು ಉಬ್ಬು ತಗ್ಗುಗಳು ಬೆಳಿಗ್ಗೆ ಉದ್ಭವವಾಗಿರುತ್ತವೆ. ಇವೆಲ್ಲ ಚಂದಿರನ ಮೇಲಿನ ಕುಳಿಗಳನ್ನು ಬಹಳ ಪರಿಶ್ರಮದಿಂದ ಕಂಡು ಹಿಡಿದ ಬಾಹ್ಯಾಕಾಶ ವಿಜ್ಞಾನಿಗಳಿಗೂ ಸವಾಲಾಗಿರುತ್ತದೆ. ಇವುಗಳನ್ನೆಲ್ಲ ಗಮನಿಸಿ ಓಡಿಸುವ ಈ ವಾಹನ ಸವಾರರಿಗೆ ಯಾವುದೇ ಶೌರ್ಯ ಪ್ರಶಸ್ತಿ ನೀಡಿದರೂ ಕಡಿಮೆಯೇ ಸರಿ. ಇಷ್ಟೇ ಅಲ್ಲದೇ ಅನೇಕ ಕಡೆಗಳಲ್ಲಿ ರಸ್ತೆಗಳು ಮತ್ತು ಪಾದಚಾರಿ ರಸ್ತೆಗಳ ನಡುವೆ ಯಾವುದೆ ವ್ಯತ್ಯಾಸ ಈ ಶೂರರಿಗೆ ಕಾಣುವುದಿಲ್ಲ. ಕೂಡು ರಸ್ತೆಗಳಲ್ಲಿ ಉದ್ದನೆಯ

ಸರತಿಯಿದ್ದಾಗ ದ್ವಿಚಕ್ರ ವಾಹನ ಸವಾರರ ಸಾಹಸ ಹೇಳತೀರದ್ದು. ರಸ್ತೆಯ ಪಕ್ಕದಲ್ಲಿ ಅಷ್ಟೇನು ವ್ಯತ್ಯಾಸವಿರದ ರಸ್ತೆ ಮತ್ತು ಫುಟ್‌ಪಾತ್ ಬಳಿ ವಾಹನವನ್ನು ಪಾದಚಾರಿ ಮಾರ್ಗಕ್ಕೆ ನುಸುಳಿಸಿ ಓಡಿಸುತ್ತಾರೆ. ಸರಕಾರದ ಮಾತಿನಂತೆ ಅಲ್ಲಿನ ಪ್ರಾಮಾಣಿಕ ಹಕ್ಕುದಾರರಾದ ಪಾದಚಾರಿಗಳು ಇದನ್ನು ಪ್ರಶ್ನಿಸಿದರೆ ಅವರು ಅಲ್ಲಿ ನಡೆದಾಡುವುದೇ ತಪ್ಪಾಗಿಬಿಡುತ್ತದೆ. ಇನ್ನು ಹೆಲ್ಮೆಟ್ ಹಾಕಿದ್ದರಂತೂ ಅವರ ರೌದ್ರ ಭಾವ ಪೂರ್ಣವಾಗಿ ನೋಡ ಸಿಗುವುದೇ ಇಲ್ಲ. ಈಗಂತೂ ಸರಿಯೆ ಮುಖ ಕವಚ ಬೇರೆ 'ಅನಿವಾರ್ಯ'. ಇದೂ ಸಹ ಅವರಿಗೆ ಒಂದು ವರವೇ ಸರಿ. ಇವೆರಡೂ ಇಲ್ಲದಿದ್ದರೆ ಬಡಪಾಯಿ ಪಾದಚಾರಿಗಳಿಗೆ ಭಸ್ಮವಾಗಲು ಶಿವನ ಮೂರನೇ ನಯನ ಬೇಕಾಗಿಯೇ ಇಲ್ಲ.

ದ್ವಿಚಕ್ರ ವಾಹನಗಳನ್ನು ಓಡಿಸುವಿಕೆಯೇ ಒಂದು ಸರ್ಕಸ್ ಎಂಬಂತೆ ನಿಶ್ಚಿತವಾಗಿರುವಾಗ ಅದರಲ್ಲಿ ಇನ್ನಷ್ಟು ಸಾಹಸ ದೃಶ್ಯಗಳನ್ನೇಕೆ ತೋರಿಸಬಾರದು ಎಂಬ ಹಠಕ್ಕೆ ಈ ಸವಾರರು ಬೀಳುತ್ತಾರೆ. ಇದರಲ್ಲಿ ಮೊದಲನೆಯದು ಇವರ ಹಿಂಬದಿ ಸೀಟಿನಲ್ಲಿ ಆಸೀನರಾಗಿರುವ ಅವರ ಮನೆಯ ಮಹಿಳೆಯರು (ಹೆಂಡತಿ). ಇವರು ಹಿಂಬದಿ ಸೀಟಿನ ಅರ್ಧ ಭಾಗವನ್ನಷ್ಟೇ ಆಕ್ರಮಿಸಿ ಒಂದು ಕೈಯಲ್ಲಿ ಸವಾರನ ಹೆಗಲು ಇಲ್ಲ ಸೊಂಟಕ್ಕೆ ಕಟ್ಟಿಕೊಂಡಿರುತ್ತಾರೆ. ಮತ್ತೊಂದು ಕೈಯಲ್ಲಿ ಜಂಭದ ಚೀಲ. ಈಗಿನವರಿಗಾದರೆ ಒಂದು ಕೈಯಲ್ಲಿನ ಅಸ್ತ್ರ ಮೊಬೈಲ್. ಇದರ ವಿಸ್ತೃತ ಭಾಗವೆಂದರೆ ಅವರ ತೊಡೆಯ ಮೇಲೆ ಆಸೀನವಾಗಿರುವ ಕಂದಮ್ಮ. ಅದಕ್ಕೆ ಆಸರೆ ಇವರ ಇನ್ನೊಂದು ಕೈ. ಸ್ವಲ್ಪ ದೊಡ್ಡ ಮಕ್ಕಳಾದರೆ ಇವರಿಬ್ಬರ ಮಧ್ಯೆ ಅಥವಾ ಸವಾರನ ಮುಂದಿನ ಸೀಟಿನಲ್ಲಿ ಬಾಗಿ ನಿಂತೇ ಓಡಾಟ. ಇಲ್ಲಿ ಒಂದಕ್ಕಿಂತ ಹೆಚ್ಚಿನ ಮಕ್ಕಳಿಗೆ ಜಾಲಿ ರೈಡ್. ಮುಂದೆ ಅರ್ಧ ಕುಳಿತಿರುವ ಮಗು ಸ್ವಲ್ಪ ಅಪ್ಪನ ರೀತಿಯಲ್ಲೇ ಸಾಹಸಿಯಾದರೆ ಅದರ ಬೆರಳುಗಳು ವಾಹನದ ಬೆಲ್ ಅನ್ನು ಚೀರುವಂತೆ ಮಾಡುತ್ತಿರುತ್ತದೆ.

ಈಗಿನ ಮೊಬೈಲ್ ಪ್ರಭಾವ ಬೇರೆಯೇ ಸಾಹಸಗಳಿಗೆ ಪ್ರೇರಣೆಯಾಗಿದೆ. ಹಿಂದೆ ಕುಳಿತಿರುವವರು ಮೊಬೈಲ್ ಅನ್ನು ಸವಾರರ ಕಿವಿಗೆ ಆನಿಸಿ ಪ್ರಶಸ್ತ ಕರೆಗಳ ಸ್ವೀಕಾರಕ್ಕೆ ಅನುವು ಮಾಡಿಕೊಟ್ಟರೆ, ಇನ್ನು ಕೆಲ ಸವಾರರಿಗೆ ಆ ಸುಖ ಇಲ್ಲದೇ ಕರೆ ಬಂದಾಗ ಸ್ವೀಕರಿಸದಿದ್ದರೆ ಅಪಾರ ಹಾನಿಯಾಗುವ ದೃಷ್ಟಿಯಿಂದ ಅದನ್ನು ಒಂದು ಕಿವಿಗೆ ಆನಿಸಿ ಅದೇ ದಿಕ್ಕಿನಲ್ಲಿ ಅವರ ಕತ್ತು ವಾಲಿರುತ್ತದೆ. ಈ ಸಮಯದಲ್ಲಿ ಇವರಿಗೆ ರಸ್ತೆಯೂ ಅಡ್ಡಡ್ಡ ಕಾಣಬಹುದೇನೋ! ಇನ್ನೂ ಕೆಲವರು ಮೊಬೈಲನ್ನು ಹೆಲ್ಮೆಟ್ ಸಂದಿಯಲ್ಲಿ ತೂರಿಸಿ ವ್ಯವಹಾರ ಮಾಡುತ್ತಿದ್ದರೆ ಮತ್ತಷ್ಟು ಮಂದಿ ಹ್ಯಾಂಡ್ಸ್ ಫ್ರೀ ಸಾಧನವನ್ನು ಕರ್ಣಾಭರಣವಾಗಿ ಧರಿಸಿ ಮಾತು ಕತೆ ಮಾಡುತ್ತ ಚಾಲನೆ ಮಾಡುತ್ತಿರುತ್ತಾರೆ. ಈ ಮೊಬೈಲ್ ಇಲ್ಲದ ಯುಗದಲ್ಲಿ ತಮ್ಮಷ್ಟಕ್ಕೆ ತಾವೆ ಮಾತಾಡಿಕೊಂಡು ಹೋಗುವ ಜನರನ್ನು ಮತಿಗೇಡಿಗಳೆಂದು ಕಾಣುವ ಸಂಪ್ರದಾಯ ವಿತ್ತು. ಈಗ ಇವರನ್ನು ನೋಡಿದಾಗ ಅದೇ ರೀತಿ ಅನಿಸುತ್ತದೆ.

ಈ ವಾಹನಗಳ ಸವಾರಿ ಇಷ್ಟೆಲ್ಲ ಗುಣಗಾನ ಮಾಡಿಸಿಕೊಂಡರೂ ಸುರಕ್ಷಿತವಾಗಿ ಗುರಿ ಮುಟ್ಟುತ್ತದೆ ಎಂಬುದೇ ಒಂದು ? ಆಗಿ ಬಿಡುತ್ತದೆ. ಈ ದ್ವಿಚಕ್ರ ವಾಹನಗಳು ಚಿಕ್ಕದಿರಲಿ, ದೊಡ್ಡದಿರಲಿ ಸರಕು ಸಾಗಣೆ ವಾಹನಗಳಾಗಿ ವಿಜೃಂಭಿಸುತ್ತವೆ. ಈಗ

ಇಂತಹ ವಾಹನಗಳಿಗೆ ಹಿಂದಿನ ಬಜಾಜ್ ರೀತಿಯ ಕ್ಲಚ್, ಗೇರ್ ಎಲ್ಲ ಆಟೋಮ್ಯಾಟಿಕ್ ಆಗಿರುವುದು ಬಹಲ ಸುಲಭವಾಗಿ ದೊಡ್ಡ ದೊಡ್ಡ ಹೊರೆಯನ್ನು ಸಾಗಿಸಿ ಬಿಡುತ್ತವೆ. ಹಿಂದಿನ ಬಜಾಜ್ ವಾಹನಗಳು ಆಗ ಎತ್ತಿನ ಗಾಡಿಗಳಿಗೂ ಮೀರಿ ಭಾರ ಹೊರುತ್ತಿದ್ದವು. ಈಗಲೂ ಅನೇಕರು ದೊಡ್ಡ ವಸ್ತುಗಳನ್ನು ಹಿಂಬದಿ ಸೀಟಿನಲ್ಲಿ ಇರಿಸಿ ಚಾಲನೆ ಮಾಡುತ್ತ ಗುರಿ ಮುಟ್ಟುತ್ತಾರೆ. ಈಚೆಗೆ ಒಬ್ಬ ವ್ಯಕ್ತಿ ಒಂದು ಮೋಟಾರ್ ಸೈಕಲ್ ಸವಾರಿ ಮಾಡುತ್ತ ಬರುತ್ತಿರುವುದು ಒಂದು ರಸ್ತೆಯಲ್ಲಿ ಕಂಡು ಬಂದಿತು. ಅಲ್ಲಿ ಅವನ ಮುಖ ಮಾತ್ರ ಅಷ್ಪಷ್ಟವಾಗಿ ಕಂಡರೆ ಉಳಿದೆಲ್ಲ ಭಾಗ ವನ್ನು ಅಥ ಹೊತ್ತು ತರುತ್ತಿರುವ ವಸ್ತುಗಳು ವಾಹನ ಮತ್ತು ಚಾಲಕನ ನಾಲ್ಕು ಪಟ್ಟಿಗೂ ಮೀರಿ ಒಂದು ಪ್ರಭಾವಳಿಯಂತೆ ಕಾಣುತ್ತಿತ್ತು. ಆತ ತಾನು ವಸ್ತುಗಳನ್ನು ಇಳಿಸ ಬೇಕಾದ ಸ್ಥಳ ಬಂದೊಡನೆ ಅಲ್ಲಿ ಕೆಲವನ್ನು ಅನ್ ಲೋಡ್ ಮಾಡಿ ಮುಂದೆ ಅದೇ ರೀತಿಯಲ್ಲಿ ಸವಾರಿ ಮುಂದುವರಿಸಿದ. ಇನ್ನೊಬ್ಬ ಸವಾರ ತನ್ನ ಬಜಾಜ್ ವಾಹನದ ಮೇಲೆ ಒಂದು ದೊಡ್ಡ ಕಬ್ಬಿಣದ ಅಲಮಾರುವನ್ನೇ ಹೊತ್ತೊಯ್ಯುತ್ತಿದ್ದ ದೃಶ್ಯ ಮರೆಯಲಾಗದಂತಹುದಾಗಿದೆ.

ಹೀಗೆ ದ್ವಿಚಕ್ರ ವಾಹನ ಸವಾರಿಯೆಂಬ 'ಗ್ರೇಟ್ ರೋಡ್ ಷೋ' ಇಲ್ಲಿಗೇ ಮುಗಿಯುವುದಿಲ್ಲ. ವಿಜ್ಞಾನದ ನೀತಿ ಹೇಳುವಂತೆ ಹೊಸ ಹೊಸ ಆವಿಷ್ಕಾರಗಳು ಆಗಲೇ ಬೇಕಲ್ಲವೇ?

ಅದರಂತೆ, ಯುವಕರು ವಾಹನದಲ್ಲಿ ಹಿಂಬದಿಯವನ್ನು ಕೂಡಿಸಿಕೊಂಡೇ ವಾಹನದ ಹಿಂದಿನ ಚಕ್ರದ ಮೇಲಷ್ಟೇ ಓಡಿಸುವ ಸಾಹಸೀ ಪ್ರವೃತ್ತಿಯವರಾಗಿರುತ್ತಾರೆ. ಇದಕ್ಕೆ "ಡ್ರಾಗ್ ರೇಸ್" ಎಂಬ ನಾಮಕರಣ ಬೇರೆ. ಇದೂ ಸಹ ಸರ್ಕಸ್ ನಲ್ಲಿ ನಾಲ್ಕು ಕಾಲಿನ ಪ್ರಾಣಿಗಳನ್ನು ಎರಡೇ ಕಾಲಿನಲ್ಲಿ ನಿಲ್ಲುವುದು, ನಡೆಯುವುದು ಮುಂತಾದ ಕ್ರಿಯೆಗಳ ಸ್ಪೂರ್ತಿ!! ಇದೆಲ್ಲ ಹಾಲಿವುಡ್ ಚಲನ ಚಿತ್ರಗಳಲ್ಲಿ ಕಂಡವರಿಗೆ ಇಲ್ಲಿ ನಿಜವಾಗಿಯೂ ಇಂತಹ ದೃಶ್ಯಗಳು ಕಣ್ಮುಂದೆಯೇ ನಡೆದಾಗ ಹೃದಯ ಸ್ಥಂಭನವಾಗದಿದ್ದರೆ ಅದೃಷ್ಟವಂತರೇ ಸರಿ.

ಇದೇ ನೋಡಿ ದ್ವಿಚಕ್ರ ವಾಹನ ಸವಾರಿಯೆಂಬ ಅತಿ ದೊಡ್ಡ ರೋಡ್ ಷೋ ಅಥವಾ ಸರ್ಕಸ್. ■

---

# ಲಿಮಿರಿಕ್ಸ್

ಬಿ.ಎಸ್. ರವಿಕುಮಾರ್

ಖೇಚರ

~~~~~

ಆಕಾಶದಲ್ಲಿ ಚಲಿಸುವುದೇ "ಖೇಚರ"
ಅರ್ಥಾತ್ ಹಕ್ಕಿ ಎಂದ ಕನ್ನಡ ಟೀಚರ
ಮಾತು ಕೇಳಿ ಯೋಚಿಸಿದ ಭಾನು
ವಾಟ್ ಅಬೌಟ್ ಪ್ಲೇನು ವಾಟ್ ಅಬೌಟ್ ಡ್ರೋನು
ಹೀಗೆ ಕನ್ಫ್ಯೂಸ್ ಆಗೋದೇ ಅವನ ನೇಚರ
~~~~~

## ನಮ್ಮ ನಡುವಿನ ಅನನ್ಯ ವ್ಯಂಗ್ಯಚಿತ್ರಕಾರ

# ಶ್ರೀ ವಸಂತ ಹೊಸಬೆಟ್ಟು

**ಸುಕೇಶವ**




28 ಜೂನ್ 1965 ರಲ್ಲಿ ಜನಿಸಿದ ಶ್ರೀ ವಸಂತ ಹೊಸಬೆಟ್ಟು ಅವರು ವ್ಯಂಗ್ಯಚಿತ್ರ ಲೋಕಕ್ಕೆ ಪದಾರ್ಪಣೆ ಮಾಡಿದ ಮೇಲೆ ಕರ್ನಾಟಕದ ಅನೇಕ ಪತ್ರಿಕೆಗಳಾದ ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್, ಕನ್ನಡ ಪ್ರಭ, ಪ್ರಜಾವಾಣಿ, ಮಯೂರ, ಸುಧಾ, ತರಂಗ, ಕರ್ಮವೀರ ಮುಂತಾದ ಪತ್ರಿಕೆಗಳಲ್ಲಿ ತಮ್ಮ ವ್ಯಂಗ್ಯಚಿತ್ರಗಳಿಂದ ಮಿಂಚಿದವರು. ಕೇರಳ ಕಾರ್ಟೂನ್ ಅಕಾಡೆಮಿ (1984) ಯಲ್ಲಿ ಮತ್ತು ಕರ್ನಾಟಕ ಪತ್ರಿಕಾ ಅಕಾಡೆಮಿ (1988) ಯಲ್ಲಿ ತರಬೇತಿ ಪಡೆದವರು. ತಮ್ಮ ವೃತ್ತಿ ಮತ್ತು ಪ್ರವೃತ್ತಿಗಳನ್ನು ವಿಸ್ತರಿಸಿಕೊಂಡು, ಮುಂದೆ ಕನ್ನಡಪ್ರಭ ಪತ್ರಿಕೆಯಲ್ಲಿ 1991 ರಿಂದ 1994ರವರೆಗೆ ಸತತವಾಗಿ ಪ್ರತಿ ಬುಧವಾರ ಕಾರ್ಟೂನ್ ಕಾಲಂ ಬರೆದು ಯಶಸ್ವಿ ಎನಿಸಿಕೊಂಡರು. ಈ ಅಂಕಣಕ್ಕೆ ಅತಿ ದೀರ್ಘ ಕಾಲ ಪ್ರಕಟವಾದ ವ್ಯಂಗ್ಯಚಿತ್ರಗಳ ಅಂಕಣ ಎಂದು 2013ರಲ್ಲಿ ಪ್ರಕಟವಾದ ವಿಶೇಷ ವಿಶ್ವ ದಾಖಲೆ ಗ್ರಂಥಗಳಲ್ಲಿ (ಮಿರೇಕಲ್ ಆಫ್ ವರ್ಲ್ಡ್ ರೆಕಾರ್ಡ್) ಪ್ರಕಟವಾಗಿದೆ. ಮತ್ತೆ ಇದೇ ಅಂಕಣಕ್ಕೆ 2011 ಮತ್ತು 2013 ರ ಸಂಚಿಕೆಗಳಲ್ಲಿ ಏಷಿಯಾ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್ ಸಂಸ್ಥೆಯಿಂದ ಅತ್ಯಂತ ದೀರ್ಘ ಕಾಲ ಪ್ರಕಟಗೊಂಡ ವ್ಯಂಗ್ಯಚಿತ್ರಗಳ ಕಾಲಂ ಎಂದು ಪ್ರಶಸ್ತಿ ಕೊಟ್ಟಿವೆ. ಇದೇ ಅಂಕಣಕ್ಕೆ ಲಿಮ್ಕಾ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್ ಅವರಿಂದ 2004 ರಲ್ಲಿ ರಾಷ್ಟ್ರೀಯ ದಾಖಲೆ ಪುರಸ್ಕಾರ ದೊರೆತಿದೆ. ಹೀಗೆ ಪ್ರಕಟವಾದ ಎಲ್ಲಾ ವ್ಯಂಗ್ಯಚಿತ್ರಗಳನ್ನೂ ಮತ್ತು ಅವುಗಳ ಕುರಿತ ವರದಿಗಳನ್ನೂ ವ್ಹಾರೆವ್ಹಾ! ಮತ್ತು ಮುಂದುವರೆದ ವ್ಹಾರೆವ್ಹಾ ಎಂಬ ಎರಡು ಪುಸ್ತಕಗಳ ಮುಖಾಂತರ ಸಾಧನಾ ಪ್ರಕಾಶನದಿಂದ ಪ್ರಕಟಿಸಿದ್ದಾರೆ.

ವಸಂತ ಹೊಸಬೆಟ್ಟು ಅವರನ್ನು ಹುಡುಕಿಕೊಂಡು ಬಂದಿರುವ ಪ್ರಶಸ್ತಿ ಪುರಸ್ಕಾರಗಳು ಹಲವು. ಅವುಗಳಲ್ಲಿ ಕೆಲವನ್ನು ಪಟ್ಟಿ ಮಾಡುವುದಾದರೆ:


ಅಕ್ಟೋಬರ್ 1993 ರಲ್ಲಿ ದಕ್ಷಿಣ ಕೊರಿಯಾದಲ್ಲಿ ನಡೆದ ವ್ಯಂಗ್ಯಚಿತ್ರಗಳ ಸ್ಪರ್ಧೆಯಲ್ಲಿ 5ನೇ ಬಹುಮಾನ

ಅಕ್ಟೋಬರ್ 2019ರಲ್ಲಿ ದಕ್ಷಿಣ ಕೊರೆಯಾದಲ್ಲಿ ನಡೆದ ವ್ಯಂಗ್ಯಚಿತ್ರಗಳ ಸ್ಪರ್ಧೆಯಲ್ಲಿ ಬಹುಮಾನ

1992ರಲ್ಲಿ ಭಿಲಾಯ್ ಸ್ಟೀಲ್ ಪ್ಲಾಂಟ್‌ನಲ್ಲಿ ನಡೆದ ಸ್ಪರ್ಧೆಯಲ್ಲಿ 3ನೇ ಬಹುಮಾನ.

ಜೊತೆಗೆ ಇವರು ಅನೇಕ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ವ್ಯಂಗ್ಯಚಿತ್ರ ಸ್ಪರ್ದೆಗಳಲ್ಲಿ ಭಾಗವಹಿಸಿದ್ದಾರೆ


2018ರಲ್ಲಿ ಮೂಡುಬಿದರೆಯಲ್ಲಿ ಆಳ್ವಾಸ್ ನುಡಿಸಿರಿ ಹಬ್ಬದಲ್ಲಿ ಭಾಗವಹಿದ್ದಾರೆ.



ಸೋಶಿಯಲ್ ಮಿಡಿಯಾಗಳ ಅವಾಂತರ



ಹೊಸಬೆಟ್ಟು ಅವರ ರೇಖಾಚಿತ್ರಗಳು – ನ್ಯೂಯಾರ್ಕ್‌ನಲ್ಲಿ



ಗಾಂಧೀವಾದ

ಇವರಿಗೆ ಅನೇಕ ಅಂತಾರಾಷ್ಟ್ರೀಯ ಪ್ರಶಸ್ತಿ ಪುರಸ್ಕಾರಗಳು ದೊರೆತಿವೆ. ಅವುಗಳಲ್ಲಿ ಪ್ರಮುಖವಾದುವು:


22 ಫೆಬ್ರವರಿ 2014 ರಲ್ಲಿ ವಿಯಟ್ನಾಂನಲ್ಲಿ ನಡೆದ ಸಮಾರಂಭದಲ್ಲಿ ಅತಿದೀರ್ಘ ವ್ಯಂಗ್ಯಚಿತ್ರ ಲೇಖನ ಮಾಲೆಯ ಲೇಖನಕ್ಕಾಗಿ ಯು.ಕೆ. ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪ್ರಶಸ್ತಿ ಪ್ರದಾನ.

ಸೆಪ್ಟೆಂಬರ್ ಅಕ್ಟೋಬರ್ 2012ರಲ್ಲಿ ಫ್ರಾನ್ಸ್‌ನಲ್ಲಿ ನಡೆದ ಅಂತಾರಾಷ್ಟ್ರೀಯ ವ್ಯಂಗ್ಯಚಿತ್ರ ಕಾರ್ಯಾಗಾರದಲ್ಲಿ ಭಾಗವಹಿಸಿದ ನಂತರ ಫ್ರೆಂಚ್ ವಿದ್ಯಾರ್ಥಿಗಳಿಗೆ ವ್ಯಂಗ್ಯಚಿತ್ರ ರಚನೆಯ ಬಗೆಗೆ ತರಪೇತಿಯನ್ನು ನೀಡಿದ್ದಾರೆ. ಇದು ಭಾರತದ ಅದರಲ್ಲೂ ಕರ್ನಾಟಕದ ವ್ಯಂಗ್ಯಚತ್ರಕಾರರೊಬ್ಬರು ಮಾಡಿದ ಸಾಧನೆ ಎಂದು ಗುರುತಿಸಲಾಗಿದೆ . ಇವರ ರಚನೆಯ ಕೆಲವು ವ್ಯಂಗ್ಯಚಿತ್ರಗಳು ಅಪರಂಜಿ ಓದುಗರಿಗಾಗಿ.

ಇವರ ವ್ಯಂಗ್ಯಚಿತ್ರ ಲೋಕದ ಸಾಧನೆಗಳು ಮುಂದುವರಿದು ಇನ್ನೂ ಹೆಚ್ಚಿನ ಕೀರ್ತಿಶಿಖರ ಏರಲಿ ಮತ್ತು ವಸಂತ ಹೊಸಬೆಟ್ಟು ಅವರು ತೊಡಗಿಸಿಕೊಂಡಿರುವ ಇನ್ನಿತರ ಕ್ಷೇತ್ರಗಳಲ್ಲೂ ಅವರಿಗೆ ಯಶಸ್ಸು ಸಿಗಲಿ ಎಂದು ಅಪರಂಜಿ ತಂಡ ಹಾರೈಸುತ್ತದೆ.



ಕೆ.ಕೆ. ಹೆಬ್ಬಾರ್



ಪೋಸ್ಟ್ ಮೂಲಕ "ಡೆಲಿವರಿ"

■

# BEECHI VIDYA KENDRA

TEMPLE OF KNOWLEDGE

Email: admin@beechi.in
Web: www.beechi.in
Mob: 9740968677, 9035302302, 9035007003

PLACEMENT SERVICES FOR:

- BFSI
- SOFTWARE
- MANUFACTURING
- AUTOMOBILES
- REAL ESTATE
- HOSPITALITY
- FMCG

## ಬೀಚಿ ಪ್ರಕಾಶನ Beechi Prakashana

| ಪುಸ್ತಕದ ಹೆಸರು | ಲೇಖಕರು | ಬೆಲೆ | ಪುಸ್ತಕದ ಹೆಸರು | ಲೇಖಕರು | ಬೆಲೆ |
|---|---|---|---|---|---|
| ರೇಡಿಯೋ ನಾಟಕಗಳು | ಬೀಚಿ | 70 | ಲೇವಡಿ ಟ್ವೆಸ್ಟ್ | ಬೀಚಿ | 100 |
| ಮಾತ್ರೆಗಳು | ಬೀಚಿ | 125 | ಬೆಳ್ಳಿ ಪತ್ರಗಳು | ಬೀಚಿ | 100 |
| ತಿಂಮನ ತಲೆ | ಬೀಚಿ | 70 | ಮಹಾಯುದ್ಧ | ಬೀಚಿ | 100 |
| ಹುಚ್ಚು ಹುರುಳು | ಬೀಚಿ | 50 | ಅಮ್ಮಾವ್ರ ಕಾಲ್ಗುಣ | ಬೀಚಿ | 100 |
| ಸತೀ ಸೂಳೆ | ಬೀಚಿ | 110 | ಕತ್ತಲಲ್ಲಿ ಬಂದವಳು | ಬೀಚಿ | 90 |
| ಖಾದಿ ಸೀರೆ | ಬೀಚಿ | 170 | ಮಾತನಾಡುವ ದೇವರುಗಳು | ಬೀಚಿ | 75 |
| ಸತ್ತವನು ಎದ್ದು ಬಂದಾಗ | ಬೀಚಿ | 60 | ಮನೆತನದ ಗೌರವ | ಬೀಚಿ | 100 |
| ಕಾಣದ ಸುಂದರಿ | ಬೀಚಿ | 150 | ಗರತಿಯ ಗುಟ್ಟು | ಬೀಚಿ | 60 |
| ಕಲ್ಲು ಹೇಳಿತು | ಬೀಚಿ | 150 | ನಂಬರ್ ಐವತ್ತೈದು | ಬೀಚಿ | 60 |
| ತಿಂಮ ರಸಾಯನ | ಬೀಚಿ | 120 | ಉತ್ತರ ಭೂಪ | ಬೀಚಿ | 250 |
| ದೇವನ ಹೆಂಡ | ಬೀಚಿ | 170 | ನರಪ್ರಾಣಿ | ಬೀಚಿ | 75 |
| ಮೇಡಮ್ಮನ ಗಂಡ | ಬೀಚಿ | 110 | ನನ್ನ ಭಯಾಗ್ರಫಿ | ಬೀಚಿ | 270 |
| ಟೆಂಟ್ ಸಿನಿಮಾ | ಬೀಚಿ | 100 | ಹುಲಿಯ ಬೆನ್ನು ಮೇಲಿಂದ | ಬೀಚಿ | 125 |
| ಬೆಳ್ಳಿ ತಿಂಮ ನೂರೆಂಟು ಹೇಳಿದ | ಬೀಚಿ | 75 | ಅಂದನಾ ತಿಂಮ | ಬೀಚಿ | 125 |
| ಮುರಿದ ಬೊಂಬೆ | ಬೀಚಿ | 100 | ಹೆಂಡತಿ ನಕ್ಕಾಗ | ಬೀಚಿ | 125 |
| ಸೀತೂ ಮದುವೆ | ಬೀಚಿ | 80 | ಕಮಲಮ್ಮನ ಕುಂಕುಮ ಬಲ | ಬೀಚಿ | 125 |

| ಪುಸ್ತಕದ ಹೆಸರು | ಲೇಖಕರು | ಬೆಲೆ |
|---|---|---|
| ಬೀchi ಬುಲ್ಲೆಟಿನ್ | ಕೇಶವ ರಾವ್ | 200 |
| ಬೀchi ತೋಚಿದ್ದು ಗೀಚಿದ್ದು | ಸ್ವಾಮಿ ರಾವ್ ಕುಲ್ಕರ್ಣಿ | 120 |
| ಬೊಂಬಾಟ್ ಬೀಚಿ | ಬೇಲೂರು ರಾಮಮೂರ್ತಿ | 60 |
| ವಾಗ್ಬಾಣಗಳು | ಗಂಗಾವತಿ ಪ್ರಾಣೇಶ್ | 50 |
| ನಗಿಸುವವನ ನೋವುಗಳು | ಗಂಗಾವತಿ ಪ್ರಾಣೇಶ್ | 50 |
| ಪೊಲೀಸ್ ಎನಕೌಂಟರ್ | Dr..ಡಿ.ವಿ.ಗುರುಪ್ರಸಾದ್ IPS | 200 |
| ಪೊಲೀಸ್ ಜೀವನದಲ್ಲಿ ಹಾಸ್ಯ | Dr.ಡಿ.ವಿ.ಗುರುಪ್ರಸಾದ್ IPS | 200 |
| ವಿಶ್ವಪರ್ಯಟನೆ | Dr.ಡಿ.ವಿ.ಗುರುಪ್ರಸಾದ್ IPS | 300 |
| ರಾಜೀವ್ ಗಾಂಧಿ ಭೀಕರ ಹತ್ಯಾ | Dr.ಡಿ.ವಿ.ಗುರುಪ್ರಸಾದ್ IPS | 250 |

ಇಂಗ್ಲಿಷ್ ಮೂಲ: ಪದ್ಮಶ್ರೀ ಡಿ ಆರ್ ಕಾರ್ತಿಕೇಯನ್

**ಪ್ರತಿಗಳಿಗೆ ಸಂಪರ್ಕಿಸಿ.: 9845264304**

# ಅಪ್ಪ ಅಂದ್ರೆ ವಿಲ್ಲನ್ನಾ

**ಬೇಲೂರು ರಾಮಮೂರ್ತಿ**

ಈ ಪ್ರಶ್ನೆ ಸುಂದರರಾಯರನ್ನು ಈಚೆಗೆ ಕಾಡೋಕೆ ಷುರು ಮಾಡಿದೆ. ಅವರಿಗೆ ಸ್ನೇಹ ಬಳಗ ಹೆಚ್ಚು. ಆದರೆ ಅಲ್ಲಿ ಈ ಪ್ರಶ್ನೆಗೆ ಉತ್ತರ ಪಡ್ಕೊಳೋದು ಅವರಿಗೆ ಇಷ್ಟ ಇಲ್ಲ. ಒಂದು ವೇಳೆ ಪ್ರಶ್ನೆ ಕೇಳಿದರೂ ಇದು ಯಾರ ಮನೆ ವಿಚಾರ ಅಂತ ಸ್ನೇಹಿತರು ಕೇಳುತ್ತಾರೆ. ಆಗ ಇದು ತಮ್ಮ ಮನೆಯ ವಿಚಾರ ಅನ್ನಬೇಕು. ಆಗ ಸ್ನೇಹಿತರು ತಲೆಗೊಂದೊಂದು ಮಾತಾಡಬಹುದು. ಕೆಲವರು ಮಕ್ಕಳನ್ನು ದೂರಬಹುದು. ಇನ್ನು ಕೆಲವರು ನೀನು ಮಕ್ಕಳನ್ನು ಬೆಳೆಸಿದ ರೀತಿ ಸರಿಯಿಲ್ಲ ಅಂತ ತಮ್ಮನ್ನೇ ದೂರಬಹುದು. ಅವರ ಮನೆ ವಿಷಯ ಬೇರೆಯವರಿಗೆ ಆಡ್ಕೊಳೋ ವಸ್ತುವಾಗೋದು ಸುಂದರರಾಯರಿಗೆ ಇಷ್ಟವಿಲ್ಲ. ಅದಕ್ಕೇ ಎಲ್ಲವನ್ನೂ ತಮ್ಮೊಳಗೇ ಅನುಭವಿಸಿಕೊಂಡಿದ್ದಾರೆ. ಇಂಥಾ ವಿಚಾರಗಳನ್ನು ಹಂಚಿಕೊಳ್ಳಬಹುದಾಗಿದ್ದ ಏಕೈಕ ವ್ಯಕ್ತಿ ಅಂದರೆ ಪತ್ನಿ. ಅವರು ಸುಂದರರಾಯರನ್ನು ಅಗಲಿ ಐದಾರು ವರ್ಷಗಳೇ ಕಳೆದಿವೆ. ನನ್ನ ಈಚಿನ ಪರಿಸ್ಥಿತಿಗೆ ಒಂದು ರೀತಿಯಲ್ಲಿ ಹೆಂಡತಿಯೇ ಕಾರಣ. ಏಕೆಂದರೆ ಅವಳು ಬದುಕಿದ್ದಿದ್ದರೆ ಹೀಗಾಗುತ್ತಿರಲಿಲ್ಲ ಅಂದುಕೊಂಡಿದ್ದಾರೆ ಸುಂದರರಾಯರು.

ಸುಂದರರಾಯರು ತಮ್ಮ ನಡೆ ನುಡಿಗಳನ್ನು ಆಗಾಗ ಅವಲೋಕನ ಮಾಡಿಕೊಳ್ತಾರೆ. ತಾವು ಮೊದಲಿಂದ್ಲೂ ಹೀಗೇನೋ ಅಥವಾ ಈಚೆಗೆ ಬದಲಾಗಿದ್ದೀನೋ ಅಂತ ಅವರಿಗೆ ಅನುಮಾನ ಬರುತ್ತಿದೆ. ಇಂದಿನ ಯುಗದಲ್ಲಿ, ಮಕ್ಕಳ, ಮೊಮ್ಮಕ್ಕಳ ಎದುರಿಗೆ ಸರಿಯಿಲ್ಲದಿರುವುದನ್ನು ಸರಿಯಿಲ್ಲ ಅಂತ ಹೇಳೋದು ಕೂಡಾ ಸರಿಯಲ್ಲ ಅನಿಸಿಬಿಟ್ಟಿದೆ ಅವರಿಗೆ. ಇದನ್ನು ಜನರೇಷನ್ ಗ್ಯಾಪ್ ಅನ್ನಬಹುದೇನೋ. ಒಂದೊಂದು ಸಾರಿ ಯಾವುದು ಎತ್ಲಾಗಾದ್ರೂ ಹಾಳಾಗಿ ಹೋಗ್ಲಿ ನನ್ನ ಪಾಡಿಗೆ ನಾನಿದ್ರೆ ಸಾಕು ಅಂದುಕೊಂಡರೂ ಹಾಳಾದ್ದು ವಯಸ್ಸು, ಅನುಭವ, ಹಿರಿತನ ಇವೆಲ್ಲಾ ಸುಮ್ಮನಿರಗೊಡೋದಿಲ್ಲ. ಅವರ ಸ್ನೇಹಿತರ ಮಗ ಒಂದು ಸಾರಿ ವಯಸ್ಸಾದವರ ಸಮಸ್ಯೆಗಳ ಬಗೆಗೆ ಮಾತಾಡ್ತಾ "ಅಂಕಲ್ ವಯಸ್ಸಾದ ಮೇಲೆ ಸುಖವಾಗಿ, ನೆಮ್ಮದಿಯಾಗಿರ್ಬೇಕಾದ್ರೆ ಮುಖ್ಯವಾದ ಎರಡು ಕೆಲಸ ಮಾಡಬೇಕು. ಏನು ಗೊತ್ತಾ ? ಒಂದು ತಿನ್ನೋದು, ಇನ್ನೊಂದು ತಲೆ ತಿನ್ನೋದು" ಅಂದಿದ್ದ. ಹೌದು ಜೀರ್ಣಶಕ್ತಿಗೆ ಅನುಗುಣವಾಗಿ ತಿನ್ನೋದು ಕಡಿಮೆ ಮಾಡಬಹುದು. ಆದರೆ ತಲೆ ತಿನ್ನೋದು ಅಂದ್ರೇನು. ವಯಸ್ಸಾದವನು ಏನು ಮಾತಾಡಿದರೂ ತಲೆ ತಿನ್ನೋದು ಅಂತಾದರೆ ವಯಸ್ಸಾದವರು ಮನೇಲಿ ಮಾತಾಡಲೇಬಾರದೇ?

ಸಂಜೆ ವಾಯುವಿಹಾರದಲ್ಲಿ ಸಿಗುವ ಸ್ನೇಹಿತರ ಪೈಕಿ ಪಟ್ಟಾಭಿ ತುಂಬಾ ಆತ್ಮೀಯ. ಅವನು ಆಗಾಗ ಅವನ ಮನೆ ಸಮಸ್ಯೆಗಳನ್ನು ಹೇಳ್ಕೊತಾನೆ. ಅವನೊಂದು ಸಾರಿ "ನೋಡು ಸುಂದರು, ಕಣ್ಣಿಗೆ ಕಾಣೋ ಸಂಬಂಧಗಳಿಂದ ದೂರವಾಗಿ ಕಣ್ಣಿಗೆ ಕಾಣದ ಬೇರೆಯೇ ಸಂಬಂಧಗಳನ್ನು ಕಟ್ಕೊ. ಆಗ ಎಲ್ಲರೂ ನಿನ್ನವರಾಗುತ್ತಾರೆ. ಹೇಗೆ ಗೊತ್ತಾ, ಮಗ, ಸೊಸೆ, ಮಗಳು, ಅಳಿಯ, ಹೆಂಡತಿ ಈ ಸಂಬಂಧಗಳೆಲ್ಲಾ ಸಮಯ ಕಳೆದಂತೆ ಹಳಸುತ್ತವೆ. ಆಗುವ ಅನುಭವಗಳಿಂದಾಗಿ ಯಾಕೆ ಇವರೆಲ್ಲಾ

ನನ್ನನ್ನು ಹೀಗೆ ಕಾಣ್ತಿದಾರೆ ಅನಿಸುತ್ತೆ. ಕಡೆ ಕಡೆಗೆ ಇವರ್‍ಯಾರೂ ನನ್ನವರಲ್ಲ ಅನಿಸುವಷ್ಟು ಬೇಜಾರಾಗಿಬಿಡುತ್ತೆ. ನಿನ್ನ ಬದುಕನ್ನು ಆಳವಾಗಿ ಅಭ್ಯಾಸ ಮಾಡಿದರೆ ಅವರ್‍ಯಾರೂ ನಿನ್ನವರಲ್ಲ, ನೀನೂ ಅವರವನಲ್ಲ. ಬದಲಿಗೆ ಇರುವ ತನಕ ಹಾಗೆ ಪಾತ್ರ ಮಾಡ್ತಿರೋರು ಅನಿಸೋಲ್ವ. ಯಾಕಂದರೆ ಬರುವಾಗ ಅವರು ಯಾರೂ ನಿನ್ನ ಜೊತೆ ಬರಲಿಲ್ಲ. ಹೋಗುವಾಗಲೂ ಅವರ್‍ಯಾರೂ ನಿನ್ನ ಜೊತೆ ಬರೋಲ್ಲ. ಅಂದ ಮೇಲೆ ಸಂಬಂಧಗಳಿಗೆ, ಅವುಗಳ ನಡವಳಿಕೆಗೆ ಎಷ್ಟು ಬೆಲೆ ಕೊಡಬೇಕು ಹೇಳು. ಅದಕ್ಕೇ ವಯಸ್ಸಾಗ್ತಾ ಬಂದ ಹಾಗೆ ಆಧ್ಯಾತ್ಮದತ್ತ ವಾಲಿದರೆ, ಮಕ್ಕಳು ನಮ್ಮವರಲ್ಲ, ಮೊಮ್ಮಕ್ಕಳು ನಮ್ಮವರಲ್ಲ, ಅಷ್ಟೇ ಯಾಕೆ ಸ್ನೇಹಿತರು, ನೆಂಟರು ಯಾರೂ ನನ್ನವರಲ್ಲ, ಬದಲಿಗೆ ನಾವು ಆರಾಧಿಸುವ, ಪೂಜಿಸುವ ರಾಮ, ಕೃಷ್ಣ, ಶಿವ, ಪಾರ್ವತಿ, ಲಕ್ಷ್ಮಿ, ಸರಸ್ವತಿ, ಎಲ್ಲರೂ ನನ್ನವರು ಅನಿಸುತ್ತೆ. ನಾವು ಅವರಿಗೆ ಹತ್ತಿರವಿದೀವಿ ಅನ್ನೋ ನೆಮ್ಮದಿ ಇರುತ್ತೆ" ಅಂದಿದ್ದ.   ಯಾಕೋ ಇತ್ತೀಚೆಗೆ ಪಟ್ಟಾಭಿ ಮಾತು ನಿಜ ಅನಿಸ್ತಿದೆ.

ಹಬ್ಬಗಳಲ್ಲಿ  ಮಗ ಸೊಸೆ ಮೊಮ್ಮಕ್ಕಳಿಗೆ ಅಂತ ಷಾಪಿಂಗ್ ಅಂತ ಹೊರಟಾಗ ಸುಂದರರಾಯರು ಮಗನಿಗೆ "ನೋಡು ರಾಮು, ಬಟ್ಟೆ ಚನ್ನಾಗಿದೆ ಅಂತ ಸಿಕ್ಕಾಪಟ್ಟೆ ದುಡ್ಡು ಕೊಟ್ಟು ತರಬೇಡ. ಮಕ್ಕಳು ಬೆಳೆಯೋ ದಿನಗಳಲ್ಲಿ ಬಟ್ಟೆಯ ಅಳತೆ ದಿನೇ ದಿನೇ ಬದಲಾಗ್ತಿರುತ್ತೆ. ಇನ್ನು ನೀನು ತರೋ ದುಬಾರಿ ಬಟ್ಟೆಗಳನ್ನು ಮಕ್ಕಳು ಮತ್ತು ನೀನು ಒಂದೋ ಎರಡೋ ಸಾರಿ ಹಾಕ್ಕೊಂಡು ಆಮೇಲೆ ಬಣ್ಣ ಮಾಸಿತು ಅಂತಲೋ, ಚಿಕ್ಕದಾಯಿತು ಅಂತಲೋ, ಹಳೇ ಡಿಸೈನ್ ಆಯಿತು ಅಂತಲೋ ಬಿಸಾಕ್ತೀರ. ಇದು ಬರೀ ಬಟ್ಟೆಗಲ್ಲ, ನಿನ್ನ ಷೂ, ಮೊಬೈಲು ಎಲ್ಲದಕ್ಕೂ ಅನ್ವಯಿಸುತ್ತೆ. ಅದಿಕ್ಕೆ ಹೆಚ್ಚು ದುಬಾರಿಯದನ್ನು ಕೊಳ್ಳಬೇಡ, ಹೆಂಡತಿ ಮಕ್ಕಳಿಗೆ ಕೊಡಿಸಲೂ ಬೇಡ" ಅಂದಿದ್ದಕ್ಕೆ ಮಗ "ಅಪ್ಪಾ ಇದು ನಿಮ್ಮ ಕಾಲ ಅಲ್ಲ, ನಮ್ಮ ಕಾಲ. ಈಗ ಹೀಗೇ ನಡೆಯೋದು. ನಿನ್ನ ದುಡಿಮೆಯ ಕಾಲದಲ್ಲಿ ನೀನೇ ಹೇಳುವ ಹಾಗೆ ಹಾಸಕ್ಕೆ ಇದ್ರೆ ಹೊದಿಯೋಕೆ ಇರುತ್ತಿರಲಿಲ್ಲ, ಇನ್ನು ನಮ್ಮ ಕಾಲದಲ್ಲಿ ಹೀಗಲ್ಲ. ಒಂದೊಂದು ಸಾರಿ ಸಂಪಾದನೆ ಎಷ್ಟೊಂದ್ರೆ,  ಎಷ್ಟು ಖರ್ಚು ಮಾಡಿದರೂ ತಿಂಗಳ ಕೊನೆಗೆ ಇನ್ನೂ ಬೇಕಾದಷ್ಟು ಹಣ ಉಳಿದಿರುತ್ತೆ. ಅದಿಕ್ಕೆ ನಾವು ಖರ್ಚು ಮಾಡೊಕೆ ಹಿಂದು ಮುಂದು ನೋಡಲ್ಲ" ಅಂದಿದ್ದ. ಇನ್ನೊಮ್ಮೆ ಯಾವುದೋ ವಸ್ತುವಿಗೆ ಕೊಟ್ಟ ಬೆಲೆ ಬಹಳ ದುಬಾರಿ ಅಲ್ವೇನೋ ಅಂದ್ರೆ "ಅಪ್ಪಾ ಚನ್ನಾಗಿರೋದು ಬೇಕೂಂದ್ರೆ ದುಡ್ಡು ಹೆಚ್ಚಾಗಿ ಕೊಡಬೇಕು" ಅಂದಿದ್ದ. ಅವನ ಭುಜದ ಮೇಲೆ ಕೈ ಹಾಕಿ "ಕೊಡು ಯಾರು ಬೇಡಾಂದೋರು ಆದರೆ ದುಡ್ಡು ಖರ್ಚು ಮಾಡುವಾಗ ಇದಕ್ಕೆ ಇಷ್ಟು ಬೆಲೆ ಸರಿಯೇ? ಇಷ್ಟೊಂದು ಬೆಲೆ ಕೊಟ್ಟು ನಾನು ಇದನ್ನು ಖರೀದಿಸಬೇಕೇ ಅಂತ ಒಮ್ಮೆ ಯೋಚನೆ ಮಾಡು. ಏಕೆಂದರೆ ನೀನು ಸಂಪಾದಿಸೋ ಒಂದೊಂದು ರೂಪಾಯಿಗೂ ನೀನು ಕಷ್ಟ ಪಟ್ಟಿರ್ತೀಯ. ತಿಂಗಳ ಕೊನೆಗೆ ನಿನ್ನ ಅಕೌಂಟಿಗೆ ಲಕ್ಷ ಲಕ್ಷ ಬಂದು ಬೀಳಬಹುದು. ಆದರೆ ಆ ಲಕ್ಷ ಲಕ್ಷ ಬಂದು ಬೀಳೋಕೆ ನೀನು ಎಷ್ಟು ದಿನ ನಿದ್ದೆಗೆಟ್ಟಿರ್ತೀಯ, ಊಟ ಬಿಟ್ಟಿರ್ತೀಯ, ಸುಖ, ಸಂತೋಷ ತೊರೆದಿರ್ತೀಯ ಅಂತ ಯೋಚನೆ ಮಾಡು. ಅಳೆದೂ ತೂಗಿ ಖರ್ಚು ಮಾಡಿದರೇ ಸುಖ" ಅಂದಿದ್ದರು. ಅವರ ಮಾತುಗಳನ್ನೇನೂ ಮಗ ಕಿವಿ ಮೇಲೆ ಹಾಕಿಕೊಂಡಿರಲಿಲ್ಲ. ಆದರೆ ಅವನ ಹೆಂಡತಿ ಕಿವಿ ಒಳಗೆ ತುರುಕಿದ. ಅವಳು ಮರುದಿನ ತಿಂಡಿ ತಟ್ಟೆ ಅವರ ಮುಂದೆ ತಳ್ಳುವಾಗ "ಮಾವಾ, ನಮ್ಮ ಖರ್ಚು, ವೆಚ್ಚ ಇವೆಲ್ಲಾ ನಿಮಗ್ಯಾಕೆ, ಇಷ್ಟಕ್ಕೂ ನಾವೇನು

ನಿಮ್ಮನ್ನ ದುಡ್ಡು ಕೇಳ್ತಿಲ್ಲವಲ್ಲ. ಅವರೂ ದುಡೀತಾರೆ, ನಾನೂ ದುಡೀತೇನೆ. ಅಷ್ಟು ದುಡಿಯುವಾಗ ಕಣ್ಣಿಗೆ ಕಂಡದ್ದನ್ನು ಕೊಂಡು ಸಂತೋಷ ಪಡೋದ್ರಲ್ಲಿ ಏನು ತಪ್ಪು. ನಿಮ್ಮ ಕಾಲದ ಹಾಗೆ ನಾವು ಸಂಬಳಕ್ಕೆ ಒಂದನೇ ತಾರೀಖು ಅಂತ ಕಾಯಬೇಕಿಲ್ಲ. ನಿಮ್ಮ ಮಕ್ಕಳನ್ನು ನೀವು ಬಡತನದಲ್ಲೇ ಬೆಳೆಸಿದ್ರಿ. ಹಾಗಂತ ನಾವೂ ನಮ್ಮ ಮಕ್ಕಳನ್ನು ಬಡತನದಲ್ಲೇ ಬೆಳೆಸಬೇಕಿಲ್ಲ. ನಿಮ್ಮ ಕೆಲಸ ನೋಡ್ಕೊಂಡು ನೀವು ಸುಮ್ಮನಿದ್ದುಬಿಡಿ" ಅಂದಿದ್ದಳು. ಮಗ ತಾನು ತಂದೆಗೆ ಹೇಳಲಾರದ ಮಾತುಗಳನ್ನು ಹೆಂಡತಿಯಿಂದ ಹೇಳಿಸಿದ್ದ.

ಮಗ ಸೊಸೆ ಆಫೀಸಿಗೆ ಮತ್ತು ಮಕ್ಕಳು ಕಾಲೇಜಿಗೆ ಹೋಗಿ ಮನೆಯಲ್ಲಿ ಒಂಟಿಯಾಗಿದ್ದ ಒಂದು ದಿನ  ಯಾಕೋ ಸ್ವಲ್ಪ ಮೈ ಕೈ ನೋವು, ಸುಸ್ತು ಸಂಕಟ ಅಂತ ಡಾಕ್ಟರತ್ರ ಹೋದಾಗ ಅವರು ಮಾತ್ರೆ, ಇಂಜಕ್ಷನ್ನು ಕೊಟ್ಟರು. ಸಂಜೆ ಮಗ ಮನೆಗೆ ಬಂದಾಗ ಸುಂದರರಾಯರು ಮಲಗಿದ್ದರು. "ಯಾಕಪ್ಪಾ ಮಲಗಿದೀರ" ಅಂತ ಕೇಳಿದ ಮಗನಿಗೆ "ಬೆಳಗಿನಿಂದ ಯಾಕೋ ಮೈ ಸರಿ ಇಲ್ಲ ಕಣೋ, ಡಾಕ್ಟರ ಹತ್ರ ಹೋಗಿದ್ದೆ ಅಂದಾಗ ಮಗ "ನೀವು ಒಬ್ಬರೇ ಯಾಕೆ ಹೋದ್ರಿ, ನನಗೆ ಹೇಳಿದ್ರೆ ನಾನು ಕರ್ಕೊಂಡು ಹೋಗ್ತಿರಲಿಲ್ವಾ. ನೋಡಿದೋರು ಮಗ ಅಪ್ಪನನ್ನು ನಿರ್ಲಕ್ಷಿಸಿದ್ದಾನೆ ಅಂದ್ಕೊಬೇಕಲ್ಲ, ನೀವು ಮಾಡೋದು ಒಂದೊಂದಲ್ಲ" ಅಂತ ರೇಗಿದ್ದ. ಸುಂದರರಾಯರು "ಅಲ್ವೋ ನೀನು ಅದೇ ತಾನೇ ಆಫೀಸಿಗೆ ಇಪ್ಪತ್ತು ಕಿಲೋಮೀಟರು ಡ್ರೈವ್ ಮಾಡಿಕೊಂಡು ಹೋಗಿರ್ತೀಯ. ನಾನು ಫೋನ್ ಮಾಡಿದರೆ ಮತ್ತೆ ಇಪ್ಪತ್ತು ಕಿಲೋಮೀಟರು ಡ್ರೈವ್ ಮಾಡಿಕೊಂಡು ಬರಬೇಕು. ನಿನಗೇ ಎಷ್ಟು ಕಷ್ಟ ನೋಡು" ಅಂದರೂ ಮಗನಿಗೆ ಆ ವಿವರಣೆ ಸರಿ ಎನಿಸದೇ ಗೊಣಗಿಕೊಂಡು ಹೋಗಿದ್ದ. ಇನ್ನೊಮ್ಮೆ ಎರಡು ದಿನದಿಂದ ಮೈ ಕೈ ಎಲ್ಲ ನೋವು, ಯಾಕೋ ಸುಸ್ತು, ಸಂಕಟ, ಹೊಟ್ಟೆಗೆ ಸೇರ್ತಿರಲಿಲ್ಲ. ಆಗ ಮಗನನ್ನು "ನನ್ನನ್ನು ಡಾಕ್ಟರ ಹತ್ರ ಕರ್ಕೊಂಡು ಹೋಗ್ತೀಯ" ಅಂತ ಕೇಳಿದ್ದಕ್ಕೆ "ಇಷ್ಟಕ್ಕೆಲ್ಲ ಡಾಕ್ಟರ ಹತ್ರ ಯಾಕೆ. ಎರಡು ದಿನ ಸ್ವಲ್ಪ ಬಾಯಿ ಚಪಲ ಬಿಟ್ಟು ಆರಾಮವಾಗಿರಿ ಎಲ್ಲ ಸರಿಹೋಗುತ್ತೆ" ಅಂದಿದ್ದ. ಆಗಲೂ ಮಗನಿಗೆ ಹೇಳದೇ ಡಾಕ್ಟರ ಹತ್ರ ಹೋಗಿ ಬಂದು ಅವರು ಕೊಟ್ಟ ಮಾತ್ರೆಗಳನ್ನು ಕದ್ದು ಮುಚ್ಚಿ ತಗೊಂಡು ಸರಿಹೋಗಿದ್ದರು. ಆದರೆ ಈಗ ಡಾಕ್ಟರ ಹತ್ರ ಹೋಗಿದ್ದನ್ನು ಹೇಳಿದ್ದಕ್ಕೂ ಕೋಪ ಮಾಡ್ಕೊಂಡ. ಹಾಗಾದರೆ ನಾನು ಏನು ಮಾಡಲಿ ಅಂತ ತೊಳಲಾಡಿದ್ದರು. ಆದರೆ ಸುಂದರರಾಯರಿಗೆ ಅರ್ಥವಾಗಿದ್ದೆಂದರೆ ವಯಸ್ಸಾದ ಮೇಲೆ ಮಕ್ಕಳ ಜೊತೆ ಬದುಕೋಕೆ ಒಂದು ರೀತಿಯ ವಿಶೇಷ ಬುದ್ಧಿವಂತಿಕೆ ಬೇಕು ಅಂತ.

ಸುಂದರರಾಯರಿಗೆ ಸದಾ ಮಗನ ಹತ್ತಿರ ತುಂಬಾ ಮಾತಾಡಬೇಕು ಅಂತ ಆಸೆ. ಆದರೆ ಮಗನಿಗೆ ಮಾತ್ರ ಪುರುಸೊತ್ತು ಇಲ್ಲ. ಆಫೀಸಿಗೆ ಹೊರಟ್ಯಾ, ಊಟ ತಗೊಂಡಿದೀಯ, ಎಷ್ಟೊತ್ತಿಗೆ ಬರ್ತೀಯ, ಪರ್ಸು ಜೋಪಾನ ಅಂತೆಲ್ಲ ಹೇಳಬೇಕು ಅಂತ ಅವರಿಗೆ ಆಸೆ. ಆದರೆ ಮಗ ಅದಕ್ಕೆಲ್ಲ ಬ್ರೇಕ್ ಹಾಕಿದಾನೆ. ಇನ್ನು ರಾತ್ರಿ ಊಟ ಮಾಡುವಾಗಲೂ ಹೆಚ್ಚು ಮಾತಿಲ್ಲ. ಅದಕ್ಕೇ ಸುಂದರರಾಯರು ಒಂದು ದಿನ ಮಗನೊಂದಿಗೆ, "ರಾಮು, ಎಷ್ಟೋ ಸಾರಿ ನಾನು ನಿನ್ನತ್ರ ಮಾತಾಡಬೇಕು ಅಂತ ಬಂದಾಗ ನೀನು ಲ್ಯಾಪ್ ಟಾಪ್ ನೋಡ್ತಿರ್ತೀಯ, ಇಲ್ಲಾ ಮೊಬೈಲ್ ಕೆದಕ್ತಿರ್ತೀಯ. ನಿನ್ನತ್ರ ಮಾತಾಡೋಕೆ ನಾನು ಅಪಾಯಿಂಟ್‌ಮೆಂಟ್ ತಗೋಬೇಕು ಅನ್ನೋ

ಹಾಗಾಗಿದೆ. ಇನ್ನು ನಾನು ಮಾತಾಡೋಕೆ ಬಂದ್ರೆ ನೀನು ಮೊಬೈಲಿಂದ ಮುಖ ತೆಗೀದೇ ಏನಪ್ಪಾ ಅಂತೀಯ. ಆಗ ನನಗೆ ನಿನ್ನನ್ನು ಮಾತಾಡಿಸೋ ಉತ್ಸಾಹವೇ ಹೋಗುತ್ತೆ" ಅಂದಿದ್ದಕ್ಕೆ ಮಗ ಸಿಟ್ಟಿನಿಂದ "ಯಾಕೋ ಬರ್ತಾ ಬರ್ತಾ ನೀವು ವಿಚಿತ್ರವಾಗಿ ಆಡ್ತಿದೀರ" ಅಂದಿದ್ದ.

ಇಂಥಾ ಒಂದೊಂದೇ ವಿಚಾರಗಳಿಂದಾಗಿ ತಂದೆ ಮಗನ ನಡುವೆ ಮಾತು ಕಡಿಮೆಯಾಗಿದೆ. ಬದುಕು ಹೇಗೆ ಬರುತ್ತೋ ಹಾಗೆ ಸ್ವೀಕರಿಸೋದು ಸುಂದರರಾಯರಿಗೆ ಅನಿವಾರ್ಯ ಅನಿಸಿದೆ. ಮಾತು ಬೆಳ್ಳಿ ಮೌನ ಬಂಗಾರ ಅನ್ನುವಂತೆ ಇದ್ದುಬಿಡಬೇಕು ಅಂದ್ಕೊಂಡು ಅವರೇ ಮಾತು ಕಡಿಮೆ ಮಾಡಿದ್ದಾರೆ. ಆಡಿದರೆ ದೇವರ ಫೋಟೋಗಳ ಮುಂದೆ, ಹೆಂಡತಿಯ ಫೋಟೋ ಮುಂದೆ ಮಾತಾಡ್ತಾರೆ. ಈಚೀಚೆಗೆ ಮನೆಗೆ ಪೇಪರ್ ಹಾಕೋನು, ಹಾಲು ಹಾಕೋನು ತರಕಾರಿ ತರೋನು ಕೂಡಾ ತಮ್ಮ ಬಗ್ಗೆ ಕೇವಲವಾಗಿ ಮಾತಾಡೋದು ಅವರಿಗೆ ಹಿಡಿಸ್ತಿಲ್ಲ. ಅವತ್ತು ತರಕಾರಿಯವನು ಬಂದಾಗ "ಎಷ್ಟಪ್ಪಾ ಕ್ಯಾರೆಟ್ಟು" ಅಂತ ಕೇಳಿದ್ದಕ್ಕೆ "ಅದೆಲ್ಲ ನಿಮಗ್ಯಾಕೆ ಸ್ವಾಮಿ ನಿಮ್ಮ ಸೊಸೆನ ಕರೀರಿ ಅವರು ದುಡ್ಡು ಕೊಡೋರು, ಅವರು ತರಕಾರಿ ತಗೋಳೋರು ಮಧ್ಯದಲ್ಲಿ ನಿಮ್ಮದೇನು" ಅಂದಿದ್ದ. ತರಕಾರಿಯವನು ಹೀಗಂದ ಅಂತ ಕೂಡಾ ಸೊಸೆ ಮಗನೊಂದಿಗೆ ಹೇಳಬಾರದು.

ಮೊಮ್ಮಗ ಎಸ್. ಎಸ್. ಎಲ್. ಸಿ. ಪಾಸಾದ ತಕ್ಷಣ ಮಗ ಅವನಿಗೆ ಲಕ್ಷ ರೂಪಾಯಿ ಕೊಟ್ಟು ಮೋಟರ್ ಸೈಕಲ್ ತೆಗೆಸಿಕೊಟ್ಟಾಗ ಸುಂದರರಾಯರು, "ನೋಡು ರಾಮು ಈಗಲೇ ಮಕ್ಕಳಿಗೆ ಷೋಕಿ ಕಲಿಸಿದ್ರೆ ಅವರಿಗೆ ದುಡ್ಡಿನ ಬೆಲೆನೂ ಗೊತ್ತಾಗೋಲ್ಲ, ಜೀವನದ ಅರ್ಥನೂ ಆಗೋದಿಲ್ಲ." ಅಂದಿದ್ದರು. ಮೊಮ್ಮಕ್ಕಳಿಗೆ ಪಾಕೆಟ್ ಮನಿ ಅಂತ ಮಗ ಅವರು ಕೇಳಿದಷ್ಟು ದುಡ್ಡು ಕೊಡ್ತಿದ್ದ. ಇನ್ನು ಮೊಮ್ಮಗಳಿಗೆ ಅದೆಂಥದೋ ವಿನ್ಯಾಸವಿರುವ ಬಟ್ಟೆಗಳು, ಅವುಗಳಿಗೆ ಎಷ್ಟು ದುಡ್ಡೋ ಬಲ್ಲವರು ಯಾರು. ಇನ್ನು ಅಂಥಾ ಬಟ್ಟೆಗಳನ್ನು ಹಾಕಿಕೊಂಡು ಓಡಾಡಿದರೆ ನೋಡಿದೋರು ಏನಂತಾರೆ ಅನ್ನೋ ಆತಂಕ ಸುಂದರರಾಯರಿಗೆ. ಅದಕ್ಕೇ ಒಂದು ದಿನ ಮೊಮ್ಮಗಳೊಂದಿಗೆ "ನೋಡಮ್ಮಾ ಹೆಣ್ಣು ಮಕ್ಕಳು ಈ ವಯಸ್ಸಿಗೇ ಇಂಥಾ ಉಡುಪು ಧರಿಸೋದು ಸರಿಯಲ್ಲ" ಅಂದಿದ್ದಕ್ಕೆ ಮೊಮ್ಮಗಳು "ತಾತ ನೀನು ಸುಮ್ನಿರು, ನನ್ನಿಷ್ಟ. ಅಪ್ಪ ಕೊಡಿಸ್ತಾನೆ ನಾನು ಹಾಕ್ಕೊತೀನಿ" ಅಂದಿದ್ಲು. ಮೊಮ್ಮಕ್ಕಳು ಎಲ್ಲಿ ಹೋಗ್ತಾರೆ, ಎಷ್ಟು ಹೊತ್ತಿಗೆ ಬರ್ತಾರೆ, ಅವರ ಸ್ನೇಹಿತರು ಯಾರು ಇವುಗಳ ಮೇಲೆ ಒಂದು ಕಣ್ಣಿಟ್ಟಿರು ಅಂತ ಮಗ ಸೊಸೆಗೆ ಕಿವಿ ಮಾತು ಹೇಳಿದ್ದರ ಪರಿಣಾಮ ಊಟಕ್ಕೆ ಕೂತಾಗ ಸುಂದರರಾಯರನ್ನು ಎಲ್ಲರೂ ತರಾಟೆಗೆ ತಗೊಂಡ್ರು. ಮೊಮ್ಮಕ್ಕಳು " ಏನ್ ತಾತ ನಮ್ಮ ಮೇಲೆ ಅಪ್ಪನ ಹತ್ರ ಫಿಟ್ಟಿಂಗ್ ಇಡ್ತೀರ, ಅಮ್ಮನ ಹತ್ರ ಅಪ್ಪನ ಬಗ್ಗೆ ಫಿಟ್ಟಿಂಗ್ ಇಡ್ತೀರ, ಇನ್ನು ಅಪ್ಪನ ಮೇಲೆ ನಮ್ಮತ್ರನೂ ಫಿಟ್ಟಿಂಗ್ ಇಡ್ತೀರ, ಅಮ್ಮನತ್ರನೂ ಫಿಟ್ಟಿಂಗ್ ಇಡ್ತೀರ. ನಿಮಗೆ ಮನೇಲಿ ಫಿಟ್ಟಿಂಗ್ ಇಡೋದೇ ಕೆಲಸಾನಾ" ಅಂತ ಕೇಳಿದ್ರು. "ಏನೋ ರಾಮು ನಿನ್ನ ಮಕ್ಕಳು ಹೀಗೆ ಮಾತಾಡ್ತಾರೆ" ಅಂತ ಮಗನ ಕಡೆ ನೋಡಿದರೆ ಮಗ ಊಟ ಮಾಡುತ್ತಾ ಅವರಿಗೆ ಉತ್ತರ ಕೊಡಿ ಅನ್ನುವಂತೆ ನೋಡಿದ. ಸೊಸೆ ಅನ್ನ ಹಾಕಿ ಮೊಸರು ಬಡಿಸಿ "ನಿಮ್ಮ ಪಾಡಿಗೆ ನೀವು ರಾಮ ಕೃಷ್ಣ ಅಂತ ಇರಬಾರದೇ? ನಿಮಗ್ಯಾಕೆ ಇಲ್ಲದ ಉಸಾಬರಿ. ವಯಸ್ಸಾದೋರ್ನ ಕಟ್ಕೊಂಡು ಏಗೋದು ನಮ್ಮ ಹಣೆಬರಹ" ಅಂದಳು. ಅವತ್ತು

ಸುಂದರರಾಯರಿಗೆ ಸಿಟ್ಟು ಬಂದು "ನನ್ನನ್ನು ಕಟ್ಕೊಂಡು ಯಾಕೆ ಏಗ್ತೀಯ, ಯಾವುದಾದರೂ ವೃದ್ಧಾಶ್ರಮಕ್ಕೆ ತಳ್ಳಿಬಿಟ್ಟು ನೀವೆಲ್ಲಾ ನೆಮ್ಮದಿಯಾಗಿರಿ" ಅಂದು ಊಟ ಮುಗಿಸಿ ಎದ್ದಿದ್ದರು. ಅವತ್ತು ರಾತ್ರಿಯೆಲ್ಲಾ ಅವರಿಗೆ ನಿದ್ದೆ ಬರಲಿಲ್ಲ. ವೃದ್ಧಾಶ್ರಮಕ್ಕೆ ಹೊರಟು ಹೋದರೆ ಹೇಗೆ ಎನ್ನುವ ಪ್ರಶ್ನೆ ಅವರನ್ನು ಇಡೀ ರಾತ್ರಿ ಕಾಡುತ್ತಿತ್ತು.

ಸುಂದರರಾಯರ ತಂದೆ ಆಗಿನ ಕಾಲದಲ್ಲಿ ನೂರಿಪ್ಪತ್ತು ಎಂಭತ್ತು ಅಳತೆಯ ಜಾಗದಲ್ಲಿ ಬಹಳ ದೊಡ್ಡದಾದ ಮನೆ ಕಟ್ಟಿಸಿದ್ದರು. ಆಗ ಮನೆ ತುಂಬಾ ಜನ, ಬರೋರು ಹೋಗೋರು ಜಾಸ್ತಿ, ಮಕ್ಕಳ ನಾಮಕರಣ, ಜುಟ್ಟು, ಮುಂಜಿ ಇವೆಲ್ಲಾ ಮನೇಲೇ ನಡೀತಾ ಇದ್ದಿದ್ದು. ನೂರಿನ್ನೂರು ಜನ ಬಂದರೂ ಊಟಕ್ಕೆ ಹಾಕಲು ತೊಂದರೆ ಇರಲಿಲ್ಲ. ಬರುಬರುತ್ತಾ ಜನ ಬರೋದು ಕಡಿಮೆ ಆಯಿತು. ಒಬ್ಬೊಬ್ಬರೇ ಖಾಲಿ ಆದರು. ಒಂದೊಂದು ಸಾರಿ ನಮಗೆ ಇಷ್ಟು ದೊಡ್ಡ ಮನೆ ಬೇಕೇ ಅನಿಸಿಬಿಡುತ್ತೆ. ಆದರೆ ಅದು ಅಪ್ಪನ ಕಾಲದ ಆಸ್ತಿ. ಬಹಳ ದೊಡ್ಡ ಮನೆ. ಹೇಗಾದರೂ ನಾನಿರುವ ತನಕ ಕಾಪಾಡಿಕೊಳ್ಳೋಣ ಅನಿಸಿತ್ತು.

ಒಂದು ದಿನ ಮಗ "ಅಪ್ಪಾ ಇಷ್ಟು ದೊಡ್ಡ ಮನೆ ನಮಗೆ ನೋಡ್ಕೊಳೋದು ಕಷ್ಟ ಅದಿಕ್ಕೆ ಈ ಮನೇನ ಅಪಾರ್ಟ್‌ಮೆಂಟ್ ಕಟ್ಟೋರಿಗೆ ಕೊಡೋಣ. ನಮಗೆ ಒಂದು ಅಪಾರ್ಟ್‌ಮೆಂಟ್ ಕೊಟ್ಟು ಜೊತೆಗೆ ದುಡ್ಡೂ ಕೊಡ್ತಾರೆ" ಅಂದ. ಸುಂದರರಾಯರು ಒಪ್ಪಲಿಲ್ಲ. ಮಗ ಒತ್ತಾಯಿಸಿದ. ಸುಂದರರಾಯರು "ನಾನು ಬದುಕಿರೋತನಕ ಇದು ಸಾಧ್ಯವಿಲ್ಲ" ಅಂದರು. ಒಳ್ಳೆ ರಾಮಾಯಣ ಇವರನ್ನು ಕಟ್ಕೊಂಡು ಅಂದು ಮಗ ಸೊಸೆ ಅವರ ಜೊತೆ ಮಾತಾಡೋದನ್ನೇ ಬಿಟ್ಟರು. ಬರುಬರುತ್ತಾ ಸೊಸೆ ಹೇಳಿದ ಹೊತ್ತಿಗೆ ಸ್ನಾನ ಮಾಡಬೇಕು, ಅವಳು ಕೊಟ್ಟಾಗ, ಕೊಟ್ಟ ತಿಂಡಿ ತಿನ್ನಬೇಕು, ಮನೆಗೆ ನಮ್ಮ ಸ್ನೇಹಿತರು ಬರ್ತಾರೆ ನೀವು ಎಲ್ಲಾದರೂ ಹೊರಗೆ ಹೋಗಿ ಬನ್ನಿ ಅಂದರೆ ಹೋಗಬೇಕು. ಮಗ ತಂದುಕೊಟ್ಟ ಷರಟು ಹಾಕ್ಕೊಬೇಕು, ತಂದುಕೊಟ್ಟ ಚಪ್ಪಲಿ ಮೆಟ್ಟಬೇಕು. "ಅಲ್ವೋ ನನಗೆ ಬಟ್ಟೆ, ಚಪ್ಪಲಿ ಕೊಂಡ್ಕೊಳೋದಾದ್ರೆ ನನ್ನನ್ನೂ ಕರ್ಕೊಂಡು ಹೋಗೋ" ಅಂದ್ರೂ ಕೇಳಲ್ಲ. ಹಾಕ್ಕೊಳ್ಳಿಲ್ಲ ಅಂದ್ರೆ ಅದಕ್ಕೂ ಸಿಟ್ಟು. ನನ್ನ ಸ್ನೇಹಿತರು ಕಾಶಿಗೆ ಟೂರ್ ಹೊರಟಿದಾರೆ ನಾನೂ ಹೋಗಿಬರ್ತೀನಿ ಅಂದ್ರೆ ಈ ವಯಸ್ನಲ್ಲಿ ಅಲ್ಲೆಲ್ಲಾ ಹೋಗಿ ಏನಾದರೂ ತೊಂದರೆ ಮಾಡ್ಕೊಂಡ್ರೆ ನಿಮ್ಮನ್ನು ನೋಡೋರು ಯಾರು? ಎಲ್ಲಿಗೂ ಬೇಡ ಸುಮ್ನಿರಿ ಅಂತಾನೆ. ಹಠ ಹಿಡಿದು ಈ ವಯಸ್ನಲ್ಲಿ ಮಗನನ್ನು ಎದುರು ಹಾಕ್ಕೊಳೋದು ಸರಿನಾ ಅಂತ ಯೋಚಿಸ್ತಾರೆ.

ಈಗೀಗ ಮನೇಲಿ ಅವರಿಗೆ ಯಾವ ಕೆಲಸ ಮಾಡಲೂ ಬಿಡಲ್ಲ. ನಿಮಗೆ ವಯಸ್ಸಾಗಿದೆ ಸುಮ್ನೆ ಮನೇಲಿ ಇರಿ ಅಂತಾರೆ. ನನಗೇನು ಮಹಾ ವಯಸ್ಸಾಗಿದೆ. ತರಕಾರಿ ತರ್ತೀನಿ ಅಂದ್ರೆ ಬೇಡ. ವಾಕಿಂಗ್ ಆದ ಹಾಗಾಗುತ್ತೆ ಲೈಟ್ ಛಾರ್ಜ್, ನೀರಿನ ಛಾರ್ಜ್ ಕಟ್ಟಿಬರ್ತೀನಿ ಅಂದ್ರೆ ಮಗ ಸುಮ್ನೆ ಟ್ರಾಫಿಕ್ನಲ್ಲಿ ಹೋಗಬೇಡಿ ಅವುಗಳನ್ನು ಆನ್ ಲೈನಲ್ಲಿ ಕಟ್ತೀನಿ ಅಂತಾನೆ. ಹಾಗಾದರೆ ನಾನೇನು ಮಾಡಲಿ? ಒಂದೊಂದು ಸಾರಿ ಸುಂದರರಾಯರ ಸ್ನೇಹಿತರು, ಸಮಕಾಲೀನರು ಮನೆಗೆ ಹುಡುಕಿಕೊಂಡು ಬಂದಾಗ ಸೊಸೆಗೆ ನನ್ನ ಸ್ನೇಹಿತರು ಬಂದಿದಾರೆ ಸ್ವಲ್ಪ ಕಾಫಿ ಕೊಡ್ತಿಯಾಮ್ಮ ಅಂದರೆ ಮುಖ ಸಿಂಡರಿಸುತ್ತಾಳೆ. ಸ್ನೇಹಿತರು ಎದ್ದು ಹೋದ

ಮೇಲೆ ಸುಮ್‌ಸುಮ್ನೆ ಯಾರ್ಯಾರನ್ನೋ ಮನೆಗೆ ಸೇರಿಸಬೇಡಿ. ಬಂದೋರಿಗೆಲ್ಲಾ ನಾನು ಕಾಫಿ ಮಾಡಿಕೊಡೋಕೆ ಆಗಲ್ಲ" ಅಂತಾಳೆ ಸೊಸೆ. ಇಂಥಾ ಸನ್ನಿವೇಶಗಳಲ್ಲಿ ಅವರಿಗೆ ಹಿಂದೊಮ್ಮೆ ಅವರ ಸ್ನೇಹಿತ ಪಟ್ಟಾಭಿ ಹೇಳಿದ ಮಾತು ನೆನಪಾಗಿ ಬುಕ್ ರ್‍ಯಾಕ್‌ನಲ್ಲಿರುವ ಭಗವದ್ಗೀತೆಯನ್ನು ಕೈಗೆ ತೆಗೆದುಕೊಳ್ಳುತ್ತಾರೆ.

ಇಷ್ಟೆಲ್ಲಾ ಆತಂಕಗಳ ನಡುವೆ ಅವರನ್ನು ಈಗ ಕಾಡುತ್ತಿರುವ ಪ್ರಶ್ನೆ ಎಂದರೆ ನಾನೂ ಸ್ನೇಹಿತರ ಮನೆಗೆ ಹೋಗಬಾರದು. ಸ್ನೇಹಿತರೂ ನನ್ನ ಮನೆಗೆ ಬರಬಾರದು. ಹಾಗಾದರೆ ನನ್ನ ಬದುಕು? ಸೊಸೆ ಅಂದಿದ್ದನ್ನ ಮಗನ ಹತ್ತಿರ ಹೇಳೋ ಹಾಗಿಲ್ಲ. ಮಗ ಅಂದಿದ್ದನ್ನ ಸೊಸೆ ಹತ್ರ ಹೇಳೊ ಹಾಗಿಲ್ಲ. ಇನ್ನು ಮೊಮ್ಮಕ್ಕಳ ತಂಟೆಗೇ ಹೋಗೋ ಹಾಗಿಲ್ಲ. ಒಟ್ನಲ್ಲಿ ಅನ್ನೋ ಹಾಗಿಲ್ಲ ಅನುಭವಿಸೋ ಹಾಗಿಲ್ಲ ಅನ್ನುವ ಪರಿಸ್ಥಿತಿ ತಮ್ಮದು. ಇಂಥಾ ಸಂಕಟಗಳ ನಡುವೆ ಸುಂದರರಾಯರನ್ನು ಆಗಾಗ ಕಾಡುತ್ತಿರುವ ಪ್ರಶ್ನೆ ಅಂದ್ರೆ "ಅಪ್ಪ ಅಂದ್ರೆ ವಿಲ್ಲನ್ನಾ ?" ■

---

## ಸಾಹೇಬರ ತೀರ್ಮಾನ

ಶ್ರೀಮಾನ್ ತೇಜು ಸಾಹೇಬರು ಬಹಳ ತಿಳಿದವರು. ಪಂಡಿತರಿಂದಲೂ ಮಾನ್ಯತೆ ಪಡೆದವರು. ಸರ್ವವಿಧದಲ್ಲೂ ಮಾನ್ಯರಾದ ಅವರನ್ನು ಕರೆಯದ ಸಂಸ್ಥೆಗಳೇ ಇರಲಿಲ್ಲ. ಆ ಸಂಸ್ಥೆಗಳೆಲ್ಲಾ ಅವರ ಜಾತಿಯವರದ್ದೇ ಅಗಿದ್ದು ಅವರನ್ನು ಜಾತಿ ಆಧಾರದ ಮೇಲೆ ಆಹ್ವಾನಿಸುತ್ತಿದ್ದರು ಎಂದೂ ಹೇಳುವವರಿದ್ದಾರೆ. ಅವರನ್ನು ಸಾಹೇಬರು ಕಿಡಿಗೇಡಿಗಳು ಎನ್ನುತ್ತಾರೆ.

ಸಾಹೇಬರ ಮಾತೆಂದರೆ ವೇದವಾಕ್ಯ. ಇಂತಹ ಸಾಹೇಬರಿಂದ ಅಂದು ಸಮಯ ಪ್ರಜ್ಞೆಯ ಬಗ್ಗೆ ಅಮೋಘ ಭಾಷಣ. ಭಾಷಣಾನಂತರ ಸಂಸ್ಥೆಯ ಮುಖ್ಯಸ್ಥರನ್ನು ಕುರಿತು "ಹೇಗಿತ್ತು ಭಾಷಣ?" ಎಂದರು.

ಮುಖ್ಯಸ್ಥರು ಬಲು ಗಿಡ್ಡ. ಇವರನ್ನು ಆಕಾಶಕ್ಕೆ ಏರಿಸುವಷ್ಟು ತಾಕತ್ತು ಅವರಲ್ಲಿರಲಿಲ್ಲ. ತಮ್ಮ ಶಕ್ತ್ಯಾನುಸಾರ ಅಟ್ಟಕ್ಕಂತೂ ಏರಿಸಿದರು. ಆದರೆ ಅಮ್ಮಾವ್ರು?

"ಸುಡಬೇಕು ಆ ಮೈಕ್ ಕಂಡುಹಿಡಿದವನನ್ನ" ಎಂದು ಆ ಅಜ್ಞಾತ ವಿಜ್ಞಾನಿಯ ಜನ್ಮ ಜಾಲಾಡಿದರು.

"ಏಕೆ? ಏನಾಯಿತು? ಭಾಷಣ ಸರಿಯಿರಲಿಲ್ಲವೇ?"

"ಇತ್ತಲ್ಲ. ಎಲ್ಲಾ ಸಭಿಕರೂ ತಲೆದೂಗಿದ್ದೂ ದೂಗಿದ್ದೇ"

"ಮತ್ತೇ..."

"ಎಲ್.ಕೆ.ಜಿ. ಮಕ್ಕಳಿಗೆ ಸಮಯ ಪ್ರಜ್ಞೆಯ ಬಗ್ಗೆ ಭಾಷಣ ಮಾಡಿದ್ರೆ ನಮ್ ಟೈಮೂ ಹಾಳು ಅಂತ ತಿಳಿಯಬೇಡ್ವೇ?" ಸಾಹೇಬರು ಅಮ್ಮಾವ್ರ ಮಾತಿಗೆ ತಲೆದೂಗಿದರು. ಅವರಿಗೆ ತಮ್ಮ ತಪ್ಪಿನ ಅರಿವಾಗಿತ್ತು.

ಆ ಕ್ಷಣವೇ ತೀರ್ಮಾನವನ್ನೂ ಮಾಡಿದರು.

ಅಂದಿನಿಂದ ಅವರ ಯಾವ ಭಾಷಣಕ್ಕೂ ಅಮ್ಮಾವ್ರನ್ನು ಕರೆದೊಯ್ಯಲೇ ಇಲ್ಲ.

**ಎನ್ ರಾಮನಾಥ್**

# ಅಜ್ಜಿ ಮತ್ತು ಆನ್ಲೈನ್ ಸ್ಕೂಲ್

**ಇ.ಆರ್. ರಾಮಚಂದ್ರನ್**

ಅಜ್ಜಿ ಅಶ್ವತ್ಥ ಕಟ್ಟೆ ಮುಂದೆ ಕೂತಿದ್ದರು. ಈಗೀಗ ಕೋವಿಡ್ 19 ಬಂದಾಗಿಂದ ಅಜ್ಜಿದು ಮಾತಿಲ್ಲ. ಯಾವ ವಿಷಯ ಎತ್ತಿದರೂ ಏನಾದರೂ ಹೇಳಲು ಚಪಲವಿದ್ದ ಅಜ್ಜಿ ಈಗ ಫುಲ್ ಚುಪ್. ಅಜ್ಜಿ ಕರೊನಾಗೆ ಹೆದರಿಬಿಟ್ಟಿದಾರಾ  ಏನು ಕಥೆ?'

'ಅಜ್ಜಿ! ನೀನು ಏನೂ ಹೆದರಬೇಕಾಗಿಲ್ಲ. ನೀನು ಮನೆಯಲ್ಲೇ ಇದ್ರೆ ಏನೂ ಆಗಲ್ಲ. ನೀನು ಹರಿಕಥೆಗೆ ಹೋಗೋಹಾಗೆ ಇಲ್ಲ. ನೀನು ಅದನ್ನು ನಿನ್ನ ಟಾಬ್ಲೆಟ್ನಲ್ಲೇ ನೋಡಬಹುದು.'

'ನನಗೆ ಗೊತ್ತೋ! ನಾನೇ ಆ ಲಿಂಕ್ನ ಡೌನ್ಲೋಡ್ ಮಾಡಿದ್ದು. ನನಗೆ ಹೆದರಿಕೆ ಏನೂ ಇಲ್ಲ. ನಾನು ಮಕ್ಕಳ ಸ್ಕೂಲಿನ ಬಗ್ಗೆ ಯೋಚಿಸ್ತಿದ್ದೆ..ಪಾಪ ಮಕ್ಕಳು ಏನು ತಪ್ಪು ಮಾಡಿದ್ವೋ. ಅವರು ಸ್ಕೂಲಿಗೆ ಹೋಗೋದಕ್ಕೂ ಬಂತು ಧಕ್ಕೆ..' ಬಂತು.

'ನಿನಗೆ ಏನು ಅನ್ನಿಸ್ತಿದೆ ಅಜ್ಜಿ! ಮಕ್ಕಳು ಸ್ಕೂಲಿಗೆ ಹೋಗ್ಬೇಕಾ ಅಥವ ಆನ್ ಲೈನ್ ನಲ್ಲಿ ಕಲೀಬೇಕಾ.. ನೀನೂ ಈಗೀಗ ಆನ್ಲೈನ್ನಲ್ಲಿ ಕಲಿತೆ..'

'ನನ್ನ ಕೇಳಿದ್ರೆ ಮುಂದೆ  ಇದೇ ತರಾ ಒಂದಲ್ಲ ಒಂದು ವೈರಸ್ ಬರ್ತಾನೆ ಇರುತ್ತೆ. ಮುಂಚೆ ಬಂತು ಸಾರ್ಸು.  ಆಮೇಲೆ ಎಬೊಲ.. ಈಗ ಕೋವಿಡ್.. ಮುಂದೆನೂ  ಈತರಹದ್ದು ಬಂದೇ ಬರುತ್ತೆ.. ಬೇರೆ ಬೇರೆ ರಾಷ್ಟ್ರಗಳು ತಮ್ಮದೇ ಆದ ವೈರಸ್ಸಗಳನ್ನು ಬಿಡಬಹುದೋ ಏನೋ. ಈಗ ಬಾವುಲಿ ತಿನ್ನೋವ್ರು ಇದನ್ನು ಬಿಟ್ಟೀದಾರೇಂತ ಎಲ್ಲರಿಗೂ ಸಂದೇಹ.. ಇದು ನಿಜವಾದ್ರೆ ಮುಂದೆ ತಿಮಿಂಗಲ ತಿನ್ನೋವ್ರೋ ಅಥವ ಮುಂಗುಸಿ ಮಾಂಸ ಮುಕ್ಕೋವ್ರೊ ಅವನದೇ ಒಂದು ವೈರಸ್ನು ಬಿಡಬಹುದು. ಆವಾಗ ಅದು ಸೋಪಿನಿಂದ ತೊಳೆದ್ರೆ ಹೋಗಲ್ಲ.. ಕೆರೊಸಿನ್ ನಿಂದ ಹೋಗುತ್ತೆ ಅಂತ ಎಲ್ಲ ಕೆರೊಸಿನ್ಗೆ ಹುಡುಕ್ಕೊಂಡು ಹೋಗತಾರೆ.. ತಿಗಣೆ ಕಚ್ಚಿದ್ರೆ ಉಬ್ಬುಸ ಬಂದು ಪ್ರಾಣ ಹೋಗುತ್ತೆ ಅಂತ ತಲೆಯಿಂದ ಕಾಲಿನವರಿಗೆ ಮಾಸ್ಕು ಅಥವ ಮುಸುಕು ಹಾಕಬೇಕು ಅಂತ ಡಬ್ಲ್ಯು ಎಚ್ ಒ ಹೇಳುತ್ತೆ.'

'ಅಜ್ಜಿ! ರಿಲಾಕ್ಸ್.. ಇದು ಅಲ್ಲಿಯವರಿಗೆ ಹೋಗಲ್ಲ..'

'ಮೋದಿ ಬಂದು ನಿಮ್ಮ ನಿಮ್ಮ ಟೆರೇಸ್ಗೆ ಹೋಗಿ ಬಲೂನ್ ಬಿಡಿ, ಗಾಳಿಪಟ ಬಿಡಿ ಅನ್ತಾರೆ. ಲೋ ನಿಲ್ಲೊ.. ನೀನು ಜನವರಿ ಫೆಬ್ರವರಿಗೆ ಹೇಳ್ತಿದ್ದೆ. ಹೊಸ ದಶಕ ಶುರುವಾಗ್ತದೆ.. ಎಲ್ಲಾ ಹೊಸ ಹೊಸದು..ಮೋದಿ ವಾರಣಾಸಿನ ಉಜ್ಜಿಉಜ್ಜಿ ಹೊಳಿಯೋಹಾಗೆ ಮಾಡಿದಾರೆ... ಮಾರ್ಚಿನಲ್ಲಿ ವಾರಣಾಸಿಗೆ ಕರೆದುಕೊಂಡು ಹೋಗ್ತೀನಿ ಅಂತ ಹೇಳಿ ಮನೆಯಲ್ಲೇ 3 ತಿಂಗಳಿಂದ ವನವಾಸಕ್ಕೆ ಹಾಕಿದ್ಯಲ್ಲೋ..!'

'ಅಜ್ಜಿ! ಪ್ರಪಂಚದಲ್ಲಿ ಯಾರಿಗೆ ಗೊತ್ತಿತ್ತು ಹೀಗಾಗುತ್ತೆ ಅಂತ. ಅದಿರ್ಲಿ ಮಕ್ಕಳ ಸ್ಕೂಲಿನ ವಿಚಾರ ಏನನ್ತಿಯಾ?'

'ಸಾವಿರಾರು ಮಕ್ಕಳು ಸ್ಕೂಲಿಗೆ ಹೋದರೆ... ಹೋಗುವ ಆಟೊದಿಂದಲೇ ಕರೊನ ಪಾಸಿಟಿವ್  ಮಾರನೇ ದಿನವೇ ಬರುತ್ತೆ. ಹತ್ತುಮಕ್ಕಳ್ನ ತುಂಬಿಕೊಂಡು,

ಒಬ್ಬ ಹುಡುಗ ಪೋಲಿಸಿನವನ ತರಹ ನಿಂತು ಕೈನ ಎಡಗಡೆ ಬಲಗಡೆ ತೋರಿಸ್ತಾ ನಿಂತಿರುತ್ತಾನಲ್ಲ. ಅವೆಲ್ಲಾರ್ಗು ಬರುತ್ತೆ..ಬಸ್ನಲ್ಲಿ ಹೋದ್ರೆ ಕ್ಲೀನರ್, ಡ್ರೈವರ್ನಿಂದ ಎಲ್ಲಾಮಕ್ಳಿಗೆ ಬರೋದು ಗ್ಯಾರಂಟಿ. ಸ್ಕೂಲಿನಲ್ಲಿ ಸುಸು, ಇಶ್ಶಿ ಮಾಡ ಬೇಕು.. ಮಾಡಿಸಬೇಕು ಅಂತ ಆಯ ಕರ್ಕೊಂಡು ಹೋದಾಗ ಅವಕ್ಕೆ ಬರುತ್ತೆ. ಅಲ್ಲಿ ಒಂದೋ ಎರಡೋ ಟಾಯ್ಲೆಟ್ ಇರುತ್ತೆ.. ಮುಂಚೆ ಅವರ ಮಿಸ್ ಗಳಿಗೆ ಬರುತ್ತೆ ಆಮೇಲೆ ಹುಡುಗರಿಗೂ ಬರುತ್ತೆ.. ಸೋಷಲ್ ಡಿಸ್ಟೆನ್ಸ್ ಎಲ್ಲಿರುತ್ತೋ.. ಇದೆಲ್ಲಾ ಆಗದ ಸಮಾಚಾರ.. ನರಕ ಆಗುತ್ತೆ.. ವ್ಯಾಕ್ಸಿನ್ ಬರೋತನಕ ಸ್ಕೂಲಿನ ಮಾತೇ ಬರಬಾರದು'.

'ಹಾಗಿದ್ರೆ ಸ್ಕೂಲೇ ಬೇಡ್ವಾ?'

'ಅದೂ ಒಳ್ಳೆದೇ ಒಂದು ರೀತೀಲಿ.. ಸಿಕ್ಕಾಪಟ್ಟೆ ಫೀಸ್ ಕೀಳ್ತಾರೆ..ಈ ಫಂಡು ಆ ಫಂಡು ಅಂತ.. ಎಬೊಲ ರನ್ ಅಂತ ದುಡ್ಡು ಕಿತ್ಕೊಂಡಿದ್ರು.. ಈ ತಂಟೇನೇ ಬೇಡ.. ಮಕ್ಕಳು ಈಗಲೇ ಸ್ಮಾರ್ಟ್ ಫೋನ್ನಲ್ಲಿ ಎಕ್ಸ್‌ಪರ್ಟ್ ಆಗಿದ್ದಾರೆ. ನಮ್ಮ ಸೀತಮ್ಮನ ಮರಿಮಕ್ಕಳು ಅದರಲ್ಲಿ ಹಾಡೋ ವಿಡಿಯೋ ಹಾಕದಿದ್ರೆ ಆದು ಊಟ ಮಾಡೊದಿಲ್ಲ.. ತಟ್ಟೆಯನ್ನೇ ಕಿತ್ತು ಬಿಸಾಕುತ್ತೆ.. ಈಗ ಅದೇ ತನಗೆ ಏನು ಬೇಕೋ ಹಾಕಿಕೊಂಡು ತೆಪ್ಪಗೆ ಅದನ್ನು ನೋಡ್ತಾ ಊಟ ಮಾಡುತ್ತೆ.. ಸೀತಮ್ಮ ಊಟದ ತಟ್ಟೆ ತೊಗೊಂಡು, ನಾನು ನಿನ್ನ ಎತ್ತಿಕೊಂಡು, ಬೀದಿಲಿ ಕಾಗೆ ತೋರಿಸ್ತೀನಿ, ಹಸೂ ತೋರಿಸ್ತೀನಿ ಅಂತ ಹೋಗ್ತಿದ್ನಲ್ಲಾ ಅವ್ರು ಹಾಗೆ ಹೋಗಲ್ಲ.. ಪೂರ್ತಿ ಊಟ ಒಂದು ಕಣ್ಣು ಫೋನ್ ಮೇಲೆ ಇಟ್ಟು ಮಗು ಊಟ ಚೆನ್ನಾಗಿ ಮಡುತ್ತೆ'.

'ಅದಕ್ಕು ಸ್ಕೂಲಿಗೂ ಏನು ಸಂಬಂಧ?'

'ನಿನ್ನ ತಲೆ! ಟೆಕ್ನಾಲಜಿ ಈ ಮಕ್ಕಳಿಗೆ ಹೇಗೆ ಒಪ್ಪುತ್ತೆ ನೋಡು.. ನಿನಗೆ ಮಗ್ಗಿ ಕಲಿಸಕ್ಕೆ ಹೋಗಿ ನಿನ್ನ ತೊಡೆ ಜಿಗುಟಿ ಜಿಗುಟಿ, ನಿಮ್ಮಜ್ಜನ ಬೆಟ್ಟುಗಳು ಸವ್ದು ಹೋಯ್ತು! ಇದೇ ಒಳ್ಳೆ ಸಮಯ.. ಮಕ್ಕಳಿಗೆ ಆನ್ಲೈನ್ ಶುರು ಮಾಡಬೇಕು. ಈಗ ಮನೆಯಲ್ಲೇ ಮೌಸು ಹಿಡಿದು ಮಕ್ಕಳು ಈ ವಯಸ್ಸಿನಲ್ಲೇ ಶುರು ಮಾಡಿದ್ರೆ ಒಂದೆರೆಡು ವರ್ಷದಲ್ಲೇ ಹುಲಿಗಳಾಗ್ತಾರೆ. ಸುಂದರ್ ಪಿಚೈ ಅಪ್ಪನ ಹಾಗೆ ಆಗ್ತಾರೆ. ಮನೆಯಲ್ಲೇ ಇರೋದ್ರಿಂದ ಅವ್ರು ಅಡುಗೆನೂ ಕಲಿತು ನಳಪಾಕ ಇಳಿಸ್ಬಹುದು... ಈಗ ನೋಡು ಎಷ್ಟು ಫಜೀತಿ ಆಯ್ತು.. ನಿನಗೆ ಅಡುಗೆ ಮಾಡಕ್ಕೆ ಬರೋದಿಲ್ಲ ಅಂತ ನಮಗೆಲ್ಲಾ ಎಷ್ಟು ತೊಂದ್ರೆ ಆಯ್ತು.. ಸದ್ಯ ನೀನು ಗುಡಿಸೋದು, ಸಾರಿಸೋದು ಎಷ್ಟು ಚೆನ್ನಾಗಿ ಮಾಡ್ತಿಯಾ ಅಂತ ನನಗೆ ಗೊತ್ತೇ ಇರ್ಲಿಲ್ಲ..! ನಮ್ಮ ಬಾತ್ ರೂಮೆಲ್ಲಾ ಹೊಳೀತಿದೆ! ನಮ್ಮ ಮಕ್ಕಳು ಮುಂದೆ ಹಾಗೆ ಆಗ್ತಾರೆ.. ಮನೆಗೆ ಬೇಕಾದ ಸಾಮಾನುಗಳು ಅವ್ರೇ ಆನ್ಲೈನಲ್ಲಿ ತರಿಸಿ ಗೂಗಲ್ ಪೆ ನಲ್ಲಿ ದುಡ್ಡು ಕೊಡ್ತಾರೆ. ಇವತ್ತಿನ ಮಕ್ಕಳು ಈಗಿನಿಂದಲೇ ತಯಾರಿ ಆಗ್ತಾರೆ..ಇದರಿಂದ ವೃಥಾ ಕರ್ಚು ಕಡಿಮೆ ಆಗುತ್ತೆ... ಸ್ಕೂಲಿನ ಬಿಲ್ಡಿಂಗ್, ಟೇಬಲ್, ಕುರ್ಚಿಗಳು..ಹುಡುಗರ ಬುಕ್,ಪೇಪರ್, ಪೆನ್, ಮಸಿ ಇತ್ಯಾದಿ.. ಆಟೋಲಿಹೋಗೋದು, ಅಲ್ಲಿ ಟಾಯ್ಲೆಟ್ ಅದೆಲ್ಲಾ ನಿಂತುಹೋಗುತ್ತೆ... ಪೋಷಕರಿಗೆ ಗವರ್ನಮೆಂಟು ಕಂಪ್ಯೂಟರ್ ತೊಗೊಳಕ್ಕೆ ಕಂತಲ್ಲಿ ಕಟ್ಟೋಹಾಗೆ ಸಹಾಯ ಮಾಡ್ಬೇಕು ಅಷ್ಟೆ.'

'ಮನೆ ಸಾಮಾನು ಅವ್ರೇ ತರಿಸ್ತಾರೆ ಅಂದೆ.. ಅದರಲ್ಲಿ ಗೋಡಂಬಿ, ದ್ರಾಕ್ಷಿ,

ಕ್ಯಾಡ್ಬರಿ ಚಾಕೊಲೆಟ್, ಮಾಗ್ನಮ್ ಐಸ್ಕ್ರೀಮ್ ಸಿಕ್ಕಾಪಟ್ಟೆ ಇರದ ಹಾಗೆ ನೋಡ್ಕೋಬೇಕು! ಆದ್ರೆ ಬೇರೆ ಹುಡುಗರ ಜೊತೆ ಇವರು ಯಾವಾಗ ಬೆರೆಯುವುದು? ಅದು ಬೇಡ್ವೇ?

'ಅದು ಬೇಕೇ ಬೇಕು. ಇಲ್ಲದಿದ್ದರೆ ಗೂಬೆಗಳ ಹಾಗೆ ಬೆಳೆಯುತ್ತಾರೆ. ವಾರಕ್ಕೆ ಎರಡು ದಿವಸ ಬೇರೆ ಮಕ್ಕಳ ಜೊತೆ ಆಟ, ಓಟ, ಊಟ. ಅದನ್ನು ದೊಡ್ಡ ಮೈದಾನದಲ್ಲಿ ಸ್ಕೂಲಿನವರೇ ವ್ಯವಸ್ಥೆ ಮಾಡಬೇಕು. ಇನ್ನೊಂದು ವಿಷಯ..'

'ಏನದು'?

'ನಮ್ಮ ಪುಢಾರಿ ಮಿನಿಸ್ಟ್ರುಗಳಿಗೆ ಸ್ಕೂಲಿಗೆ ಹೋಗಿ ಒಣ ಮಹೋತ್ಸವ, ಮಕ್ಕಳ ದಿನಾಚರಣೆ ಅಂತ ಅಲ್ಲಿ ಹೋಗಿ ಭಾಷಣ ಬಿಗಿದು ಬಿಗಿದು ಅಭ್ಯಾಸವಾಗಿ ಹೋಗಿದೆ. ತಿಂಗಳಿಗೆ ಒಮ್ಮೆ ಯಾರನ್ನಾದ್ರೂ ಕರೆಸಿ ಮಕ್ಕಳು ಆಡುವಾಗ ಅವರ ಎದುರು ಮೈಕ್ ಇಟ್ರೆ ಅವ್ರು ಒದರ್ತಾ ಇರ್ಲಿ..ಮಕ್ಳು ಅವ್ರ ಪಾಡಿಗೆ ಆಟ ಆಡ್ತಾ ಇರ್ತಾರೆ!'

'ಅಜ್ಜಿ!'

■

---

**ಅಪರಂಜಿ ಓದುಗ / ಲೇಖಕ ಬಳಗಕ್ಕೆ**
**ಗೌರೀ ಗಣೇಶ ಹಬ್ಬದ ಶುಭಾಶಯಗಳು**



# ಒಂದು ಸ್ಪರ್ಧೆ

ಈ ಸಂಚಿಕೆಯಲ್ಲಿರುವ **"ಶಿವರಾಮ ಕಾರಂತರ ಕ್ರಿಕೆಟ್ ಕಾಮೆಂಟರಿ'** ಲೇಖನವನ್ನು ನೋಡಿ ಮಿತ್ರ ಆನಂದರು ನಮ್ಮ ಓದುಗರಿಗೆ ಮತ್ತು ಬರಹಗಾರ ಬಳಗದವರಿಗೆ ಈ ಬಗೆಯಲ್ಲಿ ಅಣಕು ಗದ್ಯವನ್ನು ರಚಿಸುವ ಸವಾಲನ್ನೇಕೆ ನೀಡಬಾರದು ಎಂದು ಉದ್ಗರಿಸಿದರು. ಹಾಗಾಗಿ ಬಾಲಬೋಧೆಯ ನೀತಿಯ ಕಥೆಯೊಂದನ್ನು ಕೆಳಗೆ ನೀಡಿದ್ದೇವೆ. ಇದನ್ನು ಖ್ಯಾತ ಸಾಹಿತಿಗಳಾದ, ಕುವೆಂಪು, ಬೇಂದ್ರೆ (ಹೌದು, ಅಣಕು ಕವನಕ್ಕೂ ಅವಕಾಶವಿದೆ), ಮಾಸ್ತಿ, ತೇಜಸ್ವಿ, ಲಂಕೇಶ್, ಶ್ರೀನಿವಾಸ ವೈದ್ಯ ಅಥವಾ ನಿಮ್ಮ ಮೆಚ್ಚಿನ ಯಾವುದೇ ಸಾಹಿತಿಯ ಶೈಲಿಯಲ್ಲಿ ಒಂದು ಪುಟಕ್ಕೆ ಮೀರದಂತೆ ಬರೆದು ಕಳಿಸಿ. ಕಥೆಯ ಪೂರ್ಣ ಪಾಠವಿರಬೇಕೆಂಬ ನಿಯಮವೇನೂ ಇಲ್ಲ. ಶೈಲಿಗೆ ಇಲ್ಲಿ ಪ್ರಾಧಾನ್ಯ. ಪ್ರಯತ್ನಿಸಿ. ಗುಡ್ ಲಕ್.

ನಮಗೆ ತಲುಪಲು ಕೊನೆಯ ದಿನಾಂಕ : 31–8–2020

***

**ಗೋದಾವರಿ ನದೀ ತೀರದಲ್ಲಿ ಒಂದು ಆಲದ ಮರ ಇತ್ತು. ಆ ಮರದಲ್ಲಿ ಗಿಳಿಗಳು ಗೂಡನ್ನು ಕಟ್ಟಿಕೊಂಡು ತಮ್ಮ ಮರಿಗಳೊಡನೆ ಬಹಳ ದಿನಗಳಿಂದ ವಾಸ ಮಾಡಿಕೊಂಡಿದ್ದವು. ಹೀಗಿರುವಾಗ ಕಾರ್ತೀಕ ಮಾಸದಲ್ಲಿ ಒಂದು ದಿನ ಬಹಳ ಮಳೆಯು ಬಂದಿತು. ಆಗ ಆ ನದೀ ತೀರದಲ್ಲಿರುವ ಎಲ್ಲ ಕಪಿಗಳೂ ಶೀತವನ್ನು ತಡೆಯಲಾರದೇ ಆ ಮರದ ಬುಡದಲ್ಲಿ ಬಂದವು.**

**ಆಗ ಆ ಮರದಲ್ಲಿನ ಗೂಡಿನಲ್ಲಿರುವ ಮರಿಗಳು ಆ ಕಪಿಗಳನ್ನು ಕುರಿತು 'ದೇವರು ನಿಮಗೆ ಕೈಕಾಲುಗಳನ್ನು ಕೊಟ್ಟಿದ್ದಾನೆ. ನೀವು ಮನೆಗಳನ್ನು ಕಟ್ಟಿಕೊಂಡು ಸುಖವಾಗಿ ಇರಬಹುದು. ಏಕೆ ಈ ಮರವನ್ನು ಆಶ್ರಯಿಸಿಕೊಂಡು ನೆನೆಯುತ್ತಿದ್ದೀರಾ? ನಮ್ಮ ಮಾತು ಕೇಳಿ. ಮಳೆ ನಿಂತ ಮೇಲೆ ಮನೆ ಕಟ್ಟಿಕೊಂಡು ಸುಖವಾಗಿರಿ' ಎಂದು ಉಪದೇಶಿಸಿದವು. ಎರಡು ಮಿಲಿಯನ್ ವರ್ಷಗಳ ನಂತರ ಆ ಕಪಿಗಳು ನದೀ ತೀರದ ಮರಗಳನ್ನೆಲ್ಲಾ ನಾಶಮಾಡಿ, ಗಿಣಿ ಮತ್ತು ಇತರ ಪಕ್ಷಿಗಳಿಗೆ ನೆಲೆಯಿಲ್ಲದಂತೆ ಮಾಡಿ ಗೇಟೆಡ್ ಕಮ್ಯೂನಿಟಿ ಕಟ್ಟಿಕೊಂಡು ಸುಖವಾಗಿದ್ದವು.**

**ನೀತಿ: ಮೂರ್ಖರಿಗೆ ಮಾಡುವ ಉಪದೇಶ ಅನರ್ಥಕ್ಕೆ ಕಾರಣ.**

# ಕೊರೋನ ಪೊಯಮ್ಸ್

ಅಪರಂಜಿ ಬಳಗದ ಲೇಖಕ ಶ್ರೀ ತುರುವೇಕೆರೆ ಪ್ರಸಾದ್ ಅವರ
ಸಧ್ಯದಲ್ಲೇ ಬಿಡುಗಡೆಯಾಗಲಿರುವ "ಕೊರೋನ ಪೊಯಮ್ಸ್"
ಪುಸ್ತಕಕ್ಕೆ ಅಳವಡಿಸಲಾಗಿರುವ ಚುಟುಕ ಮತ್ತು ವ್ಯಂಗ್ಯಚಿತ್ರಗಳು.

ಪ್ರಸಾದ್ ಅವರ ಹೊಸ ಪುಸ್ತಕಕ್ಕೆ ಅಪರಂಜಿ ಬಳಗ ಶುಭ ಕೋರುತ್ತದೆ



**ಗಂಡ ನಪಾಸು!**

ಮಗ ಎಸ್‌ಎಸ್‌ಎಲ್‌ಸಿ ಪಾಸು, ಮಗಳು ಪಿಯುಸಿ ಪಾಸು
ಹೆಂಡ್ತಿ ಆನ್ಲೈನಲ್ಲಿ ಮಾಡ್ಕೊಂಡ್ಳು ಬ್ಯೂಟಿ ಕೋರ್ಸು
ಗಂಡ ಆಫೀಸ್ ಬಿಟ್ಟು ಕಲಿತರೂ ನೂರೆಂಟು ರೆಸಿಪೀಸು
ನಾಕ್ಡೌನ್ ಆಗಲಿಲ್ಲ ಲೂಸು, ಅಡುಗೇಲಿ ಆಗಲಿಲ್ಲ ಪಾಸು!



**ಅನ್ಯೋನ್ಯತೆ!**

ಒಬ್ಬರ ಮೇಲೊಬ್ಬರಿಗೆ ಎಷ್ಟೊಂದು ನಂಬಿಕೆ, ಪ್ರೀತಿ
ಲಾಕ್ಡೌನ್ನಲ್ಲಿ ಅರ್ಥ ಮಾಡಿಕೊಂಡರು ಗಂಡಹೆಂಡತಿ
ಗಂಡನಿಗನಿಸಿತು ಅವಳು ಕೆಟ್ಟಮಿಕ್ಸಿಯಂತೆ ಕಿರಿಕ್ಕು
ಹೆಂಡತಿಗನಿಸಿತು ಇವ ಕಂಪ್ಯೂಟರ್ ಕುಟ್ಟಲೇ ಲಾಯಕ್ಕು

# ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

● ದಂನಳ

3 ಹಿಂದೆಲ್ಲಾ ನೆಗಟಿವ್ ಮಂದಿಯಿಂದ ದೂರ ಇರಿ ಎನ್ನುತ್ತಿದ್ದರು. ಈಗ ಪಾಸಿಟಿವ್ ಮಂದಿಯಿಂದ ದೂರವಿರುವ ಕಾಲ!

3 ಅವರಲ್ಲಿ ಅನೇಕರು ಕೆಟ್ಟು ಪಟ್ಟಣ ಸೇರಿಲ್ಲದಿರಬಹುದು ಆದರೆ ಈಗ ಪಟ್ಟಣದಲ್ಲಿ ಕಂಗೆಟ್ಟು ಹಳ್ಳಿಗೆ ವಾಪಸಾಗುತ್ತಿದ್ದಾರೆ.

3 2019ರಲ್ಲಿ ಮಂಗಳಕ್ಕೆ ಕಾಲಿಡುವ ಪ್ರಯತ್ನದಲ್ಲಿದ್ದ ನಾವು 2020ರಲ್ಲಿ ಅಂಗಳಕ್ಕೆ ಕಾಲಿಡಲು ಹಿಂದೆಮುಂದೆ ನೋಡುವ ಪರಿಸ್ಥಿತಿ ಬಂದಿದೆ.

3 'ಆ' ಪುಸ್ತಕಗಳನ್ನು ಸಂಗ್ರಹಿಸಿ, ಅವುಗಳನ್ನು 'ಆ'ಗಾಗ 'ಆಘ್ರ'ಣಿಸಿ ಓದುವ ಸುಖ 'ಇ' ಪುಸ್ತಕಗಳಿಂದ ಸಿಗದು.

3 ದಿ ಪರ್‌ಪಸ್ ಆಫ್ ಲೈಫ್ ಈಸ್ ಟು ರಿಮೈನ್ ಹ್ಯಾಪಿ.

3 ನಿಮ್ಮ ಮುತ್ತಜ್ಜಿಯನ್ನು ನೀವು ಮರೆತಿರಬಹುದು ಆದರೆ ಆಕೆಯ ಮೂಗು ನಿಮ್ಮ ಮುಖದ ಮೇಲೆ ಕುಳಿತಿರುತ್ತದೆ!

3 ಹಸಿದವರಿಗೆ ಊಟ ಹಾಕುವುದನ್ನು ಗ್ಯಾಸ್ಟ್ರಿಕ್ ಫಿಲಾಂತ್ರಪಿ ಎಂದು ಕರೆಯಲಡ್ಡಿಯಿಲ್ಲ.

3 ದಾರಿ ತಪ್ಪಿದವನನ್ನು ಕ್ಷಮಿಸಬಹುದು ತಪ್ಪು ದಾರಿ ಹಿಡಿಯುವವರನ್ನಲ್ಲ.

3 ಫ್ಯಾಮಿಲಿ ಬುಸಿನೆಸ್: ಕ್ಯಾಪಿಟಲಿಸಂ ಅಟ್ ದಿ ಆಫೀಸ್, ಸೋಷಿಲಿಸಂ ಅಟ್ ಹೋಂ.

3 ನೀನು ಗುಲಾಮನಂತೆ ದುಡಿಯವವನಾದರೆ ಕೆಲಸ ಇದ್ದೇ ಇರುತ್ತದೆ.

3 ಔಷಧಿ ಅಂಗಡಿಯವ ಅಯ್ಯೋ ಅಂದ್ರೆ ಜ್ವರ ವಾಸಿ ಆಗುತ್ತಾ?

3 ಹ್ಯಾಪಿನೆಸ್ ಈಸ್ ಎ ಕ್ರೇಝಿ ಮ್ಯಾತಮ್ಯಾಟಿಕ್ಸ್ ಬಿಕಾಸ್ ಇಟ್ ಮಲ್ಟಿಪ್ಲೈಸ್ ವೆನ್ ಯು ಟ್ರೈ ಟು ಡಿವೈಡ್ ಇಟ್.

3 ವೆನ್ ಯು ಡೋಂಟ್ ಡ್ರಿಂಕ್ ಯು ರಿಮೇನ್ ಯುವರ್ಸ್ ಹೋಲ್ ಡೆ.

3 ರುಬ್ಬಿಸಿಕೊಂಡವನಿಗೇ ಗೊತ್ತು ರುಬ್ಬೋದು ಹೇಗೆ ಎಂದು.

3 ಶಿಲಾಯುಗ ಮುಗಿಯಲು ಕಾರಣ ಶಿಲೆಗಳ ಅಭಾವವಲ್ಲ.

3 ಇನ್ ನೇಚರ್ಸ್ ಇಕಾನಮಿ ದಿ ಕರೆನ್ಸಿ ಈಸ್ ನಾಟ್ ಮನಿ, ಇಟ್ ಈಸ್ ಲೈಫ್.

3 ಒಬ್ಬನ ಖರ್ಚು ಇನ್ನೊಬ್ಬನ ಆದಾಯ.

3 ನಿಮ್ಮ ಸೌಂದರ್ಯ ನಿಮ್ಮ ಆತ್ಮ ವಿಶ್ವಾಸದಲ್ಲಿದೆ.

3 ವಿ ಹ್ಯಾವ್ ಗೈಡೆಡ್ ಮಿಸೈಲ್ಸ್ ಬಟ್ ಮಿಸ್‌ಗೈಡೆಡ್ ಮೆನ್.

3 ಬೆಟ್ಟ ಹತ್ತಬಹುದು, ಎತ್ತಲಾಗದು.

■

# ಬಾ, ಬಾ, ಬ್ಲಾಕ್ ಶೀಪ್..

**ಸಿ.ಆರ್.ಸತ್ಯ**

ಮೊನ್ನೆ ನಾನೂ ನನ್ನ ಹೆಂಡತಿ ನನ್ನ ಹಳೆಯ ದೋಸ್ತಿ ಚಂದ್ರು ಮನೆಗೆ ಹೋದ್ವಿ. ಚಂದ್ರು ಅಮ್ಮ ನಮ್ಮನ್ನು ನೋಡಿ " ಓ!, ಬನ್ನಿ, ಬನ್ನಿ, ಚಂದ್ರು , ವಿಶಾಲಿ ಇಲ್ಲೇ ಪಕ್ಕದ ಅಂಗಡಿಗೆ ಹೋಗಿದಾರೆ. ಈಗ ಬರ್ತಾರೆ. ಕೂತ್ಕೊಳ್ಳಿ" ಅಂತ ಕೂರಿಸಿದ್ರು. ನನ್ನ ಹೆಂಡತಿ ಮಾತಿಗೆ ಇಳಿದಳು. "ಅಂದ ಹಾಗೆ, ಎಲ್ಲಿ ಪುಟಾಣಿ (ಚಂದ್ರು ಮಗಳು–ಲಲ್ಲಿ) ಕಾಣ್ತಾನೇ ಇಲ್ಲವಲ್ಲ!" ಅಂತ ಕೇಳಿದಳು. ಅಜ್ಜಿ" ಅವಳು ಎಲ್ಲಿಗೆ ಹೋಗ್ತಾಳೆ? ಇಲ್ಲೇ ನನ್ನ ಹಿಂದೆ ನನ್ನ ಸೀರೆ ಸೆರಗನ್ನ ಕಚ್ತಾ ನಿಂತಿದಾಳೆ" ಅಂತ ಹಿಂದೆ ತಿರುಗಿ, ಪುಟ್ಟೂ, ಮುಂದೆ ಬಾ. ಅಂಕಲ್, ಆಂಟೀಗೆ ಹಲೋ! ಅನ್ನು ಅಂತ ಹಿಂದೆ ತಿರುಗಿ ಹೇಳಿದರು. ಪುಟ್ಟು ಅಜ್ಜಿ ಹಿಂದಿನಿಂದ ಮುಂದಕ್ಕೆ ಪ್ರತ್ಯಕ್ಷವಾಯ್ತು. ಬಾಯಿಯಲ್ಲಿ ಇನ್ನೂ ಸೀರೆ ಸೆರಗು ತುಂಬಿಕೊಂಡಿತ್ತು. ಅಜ್ಜಿ "ನಮ್ಮ ಪುಟ್ಟು ಈಗ ಇಂಗ್ಲಿಷ್ನಲ್ಲೇ ಹಲೋ ಅನ್ನುತ್ತೆ, ಹಲೋ! ಅನ್ನು ಪುಟ್ಟ. ಬಾಯಿಯಿಂದ ಸೀರೆ ತೆಗಿ" ಅಂದರು, ಪುಟ್ಟು ನಾಚಿಕೆಯಿಂದ ಹಲೋ! ಅಂತು. ನನ್ನ ಹೆಂಡತಿ ಸುಮ್ಮನಿರಬಾರದೇ? "ಅಯ್ಯೋ, ಎಷ್ಟು ಚೆನ್ನಾಗಿ ಇಂಗ್ಲಿಷ್ನಲ್ಲಿ ಉಚ್ಚಾರಣೆ ಮಾಡುತ್ತೆ! ಒಂದು ಇಂಗ್ಲೀಷ್ ಹಾಡು ಹೇಳುತ್ಯೇ?" ಅಂತ ಕೇಳಿಬಿಟ್ಲು. ಅಜ್ಜಿ, "ಓಹೋ!, ಪುಟ್ಟು, ಬಾ, ಬಾ, ಬ್ಲಾಕ್ ಶೀಪ್ ಹೇಳೂ ಕಂದ" ಅಂದರು. ಪುಟ್ಟು ಶುರೂನೇ ಮಾಡ್ಬಿಡ್ತು. ಮುದ್ದಾಗಿ, "ಗಾ, ಗಾ, ಗಾಕ್ ಗೀಪ್, ಗಾಗೂ ಗೆನಿ ಗುಲ್?" ಅಂತ ಹೇಳಿ ನಿಲ್ಲಿಸಿಬಿಡ್ತು.

ಈಗ ನನ್ನ ಹೆಂಡತಿ ಸುಮ್ಮನೆ ತಲೆ ಆಡಿಸಿದ್ದರೆ ಚೆನ್ನಾಗಿತ್ತು. ಅದು ಬಿಟ್ಟು "ಅಯ್ಯೋ!, ಎರಡೂವರೆ ವರುಷಕ್ಕೆ ಇಂಗ್ಲಿಷ್ ರೈಮ್‌ನ ಎಷ್ಟು ಮುದ್ದಾಗಿ ಹಾಡುತ್ತೆ! ಒಳ್ಳೆ, ಯಾವುದೋ ಇಂಗ್ಲಿಷ್ ಮಗೂನೇ ಹೇಳಿದ ಹಾಗೆ ಹೇಳುತ್ತೆ!" ಅಂತ ಅಂದಳು (ನನ್ನ ಹೆಂಡತಿ ಕಾಲೇಜಿನಲ್ಲಿ ನಾಟಕದ ಗ್ರೂಪ್‌ಗೆ ಲೀಡರ್ ಆಗಿದ್ಲು). ಅಜ್ಜಿ "ಅದಕ್ಕೆ ಪೂರ್ತಿ ಹಾಡು ಬರುತ್ತೆ. ಮುಂದಕ್ಕೆ ಹೇಳು ಪುಟ್ಟು, ಜಾಣ ಮರಿ" ಅಂತ ಪುಸಲಾಯಿಸಿದರು. ಪುಟ್ಟ. "ಗೆಗ್ ಗಾರ್, ಗೆಗ್ ಗಾರ್ ಗ್ರೀ ಗಾಗ್ಗ್ ಗುಲ್" ಅಂತ ಹೇಳಿ ಇನ್ನಷ್ಟು ಸೀರೆ ಸೆರಗನ್ನ ನುಂಗಿತು. ನನ್ನ ಹೆಂಡತಿ, "ಮಗು ಇಂಗ್ಲೆಂಡ್‌ನಲ್ಲಿ ಇದ್ದಿದ್ದರೆ ಇನ್ನೂ ಏನೇನು ಇಂಗ್ಲಿಷ್‌ನಲ್ಲೇ ಹೇಳೋದೋ!" ಅಂತ ಚಪ್ಪಾಳೆ ಹೊಡೆದಳು.

ಅಜ್ಜಿ ಜಂಬದ ನಗೆ ಬೀರಿದರು. ದೇವರ ದಯ, ಈ ಸಮಯಕ್ಕೆ ಚಂದ್ರು, ಅವನ ಹೆಂಡತಿ–ವಿಶಾಲಿ, ಮನೆಗೆ ಬಂದರು.

ಚಂದ್ರು, "ಸಾರಿ, ಕಣಪ್ಪ. ತುಂಬಾ ಹೊತ್ತು ಕಾಯಿಸ್ಬಿಟ್ಟೆ. ಬೋರ್ ಹೊಡೀತಾ?" ಅಂತ ಕೇಳಿದ. ನನ್ನ ಹೆಂಡತಿ, "ಏನೂ ಇಲ್ಲ, ಪುಟ್ಟು ಬಾ, ಬಾ, ಬ್ಲಾಕ್ ಶೀಪ್ ಹೇಳ್ತಿತ್ತು. ಕೇಳ್ತಾ ಇದ್ವಿ" ಅಂದಳು. ವಿಶಾಲೀಗೆ ಅರ್ಥವಾಯ್ತು. "ಬನ್ನಿ, ಎಲ್ಲರೂ ಮೇಲೆ ಬಾಲ್ಕನಿನಲ್ಲಿ ಕೂತ್ಕೊಳ್ಳೋಣ. ಸ್ವಲ್ಪ ಕಾಫಿ ಬೆರೆಸಿಕೊಂಡು ಬರ್ತೀನಿ" ಅಂತ ಮೇಲಕ್ಕೆ ಕರೆದಳು. ಮೇಲೆ ಹೋದ್ವಿ. ಚಂದ್ರು ಅವನಮ್ಮನಿಗೆ, "ಸ್ವಲ್ಪ ಪುಟ್ಟೂನ ಅಲ್ಲೇ ಆಡಿಸ್ಕೊಂಡಿರು ಅಮ್ಮ, ನಾವು ಮಾತಾಡಿ ತುಂಬಾ ದಿನಗಳು ಆಯ್ತು" ಅಂತ ಕೂಗಿದ. ಅದಕ್ಕೆ ಅಜ್ಜಿ "ಆಯ್ತು. ನೀವು ಕೆಳಗೆ ಬರೋ ಹೊತ್ತಿಗೆ ಪುಟ್ಟೂ ಕೈನಲ್ಲಿ ಪೂರ್ತಿ ಹಾಡು ಹೇಳಿಸ್ತೀನಿ" ಅಂದರು. ನನ್ನ ಹೆಂಡತಿ ಗ್ರೇಟ್! ಅಂದಳು. ಸರಿ ಸುಮಾರು ಹೊತ್ತು ಅಲ್ಲೇ ಹರಟೆ ಕೊಚ್ಚಿದ ಮೇಲೆ ನಾವು ಹೊರಡೋಕ್ಕೆ ಎದ್ವಿ. ಕೆಳಗೆ ಬಂದ್ವಿ. ಅಜ್ಜಿ ನಮಗೇ ಕಾಯ್ತಿದ್ರು. 'ಹೊರಟು ಬಿಟ್ರಾ? ಪುಟ್ಟು ಈಗ

ಕೊನೇ ಎರಡು ಲೈನ್ ಗಳನ್ನ ಹೇಳುತ್ತೆ. ಕೇಳಿಕೊಂಡು ಹೋಗಿ" ಅಂತ ಅಂದರು. ಅದಕ್ಕೆ ನನ್ನ ಹೆಂಡತಿ, " ಅದಕ್ಕೇನಂತೆ, ಖಂಡಿತ" ಅಂತ ಕೂತೇ ಬಿಟ್ಳು. ಸರಿ, ನಾನೂ ಕೂತೆ.

ಈಗ ಪುಟ್ಟು ಯಾವ ನಾಚಿಕೇನೂ ಇಲ್ಲದೆ, " ಗೊನ್ ಗಾರ್ ಗೈ ಗಾಗರ್, ಗೊನ್ ಗಾರ್ ಗೈ ಗೇಂ, ಗಗ್ ಗಗ್ ಗಾರ್ ಗಿ ಗಿಟ್ಟಲ್ ಗಾಯ್ ಗೂ ಗ್ರೈಸ್ ಗಿನ್ ಗ ಗೇನ್. " ಅಂತ ಹೇಳಿ ಸೆರಗು ನುಂಗೋಕ್ಕೆ ಶುರು ಮಾಡ್ತು. ಚಂದ್ರು ಅಮ್ಮ, ವಿಶಾಲೀಗೆ " ಪುಟ್ಟು ಕೈಲಿ ಟ್ವಿಂಕಲ್, ಟ್ವಿಂಕಲ್ ಹೇಳಿಸ್ಲೇ?" ಅಂತ ಕೇಳಿದರು. ನನ್ನ ಹೆಂಡತಿ ಹೂ! ಅನ್ನೋದರೊಳಗೆ, ವಿಶಾಲಿ ಬೇಡಮ್ಮ, ಅವರಿಗೆ ಲೇಟ್ ಆಗುತ್ತೆ ಅಂತ ನನ್ನ ಹೆಂಡತಿಯ ಇನ್ನೊಂದು ನಾಟಕಕ್ಕೆ ತಡೆ ಹಾಕಿದಳು. ನಾನು ಅವರಿಗೆ ಕೇಳೊ ಹಾಗೆ ದೊಡ್ಡದಾಗಿ ನಿಟ್ಟುಸಿರು ಬಿಟ್ಟೆ. ಮನೆಗೆ ಬಂದ್ವಿ.

ರಾತ್ರಿ ಊಟ ಮಾಡಿ ಮಲಗಿ ಕೊಂಡು ಸ್ವಲ್ಪ ಹೊತ್ತಾಗಿತ್ತು. ನನಗೆ ಒಳ್ಳೇ ನಿದ್ದೆ ಬಂದಿತ್ತು. ತಕ್ಷಣ ನನ್ನ ಮುಖದ ಮೇಲೆ ಏನೋ ಹೊಡೆದ ಹಾಗೆ ಆಗಿ ಎದ್ದು ಕೂತೆ. ನೋಡಿದ್ರೆ, ನನ್ನ ಹೆಂಡತಿ ದಿಂಬಿನಿಂದ ನನ್ನ ಮೂಗಿಗೆ ರಪ್,ರಪ್ ಅಂತ ಬಾರಿಸ್ತಿದ್ದಳು. ನಾನು ಗಾಬರಿಯಿಂದ, "ಯಾಕೇ ನನ್ನ ಮಧ್ಯ ರಾತ್ರೀಲಿ ಹೀಗೆ ಬಡಿತಿದ್ಯಾ? ಏನಾಯ್ತು?" ಅಂತ ಕೇಳಿದೆ. "ಏನು ಆಗೊದೇನು? ಮಲಗಿಕೊಂಡಾಗಿನಿಂದ ನನಗೆ ಐದು ನಿಮಿಷ ನಿದ್ದೆ ಬಂದಿಲ್ಲ. ನಾಲ್ಕು ಮನೆಗೆ ಕೇಳೋ ಹಾಗೆ, ಅಷ್ಟು ಹೊತ್ತಿನಿಂದ ನೀವೂನೂ "' ........ಗೆಗ್ಗಾರ್, ಗೆಗ್ಗಾರ್, ಗ್ರೀ ಗಾಗ್ಸ್ ಗುಲ್ಲ್" ಅಂತ ಕನವರಿಸಿಕೊಳ್ತಾ ಇದ್ರಿ. ಸಾಕು ನಿಲ್ಸಿ. ನನ್ನ ಹಣೆ ಬರಹ. ಇಲ್ಲದಿದ್ದರೆ ಹಾಲ್‌ಗೆ ಹೋಗಿ ಮಲಗಿಕೊಳ್ಳಿ" ಅಂತ ಜಗಳಕ್ಕೆ ಇಳಿದಳು. " ಅಮ್ಮಾ, ತಾಯಿ, ಹಾಲ್‌ಗೇ ಹೋಗಿ ಮಲಗಿ ಕೊಳ್ತೀನಮ್ಮ. ಹಾಯಾಗಿ ಮಲಕ್ಕೋ, ಎಲ್ಲಾ ನಿಂದೇ ಕಿತಾಪತಿ, ನಿನ್ನ ನಾಟಕದಿಂದಲೇ ಇದೆಲ್ಲ ಆಗ್ತಿರೋದು" ಅಂತಾ ಗೊಣಗಿ ಕೊಳ್ಳುತ್ತಾ, ಹಾಲ್‌ಗೆ ಹೋದೆ.

ಬೆಳಿಗ್ಗೆ ಎದ್ದಾಗ ನನ್ನ ಹೆಂಡತಿ ನಗುತ್ತಾನೇ ಬಂದಳು. "ಏನಾಯ್ತು?" ಅಂತ ಕೇಳಿದೆ.

"ಪರವಾಗಿಲ್ಲ ಬೆಳಿಗೆ ಐದು ಗಂಟೆ ಹೊತ್ತಿಗೆ ನೀವೂ ಕೊನೇ ಲೈನ್‌ಗೆ ಬಂದಿದ್ರಿ. ಗಗ್ ಗಗ್ ಗಾರ್ ಗಿ ಗಿಟ್ಟಲ್ ಗಾಯ್ ಗೂ ಗ್ರೈಸ್ ಗಿನ್‌ಗ ಗೇನ್ ಲೈನ್ ಗೆ. ರಾತ್ರಿ ಎಲ್ಲಾ ಗೊರಕೆ ಹೊಡೆದು. ಸುಸ್ತಾಗಿದೀರ. ತೊಗೋಳಿ, ಬಿಸಿ ಕಾಫಿ" ಅಂತ ಕಾಫಿ ನನ್ನ ಕೈಗೆ ಇಟ್ಟಳು. ನನ್ನ ಕೈಗೆ ಬಿಸಿ ಮುಟ್ಟಿದಾಗ, ಇದಂತೂ ನಾಟಕ ಅಲ್ಲ ಅಂತ ಖಚಿತವಾಯ್ತು. ಕುಡಿದು ಇನ್ನೊಂದು ರೌಂಡ್ ನಿದ್ದೆಗೆ ಇಳಿದೆ.

■

---

# ಎರವಲು!

ತುರುವೇಕೆರೆ ಪ್ರಸಾದ್

**ಶೋಧನೆಗೆ ಗೂಗಲ್ ಸಾಧನೆಗೆ ಮೊಬೈಲು**
**ವಿದ್ಯೆ ಬುದ್ಧಿ ಎಲ್ಲಾ ಎರವಲು**
**ಪಾಸ್ಬುಕ್ಕು, ಫೇಸ್ಬುಕ್ಕು ವಾಟ್ಸಪ್ಪೇ ಘಮಲು**
**ಯಾರಿಗೆ ಬೇಕಾಗಿದೆ ಪುಸ್ತಕಗಳ ಮಡಿಲು!**

# ಚೆಂಗನ ಆನ್ಲೈನ್ ಬೂಟಿ ಕೋರ್ಸು!

**ಜಿ ವಿ ಅರುಣ**

"ಸಾ..., ಸಾ..." ಚೆಂಗ ರವೀಂದ್ರ ಅವರ ಮನೆಯ ಮುಂದೆ ನಿಂತು ಜೋರಾಗಿ ವದರ್ತಾ ಇದ್ದ. ಅಕ್ಕಪಕ್ಕದ ಮನೆಯವರೆಲ್ಲರೂ ಕಿಟಕಿಯಿಂದ ರವೀಂದ್ರ ಅವರ ಮನೆಯ ಕಡೆ ಇಣುಕಿ ನೋಡುತ್ತಿದ್ದರು. ಅವರೆಲ್ಲರ ಮುಖದಲ್ಲೂ ಭಯಮಿಶ್ರಿತ ಆಶ್ಚರ್ಯ!

ರವೀಂದ್ರ ಅವರು ಕೂಡ ಕಿಟಕಿಯಿಂದ ಇಣುಕಿದರು. ಅವರ ಮುಖ ಕಾಣುತ್ತಿದ್ದ ಹಾಗೆ, ಚೆಂಗ ಹಲ್ಲುಗಿಂಜುತ್ತಾ "ನಂಸ್ಕಾರ ಸಾ... ನಾನು ಚೆಂಗ!... ನಮ್ಮ ಸಾರು ನಿಮ್ಗೆ ಫೋನ್ ಮಾಡಿರ್ಬೇಕಲ್ಲ ಸಾ..." ಅಂದ.

'ಓಹೋ ನೀವು ಚೆಂಗಾನ...' ಅಂದ್ರು ಆಶ್ಚರ್ಯದಿಂದ ರವೀಂದ್ರ.

"ನೀವು ಅನ್ಬೇಡಿ ಸಾ... ನೀನು ಅನ್ನಿ... ಏನೋ ನಿಮ್ಮಂತೋರಿಂದ ನಾನು ಒಟ್ಟೆ ಒರ್ಕೋತಾ ಇವ್ನಿ...!"

ಅಷ್ಟು ಹೊತ್ತಿಗೆ ಮಾಸ್ಕನ್ನು ಹಾಕಿಕೊಂಡು ರವೀಂದ್ರ ಬಾಗಿಲು ತೆಗೆದು 'ಹೌದು... ನಿಮ್ಮ ಸರ್ ಕರೆ ಮಾಡಿದ್ರು. ಆದರೆ ಇಷ್ಟು ಬೇಗ ನೀನು ಬರ್ತೀ ಅನ್ಕೊಂಡಿರ್ಲಿಲ್ಲ ಚೆಂಗ... ಅದೇನೋ ನನ್ನಿಂದ ಬಹಳ ಸಹಾಯ ಆಯ್ತು... ಅದಕ್ಕೆ ವಂದನೆ ಹೇಳೋಕೆ ನೀನು ಬರ್ತೀ ಅಂತ ಅಂದ್ರು... ನನಗೆ ಒಂದೂ ಅರ್ಥ ಆಗಲಿಲ್ಲ!'

"ಔದು ಸಾ... ನಾನು ನಿಯತ್ತಿನ ಮನುಸ್ಯ ಸಾ... ನಂಗೆ ಸಾಯ ಮಾಡ್ದೋರನ್ನ ಯಾವತ್ತೂ ಮರೆಯೋದಿಲ್ಲ ಸಾ... ಅಂದಾಗೆ ನಾ ಯಾರು ಅಂತ ಗೊತ್ತಲ್ವಾ ಸಾ..." ಚೆಂಗ ಒಂದೇ ಉಸಿರಿಗೆ ಹೇಳಿದ.

ಚೆಂಗ ಗೇಟಿನಿಂದ ಹಿಂದೆ, ರವೀಂದ್ರ ಅವರು ಮನೆಯ ಬಾಗಿಲಿನ ಒಳಗೆ; ಚೆಂಗನ ಮಾಸ್ಕು ಗಲ್ಲದ ಕೆಳಗೆ, ರವೀಂದ್ರ ಮೂಗಿನ ತುದಿ ಮುಚ್ಚುವಷ್ಟು ಎಳೆದುಕೊಂಡಿದ್ದರು.

ರವೀಂದ್ರ ಅವರು 'ನಿಮ್ಮ ಸರ್ ನಿನ್ನ ಬಗ್ಗೆ ಹೇಳ್ತಾನೆ ಇರ್ತಾರೆ. ಒಂದೆರಡು ಸಲ ನಿನ್ನ ನೋಡೂ  ಇದೀನಿ... ನಿನ್ನ ವಿಚಾರ ಎಲ್ಲಾ ಗೊತ್ತಪ್ಪ! ಆದ್ರೆ ರಿಟೈರ್ ಆಗಿರೋ ನನ್ನಿಂದ, ಮನೆಯಿಂದ ಹೊರಗೆ ಕಾಲೇ ಇಡದ ಈ ಕೊರೋನಾ ಸಮಯದಲ್ಲಿ ಏನು ಸಹಾಯ ಆಯ್ತು ಗೊತ್ತಾಗ್ಲಿಲ್ಲ...'

"ಅದ್ನ  ಏಳಾಮಾ ಅಂತ್ಲೇ ಬಂದೆ ಸಾ... ನಾನು ಮನಿ ಒಳೀಕ್ಕೆ ಬರಾಕ್ಕಿಲ್ಲ... ಇಲ್ಲೆ ನಿಂತು ಮಾತಾಡ್ತೀನಿ ಸಾ..." ಎಂದು ಹೇಳಿ, ಚೆಂಗ ತನ್ನ ಎರಡೂ ಕೈಗಳಲ್ಲಿದ್ದ ದೊಡ್ಡ ಚೀಲಗಳನ್ನು ಗೇಟ್ ಒಳಗೆ ಇಟ್ಟು, ಜೇಬಿನಿಂದ ಸ್ಯಾನಿಟೈಸರ್ ಸ್ಪ್ರೇ ತೆಗೆದು ಚೀಲಗಳಿಗೆ ಚೆನ್ನಾಗಿ ಸ್ಯಾನಿ–ಸ್ನಾನ ಮಾಡಿಸಿದ!

"ಸಾ... ಇದ್ರಲ್ಲಿ ಬಾಳೆ ಪರಂಗಿ ಸೇಬು ಸೀಬೆ ಮಡಗಿವ್ನಿ. ಅದರಲ್ಲಿ ಓಂ ಮೇಡ್ ಪ್ರಾಡಕ್ಟು ಸಾ... ಬೇಕಾದಾಗೆ ಉಪಯೋಗಿಸಿ ಸಾ..."

ಅಷ್ಟು ಹೊತ್ತಿಗೆ ರವೀಂದ್ರರ ಹಿಂದೆ ಜಮಾಯಿಸಿದ್ದ ಅವರ ಮನೆಯವರೆಲ್ಲ ಒಂಟೆ ಕತ್ತು ಮಾಡಿಕೊಂಡು ಚೀಲಗಳತ್ತ ಆಶ್ಚರ್ಯ ಚಿತ್ತ ಹರಿಸಿದ್ದರು.

‘ಏನಿದು ಚೆಂಗ... ನನ್ಗೆ ಅರ್ಥ ಆಗ್ತಾ ಇಲ್ಲ!’

"ಏಳ್ತೀನಿ ಸಾ... ನೀವು ಮೊನ್ನೆ ನಿಮ್ಮ ಓಡಿಯೋ ಪ್ರೋಗ್ರಾಂನಾಗೆ..."

‘ಓಡಿಯೋ ಅಲ್ಲಪ್ಪ ಅದು ನೋಡಿಯೋ* ಪ್ರೋಗ್ರಾಮ್’ ರವೀಂದ್ರ ತಿದ್ದಿದರು.

"ಎಲ್ಲಾ ಒಂದೇ ಅಲ್ವಾ ಸಾ...ನೋಡ್ತಾ ಇದ್ದಾಗ ಓಡ್ತಾ ಇತ್ತದೆ!... ಅಲ್ಲಿ ನೀವು ಸೌಂದರ್ಯ ವರ್ದ್ನೆ ಮಾಡಿಕೊಳ್ಳೋಣ ಎಂದರೆ ಬೂಟಿ ಪರೋಲ್ಗಳು ಮುಚ್ಚಿಕೊಂಡಿವೆ ಅಂತ ದುಕ್ಕ ತೋಡ್ಕೊಂಡಿದ್ದರಂತಲ್ಲ ಸಾ..."

‘ಹೌದು ಹಾಗೆ ಹೇಳಿದ್ದೇ. ಆದರೆ ದುಃಖದಿಂದ ಅಲ್ಲ, ಹಾಸ್ಯಕ್ಕೆ ಹೇಳಿದ್ದು... ನಿಂಗೆ ಹೇಗೆ ಗೊತ್ತಾಯ್ತು...?’

"ನಮ್ಮ ಸಾ ಯೇಳಿದ್ರು ಸಾ... ದುಕ್ಕಾನೋ ಆಸ್ಯನೋ; ಆದ್ರೆ ಅದು ಹದಿನಾರಾಣೆ ನಿಜ ಅಲ್ಲವ್ರಾ... ನಾನು ತಿಳ್ಕಂಡಿರದು ಇಷ್ಟೇಯ... ಎಲ್ಲಿ ಸಮಸ್ಯೆ ಇತ್ತದೋ ಅಲ್ಲಿ ಅವಕಾಸ ಇತ್ತದೆ ಅಂತ! ನಾನು ತಕ್ಷಣ ನನ್ನ ಐಟಿ ಕಂಪನೀಲಿ ಮೀಟಿಂಗ್ ಕರ್ದೆ..."

"ನಿಂದೇ ಐ ಟಿ ಕಂಪನಿ ಇದೆ ಅಂತ ಗೊತ್ತು ಚೆಂಗಾ... ಮುಂದೆ ಹೇಳು...’

"ನಮ್ಮುಡುಗ್ರುಗೆ ಏಳ್ದೆ... ನೋಡ್ರೋ ಈಗ ಬೂಟಿ ಪರೋಲ್ಗಳು ತೆಗೆದಿಲ್ಲ. ಆದ್ರೆ ಆನ್ಲೈನ್ ಕ್ಲಾಸ್ಗಳು, ಝೂಮು, ಜಿಮೀಟು ಹೀಗೆ ಸ್ಟಾರ್ಟ್ ಆಗೋಗದೆ. ಅಲ್ಲಿ ಮುಖ ಚೆನ್ನಾಗಿ ಕಾಣ್ದಿದ್ರೆ ಏನು ಚೆಂದ?... ಅದ್ಕೆ "ಆನ್ಲೈನ್ ಕ್ಲಾಸ್ಗೆ ತಯಾರಾಗುವುದು ಹೆಂಗೆ" ಅಂತ ನರ್ಸರಿ – ಪ್ರೈಮರಿ ಮಕ್ಕಳಿಗೆ, ಅವರ ಅಮ್ಮಂದಿರಿಗೆ, ಟೀಚರ್ಸ್ಗೆ ಒಂದು ಆನ್ಲೈನ್ ಕೋರ್ಸು; ಐಸ್ಕೂಲು ಕಾಲೇಜುಗಳ ಐಕ್ಳಿಗೆ ಒಂದು ಕೋರ್ಸು, ಇನ್ನು ನಿಮ್ಮ ಓಡಿಯೋ ತರ ಪ್ರೋಗ್ರಾಂಗೆ ತಯಾರಾಗೋಕೆ ಅಂತ್ಲೇ ಒಂದು ಆನ್ಲೈನ್ ಕೋರ್ಸು ಶುರು ಹಚ್ಚಿಕೊಳ್ಳಿ ಅಂತ ಆಲ್ಡರ್ ಕೊಟ್ಟೆ. ಅರ್ಧ ದಿನದಲ್ಲಿ ಎಲ್ಲಾ ಆನ್ಲೈನ್ ಕೋರ್ಸ್ಗೋಳು ರೆಡಿ ಆದ್ವು. ಮೊದಲು ಸೇರ್ಕೊಳೊ ನೂರು ಜನಕ್ಕೆ ಓಂ ಮೇಡ್ ಮೇಕಪ್ ಕಿಟ್ ಉಚಿತ ಅಂತ ಹಾಕ್ಸಿದೆ. ಒಂದೇ ದಿನದಲ್ಲಿ ಎಲ್ಡೂವರೆ ಸಾವಿರ ಜನ ದುಡ್ಡು ಕೊಟ್ಟು ಸೇರಿಕೊಂಡವ್ರೆ ಸಾ..."

ರವೀಂದ್ರ ಬಿಟ್ಟ ಬಾಯಿ ಬಿಟ್ಟುಕೊಂಡು ಕೇಳುತ್ತಿದ್ದರು.

‘ಚೆಂಗ ಹೋಂ ಮೇಡ್ ಕಿಟ್ ಅಂದ್ಯಲ್ಲ ಹಾಗಂದ್ರೆ?’ "ಸರ್ ಅದಕ್ಕೆ ಇನ್ನೊಂದು ಬಿಜ್ನೆಸ್ ಶುರು ಹಚ್ಚಿಕೊಂಡಿದೀನಿ ಸಾ... ತೆಳ್ಳಗೆ ಬೆಳ್ಳಗೆ ಇರೋರಿಗೆ ಒಂದು ತರಹ ಕಿಟ್ಟು, ಇನ್ನು ಗೋದಿಬಣ್ಣ ಸಾದಾರಣ ಮೈಕಟ್ಟಿನೋರಿಗೆ ಬೇರೆ ರೀತಿ ಕಿಟ್ಟು, ಕಲ್ಯಾಣ ಕರ್ನಾಟಕದೋರಿಗೆ ಒಂತರಾ ಕಿಟ್ಟು, ಇದ್ಯಾವುದಕ್ಕೂ ಸೇರದವರಿಗೆ ಬೇರೆ ಸ್ಪೆಷಲ್ ಕಿಟ್ಟು... ಆನ್ಲೈನ್ನಲ್ಲೇ ಅವರ ಬಣ್ಣ ತಿಳಿಸೋಕೆ ಆಪ್ಸನ್ ಐತೆ ಸಾ..."

‘ಅಲ್ಲ ಚೆಂಗಾ, ನಿನ್ನ ಇನ್ಫರ್ಮೇಷನ್ ಟೆಕ್ನಾಲಜಿ ಕಂಪನಿ ಬಗ್ಗೆ ಕೇಳಿದ್ದೆ. ಸೌಂದರ್ಯ ಪ್ರಸಾಧನಗಳನ್ನು ತಯಾರಿ ಮಾಡೋಕೆ ಯಾವಾಗಿಂದ ಶುರು ಮಾಡ್ದೆ?’

‘ನಿನ್ನೆ ತಾನೆ ಶುರುಮಾಡಿದ್ದು ಸಾ... ಎರಡು ಗಂಟೆ ಬೇಕಾಯ್ತು ಸಾ ಫಾರ್ಮುಲ ಕಂಡಹಿಡಿಯಾಕ್ಕೆ!... ಒಂದು ಸೀಕ್ರೆಟ್ ಅಂಚಿಕೊಳ್ತೀನಿ ಯಾರತ್ರನು ಬಾಯಿ ಬಿಡಬೇಡಿ ಸಾ... ಎಣ್ಣೆ ಬಂದಾಗ ತೂರ್ಕೋ ಅಂತ, ಏನೋ ಒಂದ್ನಾಕು ಕಾಸು ಮಾಡ್ಕೋತಿದೀನಿ ಸಾ..."

'ಅದು ಗಾಳಿ ಬಂದಾಗ ತೂರಿಕೋ ಅಂತ ಕಣಪ್ಪ... ಆಮೇಲೆ ...?'

"ತೆಳ್ಳಗೆ ಬೆಳ್ಳಗೆ ಇರೋರ ಕಿಟ್ನಲ್ಲಿ ಅಕ್ಕಿಇಟ್ಟು ಅರ್ಸ್ನ ಬೆರೆಸಿದ ಪುಡಿ, ಗೋದಿ ಬಣ್ಣದೋರಿಗೆ ಗೋದಿಇಟ್ಟು ಅರ್ಸ್ನ, ಕಲ್ಯಾಣ ಕರ್ನಾಟಕದವರಿಗೆ ಜೋಳದ ಹಿಟ್ಟಿಗೆ ಅರ್ಸ್ನ ಸೇರ್ಸಿದ ಪ್ಯಾಕೆಟ್ಟು, ಸ್ಪೆಷಲ್'ನಲ್ಲಿ ಇವೆಲ್ಲವನ್ನು ಒಟ್ಟಿಗೆ ಬೆರ್ಸಿ ಇಟ್ಟಿರ್ತೀವಿ ಸಾ...

ನೋಡಿ ಸಾ ನೀವು ಬೂಟಿ ಪರೋಲ್ ಗಳು ಮುಚ್ಕೈತೆ ಅಂತ ಯೋಳಿ ನನ್ನ ಕಣ್ಣು ತೆರ್ಸಿದ್ರಿ ಸಾ...

ಅದ್ರಿಂದಲೇ ಇವೆಲ್ಲಾ ಶುರು ಅಚ್ಕೊಂಡಿವ್ನಿ. ಇನ್ನೊಂದು ಎಲ್ಡು ಮೂರು ತಿಂಗಳು ಒಳ್ಳೆ ಡಿಮ್ಯಾಂಡ್ ಇರ್ತೈತೆ ಸಾ... ಅದ್ಕೆ ನಿಮ್ಗೆ ತಿಳ್ಸಿ ನಿಂ ಆಸೀರ್ವಾದ ತಗಂಡ್ ಓಗಾಮಾ ಅಂತ ಬಂದಿವ್ನಿ ಸಾ..."


ರವೀಂದ್ರರಿಗೆ ಏನು ಹೇಳಬೇಕೋ ಗೊತ್ತಾಗಲಿಲ್ಲ! ಅವನಿಗೆ ಕೈಮುಗಿದು 'ನಿನಗೆ ಒಳ್ಳೆಯದಾಗಲಪ್ಪಾ!' ಅಂದರು.

"ತ್ಯಾಂಕ್ಸ್ ಸಾ... ನಾ ಬತ್ತೀನಿ, ಕಿಟ್ಟುಗೊಳ್ನ ಡಿಸ್ಪ್ಯಾಚ್ ಮಾಡಿಸಬೇಕು... ಅಂದಂಗೆ ನಿಮ್ಮ ಓಡಿಯೋ ಮೆಂಬರ್ಸ್ ಗೆ ಏಳ್ಬಿಡಿ ಸಾ.. ಅವರು ನಮ್ಮ ಆನ್ಲೈನ್ ಕೋರ್ಸ್ಗೆ ಸೇರುವಾಗ 'ರವೀಂದ್ರ' ಅಂತ ಡಿಸ್ಕೌಂಟ್ ಕೋಡ್ನಲ್ಲಿ ಹಾಕಿದರೆ ಅವರಿಗೆ 60% ಡಿಸ್ಕೌಂಟ್ ಕೊಡ್ತೀನಿ ಸಾ... ! ಹಂಗೆ ಅವ್ರಿಗೆಲ್ಲಾ ಎಲ್ಡು ಎಲ್ಡು ಕಿಟ್ಗಳ್ನ ಪ್ರೀ ಕಳಿಸ್ತೀನಿ ಸಾ... ನಂಸ್ಕಾರ ಸಾ ..."

ಕೈಮುಗಿದ ಚೆಂಗ, ಡ್ರೈವರ್ ಬಾಗಿಲು ತೆಗೆಯುತ್ತಿದ್ದ ಹಾಗೆ ತನ್ನ ದೊಡ್ಡ ಕಾರ್ ಹತ್ತಿದ!

■

---



# ನಾಯಿ ಪಾಡು

**ಎಚ್. ಆರ್. ಹನುಮಂತರಾವ್**

ನಾನು: ಏನರೀ ಈ ನಾಯಿಪಾಡು ಅನ್ನೋದ....

ಅವರು: ನೀವೇನಾರ ಹೇಳಿ, ಬಿಡಿ. 'ನಾಯಿಪಾಡು' ಮಾತ್ರ ಯಾರಿಗೂ ಬರಬಾರದಪ್ಪ.

ಇವರು: ಏನರೀ ಅದು ನಾಯಿಪಾಡು? ಯಾರಿಗ, ಯಾಕ? ನಿಮಗಂತೂ ಅಲ್ಲಾ, ನಿಮ್ಮನ ನೋಡಿದ್ರೇನ ಗೊತ್ತಾಗ್ದ, "ಆಳು, ಅಂದ್ರ ಹೀಗಿರ್ಬೇಕ ಬಾಳು" ಅನ್ನಾಂಗ ಗಟ್ಟಿ ಇದೀರಿ!

ನಾನು: ಅದಲ್ಲಪಾ ನಾ ಹೇಳಾಕೆ ಬಂದದು ಏನಂದರ....

ಇವರು: ಅದೆಂಥದುರೀ ನೀವು ಹೇಳಾ ಮಾತು, ಯಾರಿಗೆ, ಏಕೆ, ಈ ಪಾಡು? ನಿಮಗೇನಾಗಿದ ಅಂತ ಈ ನಾಯಿಪಾಡು ಒದರಕ್ಕ ಹತ್ತೀರಾದೀರಿ. ನೀವೇನ್ಕಂಡಿರಿ?

ನಾನು: ನನಗೇನೂ ಆಗಿಲ್ಲರೀ, ನಾನು ನಾನೇ ಆದೀನಿ, ಏನ ಹೇಳ್ಲಿಕ್ಕ ಬಂದ ಅಂದ್ರ, ಈ ಮಾತ–ನಾಯಿಪಾಡು– ನಾವುಗಳು ಮಾತ್ನಗೆ ಉಪಯೋಗ್ಸಿದುಂಟಲ್ವೋ? ಈ ಪದ ಹ್ಯಾಗ ಉತ್ಪತ್ತಿ ಆಗೇದ ಅಂತ ನಾ ಕೇಳ್ಲಿಕ್ಕ ಹೊಂಟೇನರಿ, ಅಷ್ಟರಾಗ ನೀವು ಈ ಕೊಶ್ಚನ ಹಾಕಿದ್ರಿ.

ಅವರು: ಸರಿ ಸರಿ, ಅದು ವ್ಯಾಕರಣದ ಮಾತ, ತೆಗೀರಿ ಅತ್ಲಾಗೆ, ಯಾರಾದ್ರೂ ವೈಯಾಕರಣಿಗಳ ಕೇಳ್ರಿ. ನಮ್ಗ ಗ್ರಾಮರ್, ಛಂದಸ್ಸು ಎಲ್ಲಾ ದೂರಾನೇಯ.

ಇವರು: ಇಲ್ಲಾ ಕ.ಸಾ.ಪ.ದ ಪದಕೋಶ ನೋಡ್ರಪಾ. ನೀವು ಅದೇನು ನಾಯಿ ಪಾಡು ಅನುಭವಿಸ್ತಿದೀರೋ, ಅದನಾರ ಹೇಳ್ರೀ, ಟೈಂಇದ್ರ ಕೇಳಾವ. ಆದ್ರ ಈಗ ವ್ಯಾಕರಣ ಪದಬಂಧ ಕಲಿಯೋ ವಯಸ್ಸಲ್ಲಪಾ ಮಗಾ. ಹೌದಲ್ವೋ?

ಅವರು: ಸರ್ಯಾಗ ಹೇಳೀದ್ರಿ. ನನಗಂತೂ ಚಿಕ್ಕವ್ನಾಗಿದ್ದ ಕಾಲದಿಂದೂ ವ್ಯಾಕರಣ ಅಂದ್ರ ಆ ಬೀಜಗಣಿತದ ತರಾ ಒಂಥರಾ, ಮಂಡೆ ಬಿಸಿಯಾಗೋದ.

ಇವರು: ನಿಜ, ನಿಜನೇ. ಆ ಆಲ್ಜೀಬ್ರವಂತೂ ಅದೇನು ಆ 'ಏ, ಬೀ, ಸೀ, ಎಕ್ಸ್, ವೈ, ಜ಼ೆಡ್'ಗಳ ಅವಾಂತರಾ. ಹುಚ್ಚೆದ್ದು ಕುಣೀತಾವ.

ಅವರು: ತಿಪ್ಪರಲಾಗ ಅಂತೀರಾ? ಇನ್ನತ್ರಿಗ್ನಾ ಮೆಟ್ರೀ ಅಂತೂ ಸೈನ್, ಕೋಸೈನ್, ಟ್ಯಾನ್‌ಗಳ ದೊಂಬರಾಟ, ಅದೂವೆ ಎಲ್ಲಾ ತ್ರಿಕೋಣದಾಗ. ಇನ್ನ ಆ ಕಾಲ್ದ ಗಣಿತ ಅಂದ್ರ– ಸುಬ್ಬಣ್ಣಚಾರ್ರ 'ಅಂಕ ಗಣಿತ'ದಾಗ ಇದೇ 'ಏ, ಬೀ, ಸೀ ಗಳ ಪೈಪೋಟಿ–ರನಿಂಗ್ ರೇಸ್ನಾಗ 'ಸೀ'ಗ ನಾಯಿ ಪಾಡೇ–ನಮ್ಮಂತ ಕುರಿ ಅವ. ತೊಟ್ಟೀಗ ನೀರ್ತುಂಬಾದ್ರಾಗೂ ಪೈಪೋಟೀನೇವೆಯಾ, 'ಸೀ' ವೀಕಂದ್ರೆ ವೀಕು, 'ಬೀ' ಅವ್ನ ನಾಯಿಪಾಡು ನೋಡ್ಲಾರ್ದೆ ಸಹಾಯಕ್ಕೆ ಬರಾವ–ಈಗಿನ ಕಾಲ್ದ ಜಾತಿ ಕ್ಲಾಸಿಫಿಕೇಷನ್ ತರಾ ಅವ್ರುಗೋಳು. ಅದಕ್ಕೇ ಯಾವ್ದೂ ಬ್ಯಾಡಂತ ಬಿ.ಎ. 'ಆರ್ಟ್ಸ್'ಗೆ ಶರಣು ಹೋದೆ.

ಅವರು: ಒಟ್ನಲ್ಲಿ ಅದೂ ನಿಮ್ಮ ನಾಯಿ ಪಾಡು, ಅಲ್ಲವೋ? ಅದ್ಕೆನ್ರೀ ನಾವು

ನಿಮ್ಗ ಕೇಳಾದು–ದಯವಿಟ್ಟು ಹಿಂದೆಲ್ಲಾ ಕೊರೆದಂಗ, ಈಗ ಕೊರೆತ ಬ್ಯಾಡ, ಅನಾಸಿನ್, ಆಸ್ಪ್ರೋ ನುಂಗವ್ರಲ್ಲ ನಾವು. ಬೀಪಿ, ಷುಗರ್, ಅದೂ ಇದೂ ಅಂತ ಹತ್ತಾರು ಮಾತ್ರೆ ನುಂಗ್ಕಂಡಿರೋಜನಾ ಆಗೀವಿ. ವಿಷಯಕ್ಕ ಬನ್ರಿ.

ಇವರು: ಪಾಪ, ನನಗನ್ನಿಸೋದೇನಪಾ ಅಂದ್ರ, ಇವ್ರು ಬರೆಯೋ ಜಾತಿ, ಏನೇನ್ನೋ ತೋಚ್ಕಂಡು ಗೀಚೋ ಐನಾತಿಗೋಳು, ಅದನ್ನೆಲ್ಲ ಪ್ರಕಟಿಸೋ ಮಂದಿ ಅದಾರ. ಓದಾವ್ನಗೆ ಮಾತ್ರ ಪೀಕ್ಲಾಟ, ಸಂಕಟ.ಹೀಗೆ ನೀವೇ ಕೊರೀಲಿಕ್ಕ ನಿಂತ್ರಾ, ಈಗ್ಲೇ, ಇಲ್ಲಿಂದಲೇ, ನಿಮ್ಗೆ ಸಯಾನಾರ ಹೇಳೋದಾನೆ ಸರಿ, ನಮಗ್ಯಾಕ ಈ ತೆರ ನಾಯಿಪಾಡು?

ಅವರು: ಮತ್ತ ನೀವೇನರಾ ಹೇಳ್ಲಿಕ್ಕ ಬಂದ್ರಿ? ಅದೇ ಮರೆತಹೋಗೇದ,

ಇವರು: ಪಾಪ, ವಯಸ್ಸು ನೋಡಿ, ನಿಮ್ತಪ್ಪಲ್ಲ. ಮರೆಯೋದ ಸ್ವಭಾವಕ್ಕಅಂಟಿ ಹೋಗೇದ. ಅದೂ ವೆರಿಟೈರೂ ಆಗಿ, ರಿಟ್ರೇಡ್ಗೂ 'ನಾಲಾಯಿಕ್' ಅಂತೇಳೀ ಹೆಂಡ್ತಿ" ರೀ, ಸುಮ್ನೆ ಪೇಪರ್ನ ಗಂಟೆಗಂಟೆ 'ಹೆಡಿಂಗ್' ಇಂದ ಕೊನೇ ಪ್ರಿಂಟರ್ ಹೆಸರಿನ ತಂಕಾ ಓದಾ ಬದ್ಲು ನಮ್ಮ ಮುದ್ದು 'ಡಾಲಿ'ನ ವಾಕಿಂಗ್ ಮಾಡ್ಸಿ ಅಂತ ಆರ್ಡರ್ ಮಾಡೋದ. ಅದ್ಕೇನ 'ಶ್ವಾನ ಪ್ರಸ್ತಾಶ್ರಮದಾಗಿರೋ ಮಂದಿ' ಅಂತ ಮೊಮ್ಮಕ್ಳೂ ಕಾಲೆಳಯೋದ ನಮ್ಮಂತಾವ್ರನ್ನ.

ಅವರು: ಹಾ, ಜ್ಞೆಪ್ತಿಗ ಬಂತು. ನಾಯಿ ಪಾಡು, ಹಾಗಂದ್ರೇನಾ ಅಂತಲ್ವೋ? ಅದ್ನ ಅನುಭವಿಸಿ ತಿಳಕಾಬೇಕು ರಿ. ನಾ ಅನೇಕ ಸಲ ಸರ್ಕಾರೀ ಕಚೇರಿಗಳ್ಗೆ ಹೋದಾಗ ಅವರು ನನ್ನ ಪರ್ಮಿಟ್ಗೋ, ಬಿಲ್ಡಿಂಗ್ ಲೈಸೆನ್ಸಗೋ, ರೇಷನ್ಕಾರ್ಡ್ಗೋ, ಮತ್ತನ್ನೇಕೋ ಹೋದಾಗ ಮೇಜಿಂದ ಮೇಜ್ಗೆ, ಕುರ್ಚಿಯಿಂದ ಕುರ್ಚಿಗೆ ಅನೇಕ ಬಾರಿ ಸುತ್ತಿಸ್ತಾರೆ, ಕೈಹಣ–ಲಂಚ ಅನ್ಬಾರ್ದು, ಅದು ಸೀರಿಯಸ್ ಅಫೆನ್ಸ್–ಪಡೆಯೋದ್ನ ಹೇಳ್ಬಾರ್ದು, ಹೇಳಾಂಗ ಮಾಡ್ಬಾರ್ದು' ಅನ್ನೋ ಅನ್ನಫಷಿಯಲ್ ಫರ್ಮಾನ ಅದೇರಿ.

ನಾನು: ರೀ, ವಿಷಯಕ್ಕ ಬನ್ನೀಪ್ಪ, ನೀವೇ ಕೊರೆಯಕ್ಕೆ ಷುರು ಹಚ್ಕಂಡ್ರೆ ನಮ್ಮಾನ್ಯಾಕೆ ಕೊರೆಯೋವ ಅಂತಾ...

ಅವರು: ಸರ್ರ್ಯಾಗ ಹೇಳಿದಿರೀ. ಅದು ಹಾಗಿರ್ಲಿ. ಸ್ವತಂತ್ರ್ಯ ಭಾರತದಲ್ಲಿ ಏನೇ ಮಾಡಿದ್ರೂ ಕಣ್ಮುಚ್ಚಿ ಮಾಡ್ಬೇಕಪಾ, ಶಿವಾ ಕಣ್ತೆರ್ದಿದೇ ಕಾಮನ ಭಸ್ಮಆಗಾದಿರ್ಲಿ, ಶಿವ್ನ ತಪಸ್ಸೇ ಉಡೀಸ್! ಅಲ್ಲವೋ? ಮಾವದಕ್ಷನ ಮಗಳ ಕಟಗೊಂಡು ಅವಮಾನ ಪಟ್ಟವನ್ಗೆ ಮತ್ತೆ ಸಂಸಾರ ತಾಪತ್ರಯಾನಾ, ಹೌದೋ, ಅಲ್ಲವೋ? ಈ ಪಾರ್ವತಯ್ಯ ಮಾವ್ನ ಪಾಡು ಹೇಗೋ, ಏನೋ?

ಇವರು: ನಿಜಾ. ಅವ್ನ ನಾಂಯಿಪಾಡು ಸಂಕಟಯಾತ್ರ್ನಾವ ಹೇಳ್ಲಿಕ್ಕ ಬೇಕು?ಮತ್ತೆ ಪಾರೋತಮ್ಮನ ಪಂಚಾಗ್ನಿ ತಪಸ್ಸ್ಗೆ ಸೋತು ಆಕೆನ ಕಟ್ಕೊಂಡ ನಿಜ. ಇದೆಲ್ಲೀ ತಪರಾಕು, ಆ ಕಾಮನ್ನ ಸುಟ್ಟಾಕಿ, ಅವ್ನ ಸಂಸಾರ ಮಟಾಶ್ ಆಗಿ, ನಾನ್ ಕುತ್ಗೇಗೆ ಕಟ್ಕಂಡೆ ಮತ್ತೆ ಸಂಸಾರಾಂತ ಅನ್‌ಕಂಡಿದ್ದನಾ?

ಇವರು: ಪಾಪ, ಅವ್ನು ಅದಕ್ಮುಂಚೇನೇ ಕುತ್ತಿಗೇಗೆ ಆ ಹಾವ್ನ–ಅದೇ ಮಗ

ಸುಬ್ಬಣ್ಣನ್ನ– ಗಂಟಾಕ್ಕಂಡಿದ್ದನಲ್ವೋ?

ಅವರು: ಶಿವ ಅಂತಾ ಪರಿಸ್ಥಿತೀಲಿ ಜಪಾ ಮಾಡಕ್ಕುಂತಾಗ ಅನ್ಕಂಡಿರೋದ ಉಂಟೇನೋ–ಇದ್ಯಾವ ನಾಯಿಪಾಡು–ಅಂತಾ.

ಇವರು: ನಿಮ್ಮಿವ ಮನಸ್ನಾಗ ಏನನ್ಕಂಡಿದ್ದನೋ ಹೊರಗೆ ಮಾತ್ರ ಆಕೆಗೆ "ಅದ್ಯ ಪ್ರಭುತ್ಯವನತಾಂಗಿ ತವಾಸ್ಮಿ ದಾಸ: ಕ್ರೀತಸ್ತಪೋಭಿರಿತಿ(*ವಾದಿನಿ ಚಂದ್ರಮೌಳಿ– ಕಾಳಿದಾಸನ ಕುಮಾರ ಸಂಭವ, ಐದನೇ ಸರ್ಗ, ಶ್ಲೋಕ 86)", ಅಂತ ನಮ್ಮಿನಿಷ್ಟರುಗೋಳ ತರಾ ಪಬ್ಲಿಕ್ ಸ್ಟೇಟ್ಮೆಂಟೇಕೊಟ್ಟನಲ್ಲಾ ಶಿವ!

ನಾನು: 'ನಾಯಿಪಾಡು'ಗೂ ಶಿವ್ನಗೂ ಯಾಕಾರ ಗಂಟಾಕ್ತೀರಾ? ನಾ ಏನ ಹೇಳಬೇಕ ಅನ್ನಷ್ಟರಲ್ಲೇ ಇಷ್ಟೊಂದು ಮಾತ ನಿಮ್ಮಿಂದ ಬಂದದಲ್ಲಾ, ನಿಮ್ಗ ಕೇಳ್ಬೇಕಾದ್ದ ಮಾತ್ಗ ನೀವಾಡಿದ್ದು ಕೊರೆತಾನ, ಅಲ್ಲವೋ? ನಾಯಿಪಾಡು–ಅನ್ನ ಶಬ್ದದಉತ್ಪತ್ತಿ ಹೇಗ? ನಾಯಿಗೇನಾರ ಸಂಬಂಧಅದಾ? ಅಷ್ಟ ಹೇಳ್ರಪಾ.

ಅವರು: ಹ್ಯಾಗ ಅಂದ್ರ, ನಾಯಿಗ ಮನೆಯೊಳಗ ಇಟ್ಟು ಸಾಕದಾದ್ರ, ಅದುಕೊನೇವರ್ಗೂ ನಮ್ಮ ಸೇವೆ ಮಾಡೋಂತ ಪ್ರಾಣಿ, ಬೇಟೆಗೆ ಹೋದ್ರ ನಮ್ಸಹಾಯಕ್ಕಬರ್ತದ, ಅಲ್ಲವ್ರ?

ನಾನು: :ಅದ್ನ ಹೋಗಿ, ಹೋಗಿ ನಾಯಿಪಾಡು ಅನ್ನೋದ ಸರಿಯುಂಟಾರಾಯ್ರೆ? ನಮ್ರ ಸೇವಕ ಅಲ್ಲೋ? ಎಷ್ಟಾದ್ರೂ ನಿಯತ್ತಿನ ಪ್ರಾಣಿ, ಮನುಷ್ಯಗ ಹೋಲಿಸಿದ್ರ ಇವನು ಮಾಡಾ ಪಾಪಾನಾ–ಅದೇನೋ ಅಂತಾರಲ್ಲ– ಕೋತಿತಾನ್ಮಿಂದ್ಮೇಕೆ ಬಾಯ್ಗೆ ಒರ್ಸಿದಂಗೇ ನಾಯಿಗ್ಕಟ್ಟೋದ ಸರೀನಾ?

ಇವರು: ನಿಜ, ಕೆಲವು ದೊಡ್ಡೊಡ್ ರಾಜ್ಕಾರ್ಣಿಗಳು ಹೆಚ್ಚುಕಮ್ಮಿ ಮಾಡಿ ಸಿಕ್ಕಾಕೊಳ್ಳೋ ಪರಿಸ್ಥಿತೀಲಿ ಅವ್ರ ಕೈಕೆಳ್ಗಿನ ಮಂದಿಗೋ, ಇವರ್ಗಾಗದವ್ರಗೋ ಕಟ್ಟೋದ ನೋಡೀವಿ. ಆ ತರಾ.

ನಾನು: ಅದ್ಕೆ ಇದು ಅಪಭ್ರಂಶದ ಪ್ರಲಾಪ ನನಗೆ ಅನ್ನಿಸ್ತದೆ. ಯಾರ್ಗೋ ಏನೋ ಆಗಿದ್ರ, ಅದ್ಕ ನಾಯಿಪಾಡು ಅಂತೀರ, ಸರಿಕಾಣದು. ನಾಯಿ ಏನ್ಪಾಪ ಮಾಡೇದ?

ಇವರು: ಸರ್ಯಾಗ ಹೇಳಿದ್ರಿ. ನಾಯಿ ಯವತ್ತಾದ್ರೂ ನಿಮ್ನ ಆತರ ಗೋಳಯ್ದುದೇನ ಆ ನಾಯಿಪಾಡು ಅಂತಕರೀಲಿಕ್ಕೆ?

ನಾನು: ನಮ್ಪುರಾಣಗಳಲ್ಲೇ ಆಗಲಿ, ಮಿಡೇವಲ್ ಕಾಲ್ದ ಕನ್ನಡ ಗ್ರಂಥಗಳೆಲ್ಲೂ ಆಗ್ಲಿ ನಾಯಿಗ ಆಗ್ಲಿ, ಮಾನವ್ರಗ ಆಗಲಿ ಈ ಪದ ಉಪಯೋಗಕ್ಕ ಬಂದಿಲ್ಲಾಂತೀನಿ. ವೆಂಕಟಸುಬ್ಬಯ್ಯನವ್ರ ಪದಕೋಶದಾಗಅರ್ಥ 'ದುಸ್ಥಿತಿ' ಅಂತ್ಹೇಳವ್ರೆ. ವಾಡಿಕೆನಾಗೆ ಬರೋ ಮಾತ್ಗ ಮೂಲ ಹುಡ್ಕೋದಾಗಲ್ಲ ಅಂತ ತೀರ್ಮಾನಕ್ಕ ಬಂದೀನಿ.

ಅವರು: ಯಾರು ಯಾವ ಹೆಸರ್ನಲ್ಲಿ ಕರ್ಕಂಡೇನ್ರಿ ನಮಗೂ? ಆ ಕಾಳಜಿ ಬ್ಯಾಡ, ತೆಪ್ಪಗಿದ್ರಾತಲ್ವೋ.

ಇವರು: ಏನಾದರೂ ಸಂಶೋಧನ ಮಾಡ್ತೀರಾ? ಅಂಗದ್ರೆ ಮೈಸೂರ್ನ ಓರಿಯಂಟಲನಾಗೆ ನೋಡ್ರೀ, ನಮ್ಗ ಬಿಡಿ. ಈ ಕರೋಣಾ ಮನುಷ್ರಗೆ

ಬದಂಗೆಅವಕೇನಾದ್ರೂ ಈ ಮಾನವ ಪಾಡು ಬರೋದು ಬೇಡ.

ಅವರು: ಗೊತ್ತಾತು ಬಿಡ್ರಿ. ನೀವೂ ನಾಯಿ ಸಾಕ್ಕಂಡಿದೀರಾ, ನಾ ನೋಡಿಲ್ವೆ ನೀವು ರಿಟೈರಾದಾಗಿಂದ ಆ ನಿಮ್ನಾಯಿ ಜೊತೆಗೇ ಯಾವಾಗ್ಲೂ ಇರೋದಾ? ಬೆಳಿಗ್ಗೆ, ಸಂಜೆ ವಾಕ್, ಮಧ್ಯಾನ್ಹ ಕಸಾಯಿ ಅಂಗ್ಡೀಲಿ ಅದ್ಕ ನಾನ್ವೆಜ್, ಮಾಲೀಕ ಫರೂಕ್ನ ಹತ್ರ ಹರಟೆಗೆ ನೀವು ನಿಲ್ಲೋದ್ನ? ಇವತ್ತೇನೋ ಅದ್ಕಾಣ್ಸೆತಿಲ್ಲ.

ಇವರು: ಅಯ್ಯೋ, ಅದ್ರ ಪಾಡು ಬೇಡಾ, ಬೇಡಾಅಪ್ಪ. ಹೆರಿಗೆ ನೋವು ಬಂದದಾರೀ. ನನ್ನ ಹೆಂಡ್ತಿ ಅದ್ರ ಪಕದಾಗೇ ಇರ್ಬೇಕಂತ ಚೀರಾಡ್ತದೇ. ಅದ್ಕೆ ಅಲ್ಲೇ ಇರ್ತಾಳ್ರೀ, ನಾನೇ ಈಗ ಅಡಿಗೆ ಕೆಲ್ಸಕೂಡ ನಾನೇ ಮಾಡವಾ. ಅದೇ ನೋಡ್ರೀ, ನನ್ಮಗಳ ಹೆರಿಗೆ ನೋವ್ನಾಗೂ ನಾ ಕೆಲ್ಸದಾಗರಜಾ ಸಿಕ್ದೆ ಕಚೇರೀನಾಗೆ ಕುಂತು ಫೋನಲ್ಲೇ ಇರ್ತಿದ್ದೆ,

ನಾನು: ಮತ್ಹೇಗೆ ಈಗ ಇಲ್ಲೀತಂಕ ಬಂದ್ರೀ? ನಾನಾಗಿದ್ರೆ ಇದ್ಯಾವ 'ನಾಯಿಪಾಡಂತ' ಅಲ್ಲೆ ಇರೋವನಪ್ಪಾ. ಅಡಿಗೆ ಮನೇ ಇಂದ ಪ್ರಸೂತಿ ಮನೇಗೆ, ಅಲ್ಲಿಂದ ಮತ್ತೆ ಅಡಿಗೇ ಮನೇಗ ಓಡಾಡ್ಕಂಡಿ.

ಅವರು: ನಮ್ಮನ್ಯಾಗೂ ಒಂದ್ಕಾಲ್ದಾಗ ನಾಯಿ ಸಾಕಿದ್ವರೀ. ನಮ್ಮಕ್ಳು ಹುಟ್ಟಾಕ ಮಂಚೆ. ಹೆಂಡ್ತಿ ಬಂದ ಹೊಸ್ದಾಗ. ಆಕೇಗ ಆಗ್ಲೂ, ಈಗ್ಲೂನೂವೆ ನಾಯಿ ಕಂಡೆ ಬೋ ಭಯ, ಮೈಲಿ ದೂರ ಇರ್ತಾಳ.ನಾನು ಪಾಠ ಮಾಡಕ್ಕ ಕಾಲೆಜಿನಾಗ ಹೋಗೋ ವೇಳಾ ಮುಂಚೆ, ಸಂಜೆ ನಾ ಕೋಚಿಂಗ್ ಮಾಡಕ್ಕ ಮುಂಚೆ ಅದ್ಕ ವಾಕಿಂಗ ಮಾಡ್ಸಾದು, ಸ್ನಾನ ಮಾಡ್ಸಾದು, ಅದಕ ಬೇಕಾಗೋ ಸ್ಪೆಷಲ್ ಲಂಚು ಈರಪ್ಪನ ನಾನ್ವೆಜ್‌ದುಕಾನ್ನಲ್ಲಿ, ಡಾಕ್ಟ್ರ ಸೇವಾ ಎಲ್ಲಾ ಮಾಡ್ದೆನರೀ, ಮಕ್ಕಳು ಹುಟ್ಟಿದ ಮ್ಯಾಗೆ ಆ ನಾಯಿ, ಅದ್ರ ಮರೀಗಳ್ನೂ ದಾನ ಮಾಡಬೇಕಾಯ್ತು. ಮತ್ತೆ ಮಕ್ಳ ಜೊತೇಗೇಅದ್ನೂ ನೋಡ್ಕೊಳ್ಳಾದು ಬೋ ಕಷ್ಟ ಅಲ್ವನ್ರಪಾ?

ನಾನು: ಬಿಡಿ, ಇದೀಗ ನಂ ಅರ್ಥವಾಯತು ನಾಂಯಿ ಪಾಡಂದ್ರ ಏನಪಾ ಅಂತ.

ಅವರು, ಇವರು: (ಒಟ್ಟಿಗೇನೇ) ಅದುವೇ ನಾಯಿಪಾಡು ಅಂತ ತಿಳಿದೇವ್ರೀ. ಸಾಕು ಪ್ರಾಣಿಗಳಲ್ಲಿ ನಿಯತ್ತಿಂದ ಸೇವೆ ಮಾಡೋ ಪ್ರಾಣಿ ನಾಯಿ, ನಮ್ಮ ಬೀದಿ ಪುಢಾರಿಗಳ್ತರಾ ಅಲ್ಲ ಅವು, ಪಕ್ಷದಿಂದ ಪಕ್ಷಕ್ಕೆ ಹಾರೋವೂಅಲ್ಲಾ,

ನಾನು: ನಮಸ್ಕಾರಾರ್ರೀ, ಮತ್ತೆ ನೋಡಾವ. ಆದ್ರ ಕೊರೆತ ಯಾರ್ಗೂ ಬೇಡ ಹಲವಾರು ಕೆಟ್ಟ ಟೀವಿ ಸೀರಿಯಲ್ಗಳ ತರಾ.

■

---

**ಕೋವಿದ(ಡ)ರು**

ಅಂದಿನ ಕಾಲದಲ್ಲಿ ಇರುತ್ತಿದ್ದರು
ಅಲ್ಲಲ್ಲಿ ಬಹುಭಾಷಾ ಕೋವಿದರು
ಈಗಿನ ಕಾಲದಲ್ಲಿ
ಇದ್ದಾರೆ ಅಲ್ಲಲ್ಲಿ
ಸೋಂಕು ಮಿಶ್ರಿತ ಕೋವಿಡರು

# ಕೋತಿ ಕೆಲಸ  ಹಾಗೂ ಪ್ರಾರಬ್ಧ ಕರ್ಮ

**ರಘುನಂದನ**

ಯಾರಾದರೂ ತಮಗೆ ಸಂಭಂದವಿಲ್ಲದ ಅಥವಾ ಅಗತ್ಯವಿಲ್ಲದ ಯಾವುದಾದರೂ ಇಲ್ಲ ಸಲ್ಲದ ಕೆಲಸಕ್ಕೆ ಕೈಹಾಕಿ ಆ ಮೂಲಕ ಪದಾರ್ಥಗಳನ್ನು ಅಥವಾ ವಸ್ತುಗಳನ್ನು ಹಾಳುಮಾಡಿದಾಗ ಅಥವಾ ಕಾರಣವಿಲ್ಲದೆ 'ಕೈಕಡಿತದಿಂದ' ಏನಾದರೂ ಮಾಡಿ ಏನನ್ನಾದರೂ ಹಾಳುಗೆಡವಿದಾಗ ಅಂಥದನ್ನು ನಮ್ಮಲ್ಲಿ 'ಕೋತಿ ಕೆಲಸ' ಎನ್ನುತ್ತೇವೆ.  ಉದಾ : ಏನೋ ನೋಡುತ್ತಲೋ, ಮಾತನಾಡುತ್ತಲೋ ನಿಂತಿದ್ದಾಗ ಕೈಗೆ ಸಿಕ್ಕಿದ ಕಡ್ಡಿಯನ್ನು ಪಕ್ಕದ ಕಪಾಟಿನ ಬಾಗಿಲ ಬೀಗದ ತೂತಿನೊಳಗೆ ಹಾಕಿ ತಿರುಗಿಸುತ್ತಾ ಅದರೊಳಗೆ ಕಡ್ಡಿಯನ್ನು ಮುರಿದುಬಿಡುವುದು. ಕುಳಿತು ಮಾತನಾಡುತ್ತಿದ್ದಾಗ ಪಕ್ಕದಲ್ಲಿದ್ದ ಕಾಗದ ತುಂಡನ್ನು ಮಡಿಸಿ, ಬಿಡಿಸಿ ಮಾಡುತ್ತಾ, ಅದನ್ನು ಹರಿದು, ನಂತರ ಅದು ಯಾವುದೋ ಮುಖ್ಯವಾದ ಪತ್ರವೋ, ರಸೀತಿಯೋ ಎಂದು ತಿಳಿದು ಪರಿತಪಿಸುವುದು, ಇಂಥ ಕೆಲಸಗಳು. ಮಕ್ಕಳು, ಮಕ್ಕಳು ಮಾತ್ರವೇಕೆ ದೊಡ್ಡವರೂ ಸಹ, ಅಂಥ ಯಾವುದಾದರೂ ಕೆಲಸದಲ್ಲಿ ನಿರತರಾದದ್ದನ್ನು ಕಂಡಾಗ "ಸುಮ್ಮನೆ ಇರಬಾರದೇ? ಕೋತಿ ಕೆಲಸ ಮಾಡುವುದೇಕೆ?" ಎಂಬ ಟೀಕೆ ನಮ್ಮ ಮನೆಯಲ್ಲಿ ಯಾರಿಂದಲಾದರೂ ಬರುತ್ತದೆ.

ಅಂತೆಯೇ, ನಮ್ಮ ಪಾತ್ರವೇನು ಇಲ್ಲದ, ನಾವು ಯಾವ ರೀತಿಯಲ್ಲೂ ಅದಕ್ಕೆ ಕಾರಣರಲ್ಲದ ಯಾವುದಾದರೂ ಘಟನೆ ಘಟಿಸಿ ಅದರಿಂದ ನಮಗೆ ತೊಂದರೆಯಾದಾಗ ಅದನ್ನು 'ಪ್ರಾರಬ್ಧ ಕರ್ಮ' ಎನ್ನುತ್ತೇವೆ.  ನಮ್ಮ ಪುರಾಣಗಳ ಪ್ರಕಾರ  'ಪ್ರಾರಬ್ಧ ಕರ್ಮ' ಎಂಬುದಕ್ಕೆ ಬೇರೆಯೇ ಅರ್ಥವಿದೆ. ನಾನು ಇಲ್ಲಿ ಸಾಮಾನ್ಯ ಬಳಕೆಯ ಬಗ್ಗೆ ಹೇಳುತ್ತಿದ್ದೇನೆ. ಇವೆರಡೂ ಪದಗಳ ಬಳಕೆಯನ್ನು ಉದಾಹರಣೆ ಮೂಲಕ ತಿಳಿಸುವ ಒಂದು ಪ್ರಸಂಗ ಮೊನ್ನೆ ಬಂದಿತು.

ಕೋತಿಗಳು ನಮ್ಮ ಅಂಗಳಕ್ಕೆ ಬರುವುದು ಹೊಸದೇನಲ್ಲ. ಎರಡುಮೂರು ತಿಂಗಳಿಗೊಮ್ಮೆ ಒಂದು ಕೋತಿಗಳ ಗುಂಪು ಬಂದು ಧಾಳಿ ಮಾಡಿ ನಮ್ಮ ಅಂಗಳದ ಗಿಡಮರಗಳ ರೆಂಬೆ ಕೊಂಬೆ ಗಳನ್ನು ಮುರಿದು, ಎಲೆ, ಚಿಗುರು, ಹೀಚು, ಕಾಯಿಗಳನ್ನೆಲ್ಲಾ ಕಿತ್ತು, ಸ್ವಲ್ಪವನ್ನು  ತಿಂದು, ಉಳಿದದ್ದನ್ನು  ಚೆಲ್ಲಾಡಿ, ತಮ್ಮ ದಾರಿ ಹಿಡಿದು ಹೊರಟುಹೋಗುತ್ತವೆ. ಇದರ ಬಗ್ಗೆ ನನ್ನ ಆಕ್ಷೇಪಣೆ ಏನಿಲ್ಲ. ಕೋತಿಗಳು ಬದುಕಬೇಕಾಗಿರುವುದೆ ಹಾಗೆ. ಮರ್ಯಾದಾ ಪುರುಷೋತ್ತಮ ಶ್ರೀರಾಮನ ವಾನರ ಸೈನ್ಯವೇ ಲಂಕೆಯಿಂದ ಹಿಂದಿರುಗುವಾಗ, ತಮಗೆ ಆಹಾರ ಸ್ವೀಕರಿಸಲು ಆಹ್ವಾನ ನೀಡಿದ  ಯಾರದೋ ವನವನ್ನು ಹೊಕ್ಕು, ಹಣ್ಣು ಕಾಯಿಗಳನ್ನು ತಿಂದು ಹೊಟ್ಟೆ ತುಂಬಿಕೊಂಡು, ಅಷ್ಟಕ್ಕೆ ಬಿಡದೆ, ಉಳಿದ ವನವನ್ನು ಕಿತ್ತು ತೂರಾಡಿ ಧ್ವಂಸಮಾಡಿ ಬಂದವೆಂದು ಓದಿದ್ದೇನೆ. 'ರಾಮಸೇನಾ' ಎನ್ನುವ ವಾನರಗಳೆಲ್ಲಾ ಹಾಗೆಯೇ ಎಂದು ಹೇಳುವ ಉದ್ಧಟತನವನ್ನು ನಾನು ಮಾಡಲಾರೆ. ಆದರೆ ಆ ವಾನರ ಸೈನ್ಯದ ಕತೆಯೇ ಹಾಗಾದರೆ ಇನ್ನು ನಮ್ಮ ನಾಡಿನ ಕೋತಿಗಳ ಕಥೆ ಕೇಳಬೇಕೆ ?

ಮೊನ್ನೆ  ಮಧ್ಯಾಹ್ನ ಮಹಡಿಯಮೇಲೆ ಕೋಣೆಯಲ್ಲಿ ಕೂತು ಏನೋ ಓದುತ್ತಿದ್ದಾಗ ಹೊರಗಡೆ ಸದ್ದಾಯಿತು. ಕಿಟಕಿಯಿಂದ ಇಣುಕಿದಾಗ ಪಕ್ಕದ ಮನೆಯ ಬಾಲ್ಕನಿಯ ಮೇಲೆ ಎರಡು ಮಂಗಗಳು ಕಾಣಿಸಿದವು. ಅದರಲ್ಲೊಂದು ಮಂಗ ಬಾಲ್ಕನಿಯ ಮೇಲಿಂದ ಅವರ ಅಂಗಳದಲ್ಲಿದ್ದ ಬಾಳೆಗಿಡಕ್ಕೆ ಹಾರಿತು. ಗೊನೆಯ ಭಾರದಿಂದ ಆಗಲೇ ಬಗ್ಗಿದ್ದ ಬಾಳೆಗಿಡ, ಮಂಗನ ಭಾರಕ್ಕೆ ಮುರಿದು ನಮ್ಮ ಕಂಪೌಂಡಿನ

ಮೇಲೆ ಬಿತ್ತು. ಎರಡೂ ಕೋತಿಗಳು ಬಿದ್ದ ಗಿಡದಿಂದ ಎರಡೆರಡು ಬಾಳೆಯ ಕಾಯಿಗಳನ್ನು ಮುರಿದುಕೊಂಡು ಕಚ್ಚಿ ರುಚಿ ನೋಡಿ, ಬಹುಶಃ ರುಚಿ ಸರಿಬರದೆ, ಅದನ್ನು ಬಿಸುಟು, ಪಕ್ಕದಲ್ಲಿದ್ದ ನಮ್ಮ ಸೀಬೆಗಿಡಕ್ಕೆ ಏರಿದವು. ಬಲಿತು ಹಣ್ಣಾಗುತ್ತಿದ್ದ ಕಾಯಿಗಳೆರಡನ್ನು ಕಿತ್ತು ತಿನ್ನುತ್ತಾ ಅದರ ಬದಿಯಲ್ಲಿದ್ದ ಮಾವಿನ ಮರಕ್ಕೆ ಹಾರಿ ಕುಳಿತವು. ಆ ಹೊತ್ತಿಗೆ ಕಿಟಕಿಯಲ್ಲಿ ನನ್ನನ್ನು ಕಂಡು ಹಲ್ಲುಕಿರಿದು, ಗುರ್‌ರ್‌ರ್‌ಂದು ಬೆದರಿಸಿ, ಮಾಳಿಗೆಯ ಮೇಲಕ್ಕೆ ಹತ್ತಿ ನನಗೆ ಕಾಣದಾದವು. ಮತ್ಯಾವುದೋ ಕೆಲಸದಲ್ಲಿ ಮಗ್ನನಾದ ನನಗೆ ಕೋತಿಗಳ ವಿಷಯ ಮರೆತೇ ಹೋಯಿತು.

ಒಂದೆರಡು ಘಂಟೆಗಳ ನಂತರ ಏನೋ ಕೆಲಸಕ್ಕೆಂದು ಹೊರಹೋದವನು ವಾಪಸು ಬಂದಾಗ ಮನೆಯ ತಾರಸಿಯಿಂದ ಕೆಳಕ್ಕೆ ನೀರಿಳಿಯುತ್ತಿದ್ದುದು ಕಾಣಿಸಿತು. ಮಳೆಯಿಲ್ಲದ ಸಮಯದಲ್ಲಿ ಹೀಗೆ ನೀರು ಸುರಿದರೆ ಸಾಮಾನ್ಯವಾಗಿ ತಾರಸಿ ಮೇಲಿರುವ ನೀರಿನ ತೊಟ್ಟಿ ತುಂಬಿಕೊಂಡು, ಹೆಚ್ಚಾದ ನೀರು ಹೊರಗೆ ಬೀಳುತ್ತಿದೆಯೆಂದು ಅರ್ಥ. ಆದರೆ ಅದು ನಲ್ಲಿಯಲ್ಲಿ ನೀರು ಬರುವ ಸಮಯವಲ್ಲವಾದ್ದರಿಂದ, ಅನುಮಾನ ಬಂದು, ಏನಾಗಿದೆಯೆಂದು ತಿಳಿಯಲು ತಾರಸಿಯ ಮೇಲಕ್ಕೆ ಹತ್ತಿದೆ. ನಮ್ಮ ತಾರಸಿಯ ಮೇಲೆ ನೀರಿನ ಟಾಕಿಯೊಂದಿಗೆ ಸೌರಶಕ್ತಿಯಿಂದ ನೀರು ಬಿಸಿಮಾಡುವ ಉಪಕರಣವೂ ಇದೆ. ಅದರಿಂದ ಬಿಸಿನೀರು ಹೊರಗೆ ಬರುವ ಕೊಳವೆ ಮುರಿದು ನೀರು ಬುಗ್ಗೆ ಬುಗ್ಗೆ ಯಾಗಿ ಹೊರಗೆ ಸುರಿಯುತ್ತಿತ್ತು. ಅದು ಹೇಗೆ ಮುರಿಯಿತೆಂದು ತಿಳಿಯದೆ ಅತ್ತಿತ್ತ ನೋಡಿದಾಗ ಪಕ್ಕದ ಮನೆಯ ಎರಡನೇ ಮಜಲಿನ ಮೇಲೆ ಕುಳಿತು ನೀರು ಹೊರಹೊಮ್ಮುತ್ತಿದ್ದ ದೃಶ್ಯವನ್ನು ನೋಡಿ ಸಂತೋಷಪಡುತ್ತಿದ್ದ ಮಂಗ ಕಣ್ಣಿಗೆ ಬಿತ್ತು. ಅದರ ಕುಚೇಷ್ಟೆಯನ್ನು ಕಂಡು ಅಸಾಧ್ಯ ಸಿಟ್ಟು ಬಂದರೂ ಸಹ, ಅದಕ್ಕೆ ನಾನು ಏನೂ ಮಾಡುವಂತೆ ಇರದಿದ್ದ ಕಾರಣ, ಮುರಿದು ಕೆಳಗೆ ಬಿದ್ದಿದ್ದ ಕೊಳವೆಯನ್ನು ಕೈಗೆತ್ತಿಕೊಂಡು ಅದರ ಕಡೆಗೆ ಬೀಸುವ ನಟನೆ ಮಾಡಿದೆ. ನನ್ನಂಥವರು ಅದೆಷ್ಟು ಜನರನ್ನು ಕಂಡಿದೆಯೋ ಆ ಮಂಗ ! ನನ್ನಿಂದ ಏನೂ ಆಗದೆಂದು ಅದಕ್ಕೆ ಚೆನ್ನಾಗಿ ಗೊತ್ತು. ನನ್ನ ಸಮಾಧಾನಕ್ಕೆಂಬಂತೆ ಎರಡು ಹೆಜ್ಜೆ ಹಿಂದೆ ಸರಿದು, ಮತ್ತೆ ನನ್ನೆಡೆ ತಿರುಗಿ ಅಣಕಿಸಿ, ಹಲ್ಲುಕಿರಿದು, ಗುರ ಗುಟ್ಟಿ ಓಡಿಹೋಯಿತು. ಮುರಿದ ಕೊಳವೆ, ಮಂಗನದೇ ಕೆಲಸವೆಂದು ಗೊತ್ತಾಯಿತು.

ಇಲ್ಲಿಯವರೆಗೂ ಸುಮ್ಮನೆ ನಡೆದ ವಿಷಯ ಮಾತ್ರ ತಿಳಿಸಿದೆ. ಇದು ಬರಿಯ ಒಂದು ನೀರಿನ ಕೊಳವೆ ಮುರಿದು ಸರಿಪಡಿಸಿದ ಕೆಲಸವಾಗಿ ಮುಗಿಯಲಿಲ್ಲ. ಆದಿನ ಮನೆಯಲ್ಲಿ ಏನೋ ವಿಶೇಷವಿದ್ದ ಕಾರಣ ಕೆಲವು ಅತಿಥಿಗಳು ಮನೆಗೆ ಬರುವವರಿದ್ದರು. ನನ್ನ ಪತ್ನಿ ಅವರ ಉಪಾಹಾರದ ತಯಾರಿಯಲ್ಲಿದ್ದಂತೆ ನೀರು ಖಾಲಿಯಾಗಿ ನಲ್ಲಿ ಗೊರ ಗೊರ ಎಂದುಬಿಟ್ಟಿತು. ಆಕೆಗೆ ಕೊಳವೆ ಮುರಿದಿದ್ದ ವಿಷಯ ತಿಳಿದಿರಲಿಲ್ಲವಾದ್ದರಿಂದ, ತಾರಸಿ ಮೇಲಿನ ತೊಟ್ಟಿಯಲ್ಲಿ ನೀರು ಖಾಲಿಯಾಯಿತೆಂದುಕೊಂಡು ಕೆಳಗೆ ನೀರು ಸಂಗ್ರಹ ವಾಗಿದ್ದ ಇನ್ನೊಂದು ತೊಟ್ಟಿಯಿಂದ ನೀರನ್ನು ಮೇಲಕ್ಕೆ ಪಂಪ್ ಮಾಡಿದಳು. ಮೇಲೇರಿದ ನೀರು, ಮುರಿದ ಕೊಳವೆಯಿಂದ ಮತ್ತೆ ಹೊರಹರಿದು, ಮೇಲಿನ, ಕೆಳಗಿನ, ಎರಡೂ ನೀರಿನ ತೊಟ್ಟಿಗಳು ಖಾಲಿಯಾಗುವುದರಲ್ಲಿದ್ದವು. ಆ ಸಮಯದಲ್ಲೇ ನಾನು ಅದನ್ನು ಕಂಡಿದ್ದು. ಕೊನೆಗೆ ಪಕ್ಕದ ಮನೆಯಿಂದ ಬಕೆಟ್ಟುಗಳನ್ನೂ ನೀರನ್ನೂ ಕೇಳಿ ಪಡೆದು ಅಂದಿನ ಕೆಲಸವನ್ನು ಸಾಗಹಾಕಿದ್ದಾಯಿತು.

ಮುಂದಿನದು ಗೊತ್ತೇ ಇದೆಯಲ್ಲ, ಮಾರನೆಯ ದಿನ ಗಡಿಬಿಡಿಯಲ್ಲಿ ನಲ್ಲಿ ಕೆಲಸದವನನ್ನು ಕರೆದು, ಐನೂರು ರೂಪಾಯಿ ಖರ್ಚುಮಾಡಿ, ಮುರಿದ ಕೊಳವೆಯ

ರಿಪೇರಿ ಮಾಡಿಸಿದ್ದಾಯಿತು. ಏನೂ ಕಾರಣವಿಲ್ಲದೆ, ನನ್ನ ತಪ್ಪೇನೂ ಇಲ್ಲದೆ, ನನಗೆ ವೃಥಾ ಶ್ರಮ ಮತ್ತು ಖರ್ಚು. ಅದಕ್ಕೆ ಮಿಗಿಲಾಗಿ, ಏನೆಲ್ಲಾ ಸುವ್ಯವಸ್ಥೆ ಮಾಡಿಟ್ಟುಕೊಂಡಿದ್ದರೂ ಬೇಕಾದ ಸಮಯದಲ್ಲಿ ಅವೆಲ್ಲ ಕೆಲಸಕ್ಕೆ ಬಾರದಂತಾಗಿ ಅವ್ಯವಸ್ಥೆ ಹಾಗೂ ಪರದಾಟವಾಯಿತು.

ಈಗ ನೋಡಿ, ಆ ಕೋತಿ ನಮ್ಮ ಆವರಣಕ್ಕೆ ಬಂದದ್ದು ಆಹಾರ ಹುಡುಕಿಕೊಂಡು. ಅದಕ್ಕೆ ಬೇಕಾದ ಆಹಾರ ಸಿಕ್ಕಿತ್ತು ಕೂಡ. ತನ್ನ ಆಹಾರ ದೊರಕಿಸಿಕೊಳ್ಳುವ ಕಾರ್ಯದಲ್ಲಿ ತೊಡಗಿದ್ದ ಕೋತಿಯಿಂದ, ಆ ಕಾರ್ಯದ ಸಂಬಂಧದಲ್ಲಿ, ನನ್ನ ತೋಟದ ಇತರ ಗಿಡಮರಗಳಿಗೆ ಆಗಿದ್ದ ವಿಧ್ವಂಸಕ ಕಾರ್ಯಕ್ಕೆ ನನ್ನ ಆಕ್ಷೇಪಣೆ ಇರಲಿಲ್ಲ. ಆದರೆ ತನ್ನ ಹೊಟ್ಟೆ ತುಂಬಿಸಿಕೊಂಡು ತನ್ನಪಾಡಿಗೆ ತಾನು ತನ್ನ ಜಾಗಕ್ಕೆ ವಾಪಸುಹೋಗುವ ಬದಲು ಅದು ಮಾಡಿದ್ದೇನು? ತನ್ನ ದಾರಿಬಿಟ್ಟು, ತಾರಸಿಯಮೇಲೇರಿ, ತನಗೆ ಯಾವ ರೀತಿಯಲ್ಲೂ ಸಂಬಂಧವೇ ಇಲ್ಲದಿದ್ದ ನೀರಿನ ಕೊಳವೆಯನ್ನು ಹಿಡಿದು ನೇತಾಡಿ, ಎಗರಾಡಿ, ಅದನ್ನು ಮುರಿದಿಟ್ಟು ಹೋಯಿತು. ಇಂಥ ಕೆಲಸಗಳನ್ನೇ 'ಕೋತಿಕೆಲಸ' ಎನ್ನುವುದಲ್ಲವೇ ?

ಈ 'ಕೋತಿಕೆಲಸ'ದ ಬಗೆಗೆ ಬರೆಯಬೇಕೆಂದು ಬರಹ ಪ್ರಾರಂಭಮಾಡಿದ್ದ ಸಮಯದಲ್ಲಿ, ನನ್ನ ಪತ್ನಿ ನಮ್ಮ ಪಕ್ಕದ ಮನೆಯಾಕೆಯೊಡನೆ ನಡೆಸಿದ್ದ ಮಾತುಕತೆ ಕಿವಿಗೆ ಬಿತ್ತು. ನಮ್ಮ ಬಾಲ್ಕನಿಯಲ್ಲಿ ನಿಂತಿದ್ದ ನನ್ನ ಪತ್ನಿ ತಮ್ಮ ಮನೆಯ ಕಿಟಕಿಯಲ್ಲಿ ನಿಂತಿದ್ದ ಪಕ್ಕದ ಮನೆಯಾಕೆಯೊಡನೆ ಮಾತು ನಡೆಸಿದ್ದಳು. ಕೋತಿ ನಮ್ಮ ನೀರಿನ ಕೊಳವೆಯನ್ನು ಮುರಿದದ್ದು ಮತ್ತೆ ಅದರ ನಂತರ ಆದ ತೊಂದರೆಗಳ ಬಗೆಗೆ ಆಕೆಗೆ ವಿವರಿಸಿ "ಗಿಡ, ಹಣ್ಣು, ಕಾಯಿ ಹಾಳಾದರೆ ಪರವಾಗಿಲ್ಲ ಬಿಡಿ, ಆದರೆ ಆ ಹಾಳು ಕೋತಿಗೆ ನಮ್ಮ ಪೈಪು ಮುರಿಯುವ ಮನಸ್ಸೇಕೆ ಬಂತೋ ?" ಎಂದು ಉದ್ಗರಿಸಿ "ಯಾರಿಗೆ ಗೊತ್ತು? ಒಟ್ಟಿನಲ್ಲಿ ನಮ್ಮ 'ಪ್ರಾರಬ್ಧ ಕರ್ಮ' ಅಷ್ಟೇ" ಎಂದು ಮಾತು ಮುಗಿಸಿದಳು. ನನ್ನ 'ಕೋತಿಕೆಲಸ'ಕ್ಕೆ 'ಪ್ರಾರಬ್ಧಕರ್ಮ'ದ ಜತೆಸಿಕ್ಕಿತು!

■

---

## ಮುನ್ನೆಚ್ಚರಿಕೆ

**ಎನ್ ರಾಮನಾಥ್**

ತೇಜು ಅಂದು ತಾನೇ ಬೀದಿಯಲ್ಲಿ ನಿಂತು ಏನೇನೋ ಕೆಲಸಗಳನ್ನು ಮಾಡಿಸುತ್ತಿದ್ದ.

ಮೊದಲಿಗೆ ಆ ಇಡೀ ರಸ್ತೆಯಲ್ಲಿ ಬಿದ್ದಿದ್ದ ಜಲ್ಲಿ ಕಲ್ಲುಗಳನ್ನೂ, ಮಣ್ಣು ಹೆಂಟೆಗಳನ್ನೂ ತೆಗೆಯಿಸಿ ದೂರ ಸಾಗಿಸಿದ. ಹತ್ತಿರದ ತರಕಾರಿ ಅಂಗಡಿಗಳಿಗೆಲ್ಲಾ ಹೋಗಿ ಅಲ್ಲಿ ಸಿಕ್ಕ ಮೊಟ್ಟೆ ಹಾಗೂ ಟೊಮೆಟೊಗಳನ್ನು ಖರೀದಿಸಿದ. ಮೂಲೆಯಲ್ಲಿದ್ದ ಕಸದ ತೊಟ್ಟಿಯನ್ನು ಖುದ್ದಾಗಿ ನಿಂತು ಖಾಲಿ ಮಾಡಿಸಿ ತ್ಯಾಜ್ಯಗಳನ್ನು ಹೊರಕ್ಕೆ ರವಾನಿಸಿದ. ನೋಡುತ್ತಿದ್ದ ಜನರಿಗೆ ಅಚ್ಚರಿಯೋ ಅಚ್ಚರಿ.

"ನಿಮ್ಮ ಈ ಕೆಲಸಗಳ ಹಿಂದಿನ ಗುರಿಯೇನು?" ಎಂದರೊಬ್ಬ ಹಿರಿಯರು.

"ಮುನ್ನೆಚ್ಚರಿಕೆ ಕ್ರಮ" ಎಂದ ತೇಜು.

"ಯಾವುದಕ್ಕಾಗಿ ಮುನ್ನೆಚ್ಚರಿಕೆ?"

"ಇಂದು ಕನ್ನಡ ಬಗ್ಗೆ ಭಾಷಣವಿದೆ. ಜನತೆ ಕೈಗೆ ಸಿಕ್ಕುದನ್ನು ಎಸೆಯದಿರಲಿ ಎಂದು ಈ ಕ್ರಮ"

"ಜನ ಹಾಗೆಯೇ ನಡೆದುಕೊಳ್ಳುತ್ತಾರೆಂದು ಹೇಗೆ ಹೇಳುತ್ತೀರಿ?"

"ಆ ಭಾಷಣಕಾರ ಹೋದಲ್ಲೆಲ್ಲಾ ಹಾಗೆಯೇ ಆಗುತ್ತದೆ. ಅವನ ಭಾಷಣವೇ ಅಂತಹುದು"

"ಅಷ್ಟು ಖಾತ್ರಿಯಾಗಿ ಹೇಗೆ ಹೇಳಬಲ್ಲಿರಿ?"

"ಆ ಭಾಷಣಕಾರ ನಾನೇ" ಮೆಲ್ಲಗೆ ಉಲಿದು ತಲೆ ತಗ್ಗಿಸಿದ ತೇಜು.

# ಆದಿಯೂ ನೆಟ್ಟಿನ ಪಾಠವೂ

**ಬೆಂಶ್ರೀ ರವೀಂದ್ರ**

ಓಡುತ ಬಂದನು ಆದಿ
ಬ್ಯಾಗು ಬಾಕ್ಸು ಈ ಬದಿ
ಶೂಸು ಸಾಕ್ಸು ಆ ಬದಿ

ರಜೆ ಕೊಟ್ಟರು ಶಾಲೆಗೆ
ಹೊಂವರ್ಕಿಲ್ಲ ನಾಳೆಗೆ
ಕೊರೊನವಂತೆ ಊರಿಗೆ

ಅಪ್ಪಂದು ವರ್ಕಫ್ರಂ ಹೋಮು
ಅಮ್ಮನಾಫೀಸು ಬೀಗ ಫ್ರೇಮು
ಅಜ್ಜಿ ತಾತಂಗೆ ಪಗಡೆ ಗೇಮು

ಮಾಡುವರು ದಿನಾ ಹೊಸ ತಿಂಡಿ
ಆದಿಗೆ ತುಂಬಿದ ಹಾಲಿನ ಗಿಂಡಿ
ಕುಣಿತವು ಆಟವು ಚಿನ್ನದ ಬಂಡಿ

ಪಕ್ಕದ ಮನೆಗೆ ಹೋಗುವುದಿಲ್ಲ
ಗೆಳೆಯರು ಯಾರೂ ಬರುವಂತಿಲ್ಲ
ಬೇಸರವಂತೂ ಕಳೆಯುವುದಿಲ್ಲ

ಪರೀಕ್ಷೆ ಇಲ್ಲದೆ ಆದಿ ಪಾಸು
ಬೇಸಿಗೆ ರಜೆಗೆ ಉದ್ದನೆ ಕಾಲು
ಟೂರು ಹೋಟೆಲು ಇಲ್ಲ ಮಾಲು

ಕಟ್ಟಲೇ ಬೇಕು ಶಾಲೆಗೆ ಫೀಸು
ಮಾಡುವರಂತೆ ಜೂಮಿನ ಕ್ಲಾಸು
ಜೊತೆ ಕೂಡುವ ಅಮ್ಮನ ಪೋಸು

ನೆಟ್ಟಿನ ಕ್ಲಾಸು ಆಗದು ನೆಟ್ಟಗೆ
ಕಾಣದ ಮಿಸ್ಸು ಗಮನ ಸೊಟ್ಟಗೆ
ಫ್ರೆಂಡ್ಸಿಲ್ಲದ ಬದುಕು ಬಿಮ್ಮಗೆ

ತಲೆಗೆ ಹತ್ತದು ನೆಟ್ಟಿನ ಪಾಠ
ಮೊಬೈಲಾಟಕೆ ನೆಟ್ಟಿದೆ ನೋಟ
ಯಾಕಪ್ಪಾ ದೇವರೆ ಇಂಥಾ ಕಾಟ

ಕೊರೊನ ಹೋಗು ಬೇಗ ಬೇಗ
ಸ್ಕೂಲು ತೆರೆಯಲಿ ಬೇಗ ಬೇಗ
ಆಡೋಣ ಬಯಲಲಿ ಬೇಗ ಬೇಗ



**ಮಮ್ಮೀ...ಮೊಬೈಲ್ನಲ್ಲಿ ಸ್ಟಡಿ ಮಾಡೋಕಾಗೊಲ್ಲ...ನಂಗೂ 'ಲ್ಯಾಪ್ಟಾಪ್' ಕೊಡ್ಸು...**

■

Published on 3rd of every month
Mailed on 5th of every month
Mailed at: Bangalore P.S.O. 560026

Registered - KA / BGW - 544 / 2018 - 2020
**RNI - KAR-KAN / 2005 / 15457**

Printed by: V.R. BHARATH for the Publihser KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore - 560 003. Printed at: Ravi Graphics, 58/8, 2nd Main Road, Rajajinagar, Bangalore 560 010. Ph: 40889999/55
Editor : M. SHIVAKUMAR
No. of Pages: 40+4 APARANJI KANNADA MONTHLY.